ವಿಷಯಾನುಕ್ರಮಣಿಕೆ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫–೭ ೩೮೨೦

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕಿ)

ಬರೆದವರು:
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೩–೨೮

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್), ಬೆಂಗಳೂರು
೨೦೦೨
ದೂರವಾಣಿ: ೦೮೧೭೫–೭೩೮೨೦

ಅಧ್ಯಾತ್ಮಗ್ರಂಥಾವಳಿ

( ೧ )

ಶ್ರೀಶಂಕರಾಚಾರ್ಯ ವಿರಚಿತ

# ಸ್ವಾತ್ಮನಿರೂಪಣ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ, ಪರಿಶಿಷ್ಟ-
ಮುಂತಾದವುಗಳೊಡನೆ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಬೆಲೆ : ರೂ 30/-

ಪುಟಗಳು : 128 + VIII

ಕ್ರಮಾಂಕ ೨೩

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಬೆಂಗಳೂರು
೨೦೦೨

ಮೊದಲನೆಯ ಸಂಸ್ಕರಣ ೧೯೫೬ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೨೦೦೨ (೧೦೦೦ ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ
ತ್ಯಾಗರಾಜನಗರ ಅಂಚೆ, ಬೆಂಗಳೂರು – ೫೬೦ ೦೨೮
✆ ೬೭೬೪೬೫೦

ಮುದ್ರಣಸ್ಥಾನ :
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರ ಮಠದ ರಸ್ತೆ, ಶಂಕರ ಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧೫೨೭

# ಮುನ್ನುಡಿ

ವೇದಾಂತದರ್ಶನವು ಮಾನವನ ತಿಳಿವಳಿಕೆಯನ್ನು ಪವಿತ್ರಗೊಳಿಸಿ ಜನನ ಮರಣಪ್ರವಾಹದಿಂದ ಬಿಡುಗಡೆ ಮಾಡಿಸಿ ನಿತ್ಯಸಿದ್ಧವಾದ ಮೋಕ್ಷಪದವಿಯನ್ನು ಅಧಿಕಾರಿಯಾದ ಜಿಜ್ಞಾಸುವಿಗೆ ಅವನ ಜೀವಿತಕಾಲದಲ್ಲಿಯೇ ಅನುಭವಾರೂಢವಾಗಿ ಮಾಡಿಕೊಟ್ಟು ಮನುಷ್ಯ ಜನ್ಮವನ್ನು ಸಾರ್ಥಕಗೊಳಿಸುವ ಕಾಮಧೇನುವಾಗಿದೆ. ಈ ದರ್ಶನವನ್ನು ಕುರಿತು ರಚಿತವಾಗಿರುವ ಗ್ರಂಥಗಳಲ್ಲಿ ಶ್ರೀಶಂಕರಭಗವತ್ಪಾದರ ಕೃತಿಗಳೇ ಅತ್ಯಂತ ಪ್ರಾಚೀನವೂ ಸುಖಬೋಧವೂ ಆಗಿರುತ್ತವೆ. ಶ್ರೀಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳು ಈ ಕೃತಿಗಳಲ್ಲಿ ಕಿರೀಟಪ್ರಾಯವಾಗಿವೆ. ಆದರೆ ಗುರುಮುಖದಿಂದ ಕಲಿಯಬೇಕಾದ ಈ ಭಾಷ್ಯಗಳು ಎಲ್ಲಾ ಜಿಜ್ಞಾಸುಗಳಿಗೂ ಎಟಕುವಂತಿಲ್ಲ. ಆದ್ದರಿಂದ ಕರುಣಾಳುಗಳಾದ ಪೂಜ್ಯಭಗವತ್ಪಾದರು ಜನಸಾಮಾನ್ಯರಿಗೂ ಬ್ರಹ್ಮವಿದ್ಯೆಯು ಎಟಕುವಂತೆ ಶಾಸ್ತ್ರದ ಚೌಕಟ್ಟಿನಲ್ಲಿಯೇ ಸರಳವಾಗಿ ವೇದಾಂತಸಿದ್ಧಾಂತವು ತಿಳಿಯುವಂತೆ ಪ್ರಕರಣ ಗ್ರಂಥಗಳನ್ನೂ ಬರೆದು ಜಿಜ್ಞಾಸುಗಳನ್ನು ಅನುಗ್ರಹಿಸಿದ್ದಾರೆ. ಇಂಥ ಪ್ರಕರಣಗಳಲ್ಲಿ ಆಯ್ದ ಆರು ಕೃತಿಗಳನ್ನು ಕನ್ನಡಾನುವಾದದೊಡನೆ ಈ ಗ್ರಂಥದಲ್ಲಿ ಅಳವಡಿಸಲಾಗಿದೆ.

ಇಲ್ಲಿರುವ ಕೃತಿಗಳಿಗೆ ಬ್ರಹ್ಮೀಭೂತ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರೇ ಉಪಯುಕ್ತ ಟಿಪ್ಪಣಿಗಳೊಡನೆ ಕನ್ನಡ ಅನುವಾದವನ್ನು ಬರೆದು ಉಪಕರಿಸಿರುತ್ತಾರೆ. ವೇದಾಂತದರ್ಶನವನ್ನು ಪ್ರಪ್ರಥಮವಾಗಿ ಅಭ್ಯಾಸಮಾಡಲು ಆರಂಭಿಸುವ ಜಿಜ್ಞಾಸುಗಳಿಗೆ ಇವು ಸಹಾಯಕವಾಗಿವೆ. ಇವುಗಳನ್ನು ಪ್ರಕರಣಗಳೆಂದು ಕರೆಯಲಾಗಿದೆ. ವಾಚಕರು ಇವುಗಳನ್ನು ಅಧ್ಯಯನ ಮಾಡಿ ನಮ್ಮ ಪ್ರಯತ್ನವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಅ.ಪ್ರ.ಕಾ. ಹೊಳೆನರಸೀಪುರ<br>
ವಿಷು ಸಂವತ್ಸರ<br>
೨೮–೦೩–೨೦೦೨<br>
ಫಾಲ್ಗುಣಶುದ್ಧ ಹುಣ್ಣಿಮೆ

ಇತಿ<br>
ಪ್ರಕಾಶಕರು

# ಪೀಠಿಕೆ

## ಗ್ರಂಥಕರ್ತರ ವಿಚಾರ

ಈ ಪ್ರಕರಣವು ಶ್ರೀಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿದೆ. ಭಾಷ್ಯಪ್ರಸ್ಥಾನಗಳ ಶೈಲಿಗೂ ವಿಷಯವಿಮರ್ಶನಕ್ರಮಕ್ಕೂ ಹೋಲಿಸಿ ಗ್ರಂಥ ಕರ್ತೃವಿನ ಬಗ್ಗೆ ಓದುಗರು ಒಂದು ನಿರ್ಣಯಕ್ಕೆ ಬರಬೇಕಾಗಿದೆ.

ಗ್ರಂಥವು ಶಂಕರಾಚಾರ್ಯಕೃತವಲ್ಲವೆನ್ನುವವರಿಗೆ ಕೆಲವು ಪ್ರಮಾಣಗಳು ದೊರಕುವಂತಿವೆ. ಮೊದಲನೆಯದಾಗಿ ಇಲ್ಲಿರುವ ಪದ್ಯಗಳು ಛಂದೋವ್ಯಾಕರಣ ನಿಯಮಗಳನ್ನು ಅನುಸರಿಸದೆ ಇರುವದು ಹಲವು ಕಡೆಗಳಲ್ಲಿ ಕಾಣಬರುತ್ತದೆ. ನಿರ್ಣಯ ಸಾಗರ ಮುದ್ರಣಾಲಯದಲ್ಲಿ ಅಚ್ಚಾಗಿರುವ ಪುಸ್ತಕದ ಪೀಠಿಕೆಯನ್ನು ಬರೆದ ಪಂಡಿತವರ್ಯರು 'ಆತ್ಮತತ್ತ್ವಾನುಸಂಧಾನದಿಂದ ಸಮಾಧಿಮಗ್ನರಾಗಿದ್ದ ಆಚಾರ್ಯರು ಬರೆದದ್ದಾದ್ದರಿಂದ ಇಲ್ಲಿ ವ್ಯಾಕರಣಾದಿದೋಷಗಳನ್ನು ನೋಡಲಾಗದು' ಎಂದಿರುತ್ತಾರೆ. ಆದರೆ ಶಂಕರಭಗವತ್ಪಾದರ ಮಿಕ್ಕ ಪ್ರಕರಣಗಳಲ್ಲಿ ಇಷ್ಟೊಂದು ಸ್ಫುಟವಾಗಿ ಕಾಣಬರುವ ನ್ಯೂನತೆಗಳಿಲ್ಲದಿರಲು ಕಾರಣವೇನು ?– ಎಂದು ಪ್ರತಿವಾದಿಗಳು ಕೇಳಬಹುದಾಗಿದೆ. ಎರಡನೆಯದಾಗಿ ಗ್ರಂಥದಲ್ಲಿ ಹಲವು ಪಾಠಾಂತರಗಳಿವೆ. ಪದ್ಯವನ್ನು ನಿರ್ದುಷ್ಟವಾಗಿಸಬೇಕೆಂದು ಹಲವರು ಮಾಡಿದ ಪ್ರಯತ್ನದ ಫಲವೇ ಇದಾಗಿರಬೇಕೆಂದು ತೋರುತ್ತದೆ. ಕೊನೆಯಲ್ಲಿರುವ ಎರಡು ಪದ್ಯಗಳೊಳಗೆ ಒಂದರಲ್ಲಿ 'ಈ ಪ್ರಕರಣವನ್ನು ದಕ್ಷಿಣಾಮೂರ್ತಿಯೇ ರಚಿಸಿದನು' ಎಂದಿದೆ; ಮತ್ತೊಂದರಲ್ಲಿ 'ಶ್ರೀನಿವಾಸಗುರು ಭಾನುವು ನನ್ನ ಹೃದಯದಲ್ಲಿ ಬೆಳಗುತ್ತಿರಲಿ' ಎಂದಿದೆ; ಆದ್ದರಿಂದ ದಕ್ಷಿಣಾಮೂರ್ತಿಯ ಉಪಾಸಕನೂ ಶ್ರೀನಿವಾಸರೆಂಬವರ ಶಿಷ್ಯನೂ ಆದ ಒಬ್ಬ ಗ್ರಂಥಕಾರನ ನಿರ್ಮಾಣವಿದೆಂದು ಕಲ್ಪಿಸುವದಕ್ಕೆ ಅವಕಾಶವಿರುತ್ತದೆ. ಆದರೆ 'ದಕ್ಷಿಣಾಮೂರ್ತಿಯು ರಚಿಸಿದನು' ಎಂಬರ್ಥದ ವಾಕ್ಯಕ್ಕೆ ಪಾಠಾಂತರವೂ ಕಂಡುಬರುತ್ತದೆ. ಶ್ರೀನಿವಾಸಗುರು ಎಂದರೆ ಲಕ್ಷ್ಮೀನಾರಾಯಣನು ಎಂಬರ್ಥವನ್ನು ವ್ಯಾಖ್ಯಾನಕಾರನು ತೆಗೆದಿರುತ್ತಾನೆ. ಈ ವ್ಯಾಖ್ಯಾನಕಾರನೂ ಅಂಥ ವಿದ್ವಾಂಸನಾಗಿ ತೋರುವದಿಲ್ಲ. ಆತನು ಒಪ್ಪಿರುವ ಪಾಠಗಳಲ್ಲಿ ಹಲವು ವ್ಯಾಕರಣಾದಿ ದೋಷಗಳಿವೆ ; ಆ ದೋಷಗಳನ್ನು ಸರಿಯೆಂದು ತೋರಿಸುವದಕ್ಕೆ ಕೂಡ ಅವನು ಪ್ರಯತ್ನಿಸಿರುವದಿಲ್ಲ.

ಈ ಗ್ರಂಥದಲ್ಲಿರುವ ಆರ್ಯೆಗಳಲ್ಲಿ ಪ್ರಖ್ಯಾತರಾದ ಸದಾಶಿವಬ್ರಹ್ಮೇಂದ್ರರಿಂದ ರಚಿತವಾಗಿರುವದೆಂದು ಪ್ರಸಿದ್ಧವಾಗಿರುವ **'ಅದ್ವೈತತಾರಾವಳಿ'** ಎಂಬ ಪ್ರಕರಣದ ಆರ್ಯೆಗಳೆಲ್ಲವೂ ಅಡಕವಾಗಿವೆ. ಹೋಲಿಸಿನೋಡುವವರ ಸೌಕರ್ಯಕ್ಕಾಗಿ 'ತಾರಾವಳಿಯ' ಪಾಠವನ್ನು ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ. ಅದ್ವೈತತಾರಾವಳಿಯ ಭಾಗವಾದ ಆರ್ಯೆಗಳು ಶುದ್ಧವಾಗಿವೆ ; ಭಾವಗರ್ಭಿತವಾಗಿಯೂ ಇವೆ. ಇದರಿಂದ ಯಾವನೋ ಒಬ್ಬ ಈಚಿನ

ಗ್ರಂಥಕರ್ತನು ತನ್ನ ಗ್ರಂಥಕ್ಕೆ ಈ ಆರ್ಯೆಗಳನ್ನು ಹೆಣೆದುಕೊಂಡು ಒಂದು ನೂತನಪ್ರಕರಣವನ್ನು ರಚಿಸಿರಬಹುದು ಎಂಬ ಊಹೆಗೆ ಅವಕಾಶವು ದೊರೆಯುತ್ತದೆ. ಗ್ರಂಥದ ಎಂಬತ್ತಾರನೆಯ ಶ್ಲೋಕದಲ್ಲಿ 'ತದ್ಬುದ್ಧಿರತಸ್ಮಿನ್ನಿತಿ ಶಾಸ್ತ್ಯಮಾನತ್ವಾತ್' ಅದಲ್ಲದ್ದರಲ್ಲಿ ಅದೆಂಬ ಬುದ್ಧಿಯೇ ಅಧ್ಯಾಸವೆಂದು ಹೇಳುತ್ತಾರೆ ಎಂಬ ವಾಕ್ಯವು ಸೂತ್ರಭಾಷ್ಯದ 'ಅತಸ್ಮಿಂಸ್ತದ್ಬುದ್ಧಿಃ' ಎಂಬ ವಾಕ್ಯವನ್ನು ಆಧಾರವಾಗಿ ಹಿಡಿದಿದೆ ಎಂದು ಭಾವಿಸುವವರಿಗಂತೂ ಗ್ರಂಥಕರ್ತೃವು ಭಾಷ್ಯಕಾರರಲ್ಲವೆಂದೇ ಹೇಳಬೇಕಾಗುತ್ತದೆ.

ಇನ್ನು ವಿಷಯಪ್ರತಿಪಾದನೆಯ ಕಡೆಗೆ ತಿರುಗಿದರೆ ಶಾಸ್ತ್ರಪ್ರಾಮಾಣ್ಯಪ್ರಕರಣದಲ್ಲಿ ವೇದವು ಪರಮೇಶ್ವರಪ್ರಣೀತವೆಂಬ ನೈಯಾಯಿಕಮತವನ್ನು (ಶ್ಲೋಕ ೪೪ರಲ್ಲಿ) ಒಪ್ಪಿರುವದು ವೇದಾಂತಸಂಪ್ರದಾಯಕ್ಕೆ ವಿರುದ್ಧವಾಗಿರುತ್ತದೆ. ಪಂಚಕೋಶವಿವರಣೆಯು (೯–೧೩) ತೈತ್ತಿರೀಯಭಾಷ್ಯಕ್ಕೆ ಹೊಂದಿಕೆಯಾಗಿಲ್ಲ; ಮುಖ್ಯವಾಗಿ ವಿಜ್ಞಾನಮಯಾನಂದ ಮಯಕೋಶಗಳ ವಿವರಣೆಯು (೧೨–೧೩) ಭಾಷ್ಯಪ್ರತಿಪಾದನೆಗಿಂತ ತೀರಭಿನ್ನವಾಗಿದೆ. ಮಹಾವಾಕ್ಯದ ತತ್ತ್ವಂ ಪದಗಳ ಅರ್ಥನಿರೂಪಣೆಯ ಕ್ರಮವು (೨೫ ರಿಂದ ೩೭) ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಾಣುವ ಕ್ರಮಕ್ಕಿಂತ ಭಿನ್ನವಾಗಿದೆ. ವಸ್ತುಬೋಧಕವಾಕ್ಯವೂ ಪ್ರವೃತ್ತಿಗೆ ಕಾರಣವಾಗಿರಬಹುದೆಂಬ ಅಂಗೀಕಾರವು (೩೯, ೪೦) ಮಂಡನಮಿಶ್ರಪ್ರಸ್ಥಾನಕ್ಕೆ ಅನುಸಾರವಾಗಿದ್ದು ಭಾಷ್ಯಕ್ಕೆ ವಿರುದ್ಧವಾಗಿಯೇ ಇರುತ್ತದೆ.

ಈ ಎಲ್ಲಾ ಕಾರಣಗಳಿಂದ ಗ್ರಂಥವು ಸುಪ್ರಸಿದ್ಧಭಾಷ್ಯಕಾರರದೆಂದು ನಂಬುವದಕ್ಕೆ ಹಲವು ಅಡಚಣೆಗಳಿವೆ– ಎಂದು ಹೇಳದೆ ಗತ್ಯಂತರವಿಲ್ಲವಾಗಿದೆ.

## ಗ್ರಂಥಸಂಸ್ಕರಣ

ಪ್ರಕರಣದ ಅಭಿಪ್ರಾಯವನ್ನು ತಿಳಿದುಕೊಳ್ಳುವವರಿಗೂ ಚಿಕಿತ್ಸಾದೃಷ್ಟಿಯಿಂದ ಇದನ್ನು ಪರಿಶೀಲಿಸುವವರಿಗೂ ಅನುಕೂಲಿಸುವಂತೆ ಗ್ರಂಥವನ್ನು ಭಾಗಗಳಾಗಿ ಒಡೆದು ಆಯಾ ಭಾಗಕ್ಕೊಂದು ತಲೆಬರಹವನ್ನು ಕೊಟ್ಟಿರುತ್ತದೆ. ಶ್ಲೋಕಕ್ಕೆ ಅಲ್ಲಲ್ಲಿಯೇ ಟಿಪ್ಪಣಿಯನ್ನು ಜೋಡಿಸಿರುತ್ತದೆಯಲ್ಲದೆ ಅಡಿಯಲ್ಲಿ-ಪಾಠಾಂತರಗಳನ್ನು ಕೊಟ್ಟಿರುತ್ತದೆ. ಅಧ್ಯಾತ್ಮ ಗ್ರಂಥಾವಳಿಯ ಮಿಕ್ಕ ಗ್ರಂಥಗಳಂತೆ ಇಲ್ಲಿಯೂ ಗ್ರಂಥಸಾರ, ಪರಿಶಿಷ್ಟ, ಶ್ಲೋಕಾನುಕ್ರಮಣಿಕೆ, ಶಬ್ದಾನುಕ್ರಮಣಿಕೆ – ಇವುಗಳನ್ನೂ ಕೊಟ್ಟಿದೆ.

ಗ್ರಂಥವು ಇಷ್ಟು ಸೌಕರ್ಯಗಳೊಡನೆ ಅಚ್ಚಾಗಿರುವದು ಇದೇ ಮೊದಲು. ಮುಮುಕ್ಷುಗಳಿಗೂ ತತ್ತ್ವವಿಮರ್ಶಕರಿಗೂ ಇದರಿಂದಾಗುವ ಲಾಭವನ್ನು ಅವರವರೇ ನಿಶ್ಚಯಿಸಿಕೊಳ್ಳಬೇಕಾಗಿದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಮನ್ಮಥಸಂವತ್ಸರ, ಮಾಘ ಶುದ್ಧದ್ವಾದಶೀ — ಅನುವಾದಕ.
(೧೯೫೬)

# ವಿಷಯಾನುಕ್ರಮಣಿಕೆ


| ವಿಷಯ | ಪುಟ |
| --- | --- |
| ೧. ಗುರುನಮಸ್ಕಾರ | ೧ |
| ೨. ಅವತರಣಿಕೆ | ೧ |
| ೩. ಸಂಕ್ಷೇಪವಾಗಿ ತತ್ತ್ವಾರ್ಥ | ೨ |
| ೪. ಪಂಚಕೋಶವಿವೇಕ | ೩ |
| ೫. ಆತ್ಮನ ಪರಮಾರ್ಥಸ್ವರೂಪ | ೫ |
| ೬. ಬ್ರಹ್ಮವು ಅಪರೋಕ್ಷವಾಗಿದೆ | ೬ |
| ೭. ಆತ್ಮನಲ್ಲಿ ಉಪಾಧಿಯಿಂದಲೇ ಭೇದ | ೭ |
| ೮. ವಾಕ್ಯಾರ್ಥಚಿಂತನೆ | ೮ |
| ೯. ಮಹಾವಾಕ್ಯದ ಜ್ಞಾನದ ಫಲ | ೧೩ |
| ೧೦. ವಸ್ತುಬೋಧಕವಾಕ್ಯವೂ ಪ್ರವರ್ತಕವಾಗಬಹುದು | ೧೩ |
| ೧೧. ಗುರುವಿನ ಆವಶ್ಯಕತೆ | ೧೪ |
| ೧೨. ವೇದಪ್ರಾಮಾಣ್ಯ | ೧೪ |
| ೧೩. ವೇದಕ್ಕೆ ಅದ್ವೈತದಲ್ಲಿಯೇ ತಾತ್ಪರ್ಯ | ೧೬ |
| ೧೪. ಜೀವತ್ವವು ಸ್ವಾಭಾವಿಕವಲ್ಲ | ೧೮ |
| ೧೫. ಆತ್ಮೈಕತ್ವವೇ ಶ್ರುತಿಗಳ ತಾತ್ಪರ್ಯ | ೨೦ |
| ೧೬. ವೇದಾಂತವಾಕ್ಯಜ್ಞಾನವು ಕರ್ಮಾಂಗವಲ್ಲ | ೨೧ |
| ೧೭. ಬ್ರಹ್ಮವು ದೃಶ್ಯಸಂಬಂಧವಿಲ್ಲದ ಅದ್ವಿತೀಯಚೈತನ್ಯವೇ | ೨೨ |
| ೧೮. ಸದ್ರೂಪವಾದ ಬ್ರಹ್ಮವೇ ಜಗತ್ಕಾರಣವು | ೨೪ |
| ೧೯. ವಿವೇಕಾವಿವೇಕದಿಂದ ಬ್ರಹ್ಮದಲ್ಲಿ ಬೇರೆಬೇರೆ ಬುದ್ಧಿಗಳುಂಟಾಗುತ್ತವೆ | ೨೫ |
| ೨೦. ನಾನೆಂಬುದರ ನಿಜವಾದ ಅರ್ಥವು ಆತ್ಮನೇ | ೨೬ |
| ೨೧. ಆತ್ಮನೊಬ್ಬನೇ ಸತ್ಯ, ಮಿಕ್ಕದ್ದೆಲ್ಲವೂ ಮಾಯಿಕ | ೨೯ |
| ೨೨. ಜೀವನ್ಮುಕ್ತಿವ್ಯವಹಾರ | ೩೦ |
| ೨೩. ಗುರುಬೋಧನೆಯ ಉಪಸಂಹಾರ | ೩೧ |
| ೨೪. ಶಿಷ್ಯನ ತತ್ತ್ವಾನುಸಂಧಾನ | ೩೨ |
| ೨೫. ಅನುಸಂಧಾನದ ಉಪಸಂಹಾರ | ೪೫ |
| ೨೬. ಗ್ರಂಥದ ಉಪಸಂಹಾರ | ೪೭ |
| ಸ್ವಾತ್ಮನಿರೂಪಣದ ಸಾರ | ೪೯ |
| ಪರಿಶಿಷ್ಟ : ಅದ್ವೈತತಾರಾವಳಿ | ೫೩ |
| ಶ್ಲೋಕಾನುಕ್ರಮಣಿಕೆ | ೫೫ |
| ಶಬ್ದಾನುಕ್ರಮಣಿಕೆ | ೫೮ |

# ಸಂಕೇತಗಳ ವಿವರಣೆ

| | | |
|---|---|---|
| ತೈ. | = | ತೈತ್ತಿರೀಯೋಪನಿಷತ್ತು |
| ಭಾ.ಭಾ. | = | ಭಾಷ್ಯಭಾಗ |
| ಬ್ರ.ಸೂ.ಭಾ. | = | ಬ್ರಹ್ಮಸೂತ್ರಭಾಷ್ಯ |
| ಛಾಂ | = | ಛಾಂದೋಗ್ಯೋಪನಿಷತ್ತು |
| ಬೃ. | = | ಬೃಹದಾರಣ್ಯಕೋಪನಿಷತ್ತು |
| ಮುಂ. | = | ಮುಂಡಕೋಪನಿಷತ್ತು |
| ಪಾ. | = | ಪಾಠಾಂತರ |
| ಗೀ. | = | ಭಗವದ್ಗೀತೆ |

|| ಓಮ್ ||

# ಸ್ವಾತ್ಮನಿರೂಪಣಮ್

## ೧. ಗುರುನಮಸ್ಕಾರ

**ಶ್ರೀಗುರುಚರಣದ್ವನ್ದ್ವಂ ವನ್ದೇಽಹಂ ಮಥಿತದುಃಸಹದ್ವನ್ದ್ವಮ್ ।**

**ಭ್ರಾನ್ತಿಗ್ರಹೋಪಶಾನ್ತಿಂ ಪಾಂಸುಮಯಂ ಯಸ್ಯ ಭಸಿತಮಾತನುತೇ ॥೧॥**

೧. ಸಹಿಸುವದಕ್ಕೆ ಕಷ್ಟವಾದ ದ್ವಂದ್ವವನ್ನು ನಾಶಗೊಳಿಸುವ ಶ್ರೀಗುರುಚರಣಯುಗಲವನ್ನು ನಾನು ನಮಸ್ಕರಿಸುತ್ತೇನೆ. ಆ ಚರಣಯುಗಲದ ಧೂಳಿಯ ರೂಪದಲ್ಲಿರುವ ಭಸ್ಮವು ಭ್ರಾಂತಿಯೆಂಬ ಗ್ರಹದ ನಾಶವನ್ನು ಮಾಡುವದಾಗಿರುತ್ತದೆ.[1]

**ದೇಶಿಕವರಂ ದಯಾಲುಂ ವನ್ದೇಽಹಂ ನಿಹಿತನಿಖಿಲಸಂದೇಹಮ್ ।**

**ಯಚ್ಚರಣದ್ವಯಮದ್ವಯಮನುಭವಮುಪದಿಶತಿ ತತ್ಪದಸ್ಯಾರ್ಥಮ್ ॥೨॥**

೨. ಯಾವಾತನ ಪಾದದ್ವಯವು ತತ್ಪದದ[2] ಅರ್ಥವಾದ ಅದ್ವೈತಾನುಭವವನ್ನು ಉಪದೇಶಮಾಡುತ್ತದೆಯೋ ಆ ದಯಾಮಯನಾದ ಸಕಲ ಸಂಶಯಗಳನ್ನೂ ಬಗೆಹರಿಸುವ ಗುರುಶ್ರೇಷ್ಠನನ್ನು ನಮಸ್ಕರಿಸುತ್ತೇನೆ.

## ೨. ಅವತರಣಿಕೆ

**ಸಂಸಾರದಾವಪಾವಕಸಂತಪ್ತಃ ಸಕಲಸಾಧನೋಪೇತಃ ।**

**ಸ್ವಾತ್ಮನಿರೂಪಣನಿಪುಣೈರ್ವಾಕ್ಯೈಃ ಶಿಷ್ಯಃ ಪ್ರಬೋಧ್ಯತೇ ಗುರುಣಾ ॥೩॥**

---

1. ಮಂತ್ರಿಸಿದ ಭಸ್ಮವು ಸೋಂಕಿದಕೂಡಲೆ ಗ್ರಹಾವಿಷ್ಟರಾದವರಿಗೆ ಭೂತೋಚ್ಚಾಟನೆಯಾಗಿ ಸ್ವಾಸ್ಥ್ಯವು ಬರುವಂತೆ ಗುರುವಿನ ಪಾದಧೂಳಿಯು ತಲೆಗೆ ತಾಕಿದ ಕೂಡಲೆ ದ್ವೈತಭ್ರಾಂತಿಯು ನಾಶವಾಗುವದೆಂದು ಭಾವ. ಗುರುವಿನ ಅನುಗ್ರಹದಿಂದಲೇ ಅಜ್ಞಾನವು ತೊಲಗುವದೆಂದು ಇಲ್ಲಿ ಸೂಚಿಸಿರುತ್ತದೆ.

2. ತತ್ಪದದ ಅರ್ಥವು ಬ್ರಹ್ಮವು, ಮಹಾವಾಕ್ಯದ ಅರ್ಥವು ಅದ್ವೈತಾನುಭವವು – ಎಂಬುದು ಸಿದ್ಧಾಂತವು. ಇಲ್ಲಿ ತತ್ಪದದ ಅರ್ಥವನ್ನೇ ಅದ್ವೈತಾನುಭವವೆಂದು ಹೇಳಿರುವದು ತತ್ಪದದ ಅರ್ಥವನ್ನು ತಿಳಿಸಿಕೊಟ್ಟು ಆ ಮೂಲಕ ಅದ್ವೈತಾನುಭವವನ್ನು ಕೊಡುವದು ಸದ್ಗುರುವಿನ ಅನುಗ್ರಹವೆಂದು ಸೂಚಿಸುವದಕ್ಕಿರಬಹುದು.

೩. ಸಂಸಾರದ ಕಾಡುಗಿಚ್ಚಿನಿಂದ ಬೆಂದು (ಜ್ಞಾನಕ್ಕೆ ಬೇಕಾದ) ಎಲ್ಲಾ ಸಾಧನಗಳಿಂದಲೂ ಒಡಗೂಡಿರುವವನಾಗಿರುವ ಶಿಷ್ಯನಿಗೆ ಗುರುವು ತನ್ನ ಆತ್ಮನನ್ನು ಅರಿಯುವದಕ್ಕೆ ತಕ್ಕ ವಾಕ್ಯಗಳಿಂದ (ಈ ರೀತಿಯಲ್ಲಿ) ಬೋಧೆಮಾಡುತ್ತಾನೆ.

**ಟಿಪ್ಪಣಿ :–** ಅಧಿಕಾರಿಯಾದವನಿಗೆ ಮಾತ್ರ ಸದ್ಗುರುವಿನ ಉಪದೇಶದಿಂದ ಆತ್ಮಾನುಭವವುಂಟಾಗುತ್ತದೆ. ಮುಮುಕ್ಷುವಾಗಿರುವದು, ವಿವೇಕ, ವೈರಾಗ್ಯ, ಶಮದಮಾದಿಗಳಿಂದ ಕೂಡಿರುವದು – ಎಂಬ ಯೋಗ್ಯತೆಯನ್ನೇ ಜ್ಞಾನಕ್ಕೆ ಅಧಿಕಾರವೆಂದು ವ್ಯವಹರಿಸುತ್ತಾರೆ.

## ೩. ಸಂಕ್ಷೇಪವಾಗಿ ತತ್ತ್ವಾರ್ಥ

**ಅಸ್ತಿ ಸ್ವಯಮಿತ್ಯಸ್ಮಿನ್ನರ್ಥೇ ಕಸ್ಯಾಸ್ತಿ ಸಂಶಯಃ ಪುಂಸಃ ।**
**ಅತ್ರಾಪಿ ಸಂಶಯಶ್ಚೇತ್ ಸಂಶಯಿತಾ ಯಸ್ಸ ಏವ ಭವಸಿ ತ್ವಮ್ ॥ ೪ ॥**

೪. ಆತ್ಮನು ಇದಾನೆ ಎಂಬ ವಿಷಯದಲ್ಲಿ ಯಾವ ಮನುಷ್ಯನಿಗೆ ತಾನೆ ಸಂಶಯವಿದೆ ? ಇದರಲ್ಲಿಯೂ ಸಂಶಯವಿರುವದಾದರೆ, ಸಂಶಯಮಾಡುವವನು ಯಾರೋ ಅವನೇ ನೀನು.

**ನಾಹಮಿತಿ ವೇತ್ತಿ ಯೋಽಸೌ ಸತ್ಯಂ ಬ್ರಹ್ಮೈವ ವೇತ್ತಿ ನಾಸ್ತೀತಿ ।**
**ಅಹಮಸ್ಮೀತಿ ವಿಜಾನನ್ ಬ್ರಹ್ಮೈವಾಸೌ ಸ್ವಯಂ ವಿಜಾನಾತಿ ॥ ೫ ॥**

೫. ನಾನಿಲ್ಲವೆಂದು ಯಾವನು ಅರಿಯುವನೋ ಅವನು ಬ್ರಹ್ಮವನ್ನೇ ಇಲ್ಲವೆಂದು ಅರಿಯುತ್ತಾನೆ ; ನಾನಿರುವೆನೆಂದು ಅರಿಯುವಾತನು ಬ್ರಹ್ಮವನ್ನೇ ಅರಿಯುತ್ತಾನೆ.

**ಬ್ರಹ್ಮ ತ್ವಮೇವ ತಸ್ಮಾನ್ನಾಹಂ ಬ್ರಹ್ಮೇತಿ ಮೋಹಮಾತ್ರಮಿದಮ್ ।**
**ಮೋಹೇನ ಭವತಿ ಭೇದಃ ಕ್ಲೇಶಾಃ ಸರ್ವೇ ಭವನ್ತಿ ತನ್ಮೂಲಾಃ ॥ ೬ ॥**

೬. ಆದ್ದರಿಂದ ನೀನೇ ಬ್ರಹ್ಮವು. ನಾನು ಬ್ರಹ್ಮವಲ್ಲ ಎಂಬಿದು ಭ್ರಾಂತಿಮಾತ್ರವೇ. ಭ್ರಾಂತಿಯಿಂದಲೇ ಭೇದವಾಗಿರುತ್ತದೆ ; ಆ ಮೂಲಕವೇ ಸಕಲಕ್ಲೇಶಗಳೂ ಉಂಟಾಗುತ್ತವೆ.

**ಟಿಪ್ಪಣಿ :–** ಅದ್ವೈತಾನುಭವವು ಸ್ವತಃಸಿದ್ಧವಾಗಿದ್ದರೂ ಭ್ರಾಂತಿಯಿಂದ ನಾನು ಬ್ರಹ್ಮವಲ್ಲ – ಎಂದು ಜನರು ತಿಳಿಯುತ್ತಿರುವರು ಎಂಬುದು ಈ ಖಂಡದ ಅಭಿಪ್ರಾಯವು. ಆತ್ಮನು ನಿಶ್ಚಿತಸಾಕ್ಷಿಚೈತನ್ಯಸ್ವರೂಪನಾಗಿರುವದರಿಂದ ಅವನು ಇದಾನೆಯೊ, ಇಲ್ಲವೊ – ಎಂದು

ಸಂದೇಹಪಡುವದಕ್ಕಾಗುವದಿಲ್ಲ. ಈ ಚೈತನ್ಯಸ್ವರೂಪವೇ ಬ್ರಹ್ಮವು ; ಅದು ಬ್ರಹ್ಮವಲ್ಲವೆಂದು ಭ್ರಾಂತಿಯಿಂದ ತಿಳಿಯುವಾಗಲೂ ಬ್ರಹ್ಮವೇ ಆಗಿರುತ್ತದೆ, ಅದು ಬ್ರಹ್ಮವೆಂದು ತಿಳಿದರೆ ಸಂಸಾರಕ್ಲೇಶವು ತೊಲಗುವದು.

## ೪. ಪಂಚಕೋಶವಿವೇಕ

**ನ ಕ್ಲೇಶಪಞ್ಚಕಮಿದಂ ಭಜತೇ ಕೃತಕೋಶಪಞ್ಚಕವಿವೇಕಃ ।**
**ಅತ ಏವ ಪಞ್ಚಕೋಶಾನ್ ಕುಶಲಧಿಯಃ ಸನ್ತತಂ ವಿಚಿನ್ವನ್ತಿ ॥೭॥**

೭. ಪಂಚಕೋಶಗಳ ವಿವೇಚನೆಯನ್ನು ಮಾಡಿಕೊಂಡಿರುವಾತನು ಈ ಪಂಚಕ್ಲೇಶಗಳನ್ನು ಪಡೆಯುವದಿಲ್ಲ. ಆದ್ದರಿಂದ ಜಾಣರಾದವರು ಪಂಚಕೋಶಗಳನ್ನು ಯಾವಾಗಲೂ ಶೋಧನೆಮಾಡುತ್ತಿರುವರು.

**ಟಿಪ್ಪಣಿ :–** ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ– ಎಂಬಿವು **ಐದು ಕ್ಲೇಶಗಳು.** ಅನಿತ್ಯವೂ ಅಶುಚಿಯೂ ದುಃಖರೂಪವೂ ಆಗಿರುವ ಅನಾತ್ಮವನ್ನು ನಿತ್ಯವೆಂದೂ ಶುಚಿಯೆಂದೂ ಸುಖರೂಪವೆಂದೂ ಆತ್ಮನೆಂದೂ ತಿಳಿಯುವದು ಅವಿದ್ಯೆಯು. ನೋಡುವ ಆತ್ಮಚೈತನ್ಯವನ್ನೂ ನೋಡುವದಕ್ಕೆ ಬೇಕಾದ ಶಕ್ತಿಯಾದ ಅಂತಃಕರಣವನ್ನೂ ಕಲೆಬೆರಕೆಮಾಡಿಕೊಳ್ಳುವದು ಅಸ್ಮಿತೆಯು. ಸುಖವನ್ನು ಬೆನ್ನಟ್ಟುವದು ರಾಗವು. ದುಃಖದಿಂದ ಹಿಮ್ಮೆಟ್ಟುವದು ದ್ವೇಷವು. ಎಂಥ ತಿಳಿವಳಿಕೆಯುಳ್ಳವನಿಗಾದರೂ ಹೀಗೆ ಆಗಬೇಕೆಂದು ಪಟ್ಟುಹಿಡಿಯುವಂತೆ ಆಗಿರುವ ಅಭಿಮಾನವು ಅಭಿನಿವೇಶವು. ಇವನ್ನು ಯೋಗಸೂತ್ರದಲ್ಲಿ ವಿವರಿಸಿರುತ್ತದೆ. ಈ ಪಂಚಕ್ಲೇಶಗಳು ಪಂಚಕೋಶವಿವೇಕವುಳ್ಳಾತನಿಗೆ ಆಗುವದಿಲ್ಲವೆಂದು ಗ್ರಂಥಕರ್ತೃವಿನ ಆಶಯವು.

**ಅನ್ನಪ್ರಾಣಮನೋ ವಿಜ್ಞಾನಾನನ್ದಪಞ್ಚಕೋಶಾನಾಮ್ ।**
**ಏಕೈಕಾನ್ತರಭಾಜಾಂ ಭವತಿ ವಿವೇಕಾತ್ಪ್ರಕಾಶತಾಮಾತ್ಮಾ[1] ॥೮॥**

೮. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ – ಎಂಬ ಒಂದರೊಳಗೊಂದು ಇದ್ದುಕೊಂಡಿರುವ ಐದು ಕೋಶಗಳ ವಿವೇಕದಿಂದ ಆತ್ಮನು ಪ್ರಕಾಶನಾಗುವನು.

---

1. "ಪ್ರಕಾಶ್ಯತಾಮ್" ಎಂದು ಟೀಕಾಸಂಮತವಾದ ಪಾಠ ; ಇಲ್ಲಿರುವದು ಅ॥ ಪಾಠ.

ಟಿಪ್ಪಣಿ :– ಈ ಕೋಶಗಳನ್ನೇ ಒಂದೊಂದು ಸ್ಥಿತಿಯಲ್ಲಿ ನಾವು ಆತ್ಮನೆಂದು ತಿಳಿದುಕೊಂಡಿರುತ್ತೇವೆ. ಇವುಗಳನ್ನು ಅನಾತ್ಮವೆಂದು ವಿಂಗಡಿಸಿಕೊಳ್ಳಲಾಗಿ ನಿಜವಾದ ಆತ್ಮನು ತಿಳಿಯಬರುತ್ತಾನೆ.

**ವಪುರಿದಮನ್ನಮಯಾಖ್ಯಃ ಕೋಶೋ ನಾತ್ಮಾ ಜಡೋ ಘಟಪ್ರಾಯಃ ।**
**ಪ್ರಾಗುತ್ಪತ್ತೇಃ ಪಶ್ಚಾತ್ ತದಭಾವಸ್ಯಾಪಿ ದೃಶ್ಯಮಾನತ್ವಾತ್ ॥ ೯ ॥**

೯. ಅನ್ನಮಯಕೋಶವೆಂಬ ಈ ಶರೀರವು ಆತ್ಮನಲ್ಲ. ಏಕೆಂದರೆ ಗಡಿಗೆಯಂತೆ ಜಡವಾಗಿರುತ್ತದೆ. ಹುಟ್ಟುವದಕ್ಕೆ ಮೊದಲೂ ನಾಶವಾದಮೇಲೂ ಇದು ಇಲ್ಲವೆಂಬುದೂ ಅನುಭವಕ್ಕೆ ಕಂಡುಬರುತ್ತದೆ.

ಟಿಪ್ಪಣಿ :– ಇಲ್ಲಿ ಶರೀರವು ಹುಟ್ಟುವದಕ್ಕೆ ಮುಂಚೆಯೂ ನಾಶವಾದಮೇಲೂ ಅದು ಇಲ್ಲವೆಂಬುದು ಹೇಗೆ ಅನುಭವಕ್ಕೆ ಬರುವದೆಂಬುದು ಸ್ಪಷ್ಟ ವಾಗಿಲ್ಲ.

**ಕೋಶಃ ಪ್ರಾಣಮಯೋಽಯಂ ವಾಯುವಿಶೇಷೋ ವಪುಷ್ಯವಚ್ಛಿನ್ನಃ ।**
**ಅಸ್ಯ ಕಥಮಾತ್ಮತಾ ಸ್ಯಾತ್ ಕ್ಷುತ್ತೃಷ್ಣಾಭ್ಯಾಮುಪೇಯುಷಃ ಪೀಡಾಮ್ ॥೧೦॥**

೧೦. ಶರೀರದಲ್ಲಿಯೇ ಕ್ಲಿಪ್ತವಾಗಿದ್ದುಕೊಂಡಿರುವ ವಾಯು ವಿಶೇಷವೇ ಪ್ರಾಣವಾಯುವೆಂಬ ಕೋಶವು. ಹಸಿವುಬಾಯಾರಿಕೆಗಳಿಂದ ಸಂಕಟ ವನ್ನು ಅನುಭವಿಸುತ್ತಿರುವ ಇದು ಹೇಗೆ ಆತ್ಮನಾದೀತು ?

**ಕುರುತೇ ವಪುಷ್ಯಹನ್ತಾಂ ಗೇಹಾದೌ ಯಃ ಕರೋತಿ ಮಮತಾಂ ಚ ।**
**ರಾಗದ್ವೇಷವಿಧೇಯೋ ನಾಸಾವಾತ್ಮಾ ಮನೋಮಯಃ ಕೋಶಃ ॥ ೧೧ ॥**

೧೧. ಶರೀರದಲ್ಲಿ ನಾನೆಂಬ ಅಭಿಮಾನವನ್ನೂ ಮನೆಯೇ ಮುಂತಾದವುಗಳಲ್ಲಿ ನನ್ನದೆಂಬ ಅಭಿಮಾನವನ್ನೂ ಮಾಡಿಕೊಂಡಿರುವದಾಗಿ ರಾಗದ್ವೇಷಗಳಿಗೆ ಅಡಿಯಾಳಾಗಿರುವ ಈ ಮನೋಮಯಕೋಶವೂ ಆತ್ಮನಲ್ಲ.

**ಸುಪ್ತೌ ಸ್ವಯಂ ವಿಲೀನಾ ಬೋಧೇ ವ್ಯಾಪ್ತಾ ಕಲೇವರಂ ಸಕಲಮ್ ।**
**ವಿಜ್ಞಾನಶಬ್ದವಾಚ್ಯಾ ಚಿತ್ಪ್ರತಿಬಿಂಬಾ ನ ಬುದ್ಧಿರಪ್ಯಾತ್ಮಾ ॥ ೧೨ ॥**

೧೨. ಸುಷುಪ್ತಿಯಲ್ಲಿ ತಾನು ಅಡಗಿಕೊಳ್ಳುತ್ತಿರುವದಾಗಿಯೂ ಎಚ್ಚರದಲ್ಲಿ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುವದಾಗಿಯೂ ಇರುವ ಚೈತನ್ಯ

ಪ್ರತಿಬಿಂಬದೊಡನೆ ಕೂಡಿರುವ[1] ವಿಜ್ಞಾನಶಬ್ದವಾಚ್ಯವಾದ ಬುದ್ಧಿಯೂ ಆತ್ಮನಲ್ಲ.

**ಸುಪ್ತಿಗತೈಃ ಸುಖಲೇಶೈರಭಿಮನುತೇ ಯಃ ಸುಖೀ ಭವಾಮೀತಿ ।**
**ಆನನ್ದಕೋಶನಾಮಾ ಸೋऽಹಂಕಾರಃ ಕಥಂ ಭವೇದಾತ್ಮಾ ॥ ೧೩ ॥**

೧೩. ಸುಷುಪ್ತಿಯಲ್ಲಿರುವ ಸಣ್ಣಸಣ್ಣ ಸುಖಗಳಿಂದ ನಾನು ಸುಖಿಯಾಗಿರುವೆನೆಂದು ಅಭಿಮಾನಪಡುತ್ತಿರುವ ಆನಂದಕೋಶವೆಂಬ ಹೆಸರಿನ ಈ ಅಹಂಕಾರವು ಹೇಗೆತಾನೆ ಆತ್ಮನಾದೀತು ?

**ಟಿಪ್ಪಣಿ** :– ಇಲ್ಲಿಯವರೆಗೆ ವರ್ಣಿಸಿರುವ ಪಂಚಕೋಶವಿವರವನ್ನು ತೈತ್ತಿರೀಯೋಪನಿಷತ್ತಿನಲ್ಲಿರುವ ವರ್ಣನೆಗೆ ಹೋಲಿಸಿ ನೋಡಿರಿ.

## ೫. ಆತ್ಮನ ಪರಮಾರ್ಥಸ್ವರೂಪ

**ಯಃ ಸ್ಫುರತಿ ಬಿಮ್ಬಭೂತಃ ಸ ಭವೇದಾನನ್ದ ಏವ ಸಕಲಾತ್ಮಾ ।**
**ಪ್ರಾಗೂರ್ಧ್ವಮಪಿ ಚ ಸತ್ತ್ವಾದವಿಕಾರಿತ್ವಾದಬಾಧ್ಯಮಾನತ್ವಾತ್ ॥೧೪॥**

೧೪. ಬಿಂಬವಾಗಿ ಯಾವದು ಕಾಣಿಸಿಕೊಳ್ಳುತ್ತಿರುವದೋ ಆ ಆನಂದವೇ ಸರ್ವರ ಆತ್ಮವಾಗಿರುವದು. ಏಕೆಂದರೆ ಅದು ಮೊದಲೂ ಆಮೇಲೂ ಇರುತ್ತದೆ, ವಿಕಾರವಿಲ್ಲದ್ದಾಗಿರುತ್ತದೆ ; ಮತ್ತು ಬಾಧಿಸಲ್ಪಡದೆ ಇರುತ್ತದೆ.

**ಟಿಪ್ಪಣಿ** :– ಹಿಂದೆ ಹೇಳಿದ ಚಿತ್ಪ್ರತಿಬಿಂಬಕ್ಕೆ ಬಿಂಬವಾಗಿರುವ ಆನಂದರೂಪವೇ ಆತ್ಮನು ಎಂಬುದು ಆಶಯವೆಂದು ತೋರುತ್ತದೆ. 'ಮೊದಲೂ ಆಮೇಲೂ' ಎಂದರೆ ಅನ್ನಮಯಾದಿಗಳ ಉತ್ಪತ್ತಿಯಾಗುವ ಮೊದಲೂ ನಾಶವಾದ ಮೇಲೂ ಎಂಬರ್ಥವನ್ನು ವ್ಯಾಖ್ಯಾನದಲ್ಲಿ ಕೊಟ್ಟಿದೆ. ಆದರೆ ಇದಕ್ಕೆ ಅನುಭವದ ಆಧಾರವನ್ನೇನೂ ಅಲ್ಲಿ ಕೊಟ್ಟಿರುವದಿಲ್ಲ.

**ಅನ್ನಮಯಾದೇರಸ್ಮಾದಪರಂ ಯದಿ ನಾನುಭೂಯತೇ ಕಿಂಚಿತ್ ।**
**ಅನುಭವಿತಾನ್ನಮಯಾದೇರಸ್ತೀತ್ಯಸ್ಮಿನ್ನ ಕಶ್ಚಿದಪಲಾಪಃ ॥ ೧೫ ॥**

---

1.'ಚಿತ್ಪ್ರತಿಬಿಮ್ಬೋ' ಎಂಬ ಪಾಠಕ್ಕಿಂತ 'ಚಿತ್ಪ್ರತಿಬಿಮ್ಬಾ' ಎಂಬುದೇ ಉತ್ತಮವೆಂದು ತೋರುತ್ತದೆ ; ಏಕೆಂದರೆ ವಿಜ್ಞಾನವೇ ಚಿತ್ಪ್ರತಿಬಿಂಬವಲ್ಲ, ಅದು ಚಿದಾಭಾಸದಿಂದ ಕೂಡಿರುತ್ತದೆ.

೧೫. ಈ ಅನ್ನಮಯವೇ ಮುಂತಾದ ಕೋಶಗಳಿಗಿಂತ ಬೇರೆ ಯಾವದೊಂದೂ ಅನುಭವಕ್ಕೆ ತೋರುವದಿಲ್ಲವಲ್ಲ !– ಎಂದರೆ ಅನ್ನಮಯಾದಿಗಳನ್ನು ಅನುಭವಿಸುವವನು ಇದಾನೆಂಬ ವಿಷಯದಲ್ಲಿ ಯಾವ ಪ್ರತಿಷೇಧವೂ ಇಲ್ಲವಷ್ಟೆ ?

**ಸ್ವಯಮೇವಾನುಭವತ್ವಾದ್ಯದ್ಯಪ್ಯೇತಸ್ಯ ನಾನುಭಾವ್ಯತ್ವಮ್ ।**
**ಸಕೃದಪ್ಯಭಾವಶಙ್ಕಾ ನ ಭವೇದ್ಬೋಧಸ್ವರೂಪಸತ್ತಾಯಾಃ ॥ ೧೬ ॥**

೧೬. ತಾನೇ ಅನುಭವರೂಪವಾಗಿರುವದರಿಂದ ಇದು ಅನುಭವಿಸಲ್ಪಡತಕ್ಕದ್ದಲ್ಲವೆಂಬುದು ನಿಜವಾದರೂ ಜ್ಞಾನಸ್ವರೂಪವಾದ ಇರವು ಇಲ್ಲವೆಂಬ ಶಂಕೆಯು ಒಂದು ಸಲವಾದರೂ ಉಂಟಾಗಲಾರದು.

**ಅನುಭವತಿ ವಿಶ್ವಮಾತ್ಮಾ ವಿಶ್ವೇನಾಸೌ ನ ಚಾನುಭೂಯೇತ ।**
**ನ ಖಲು ಪ್ರಕಾಶ್ಯತೇಽಸೌ ವಿಶ್ವಮಶೇಷಂ ಪ್ರಕಾಶಯನ್ ಭಾನುಃ ॥ ೧೭ ॥**

೧೭. ಆತ್ಮನು ಎಲ್ಲವನ್ನೂ ಅನುಭವಿಸುತ್ತಾನೆ ; ಆದರೆ ಅವನು ಏತರಿಂದಲೂ ಅನುಭವಿಸಲ್ಪಡಲಾರನು. ಪ್ರಪಂಚವೆಲ್ಲವನ್ನೂ ಬೆಳಗುವ ಈ ಸೂರ್ಯನು ಏತರಿಂದಲೂ ಬೆಳಗಲ್ಪಡುವದಿಲ್ಲವಷ್ಟೆ ?

## ೬. ಬ್ರಹ್ಮವು ಅಪರೋಕ್ಷವಾಗಿದೆ

***ತದಿದಂ ತಾದೃಶಮೀದೃಶಮೇತಾವತ್ತಾವದಿತಿ ಚ ಯನ್ನ ಭವೇತ್ ।**
**ಬ್ರಹ್ಮ ತದಿತ್ಯವಧೇಯಂ ನೋ ಚೇದ್ವಿಷಯೋ ಭವೇತ್ಪರೋಕ್ಷಂ ಚ ॥೧೮॥**

೧೮. ಅದು ಇದು, ಅಂಥದ್ದು ಇಂಥದ್ದು, ಅಷ್ಟು ಇಷ್ಟು – ಎಂದು ಯಾವದನ್ನು ಹೇಳಲಾಗುವದಿಲ್ಲವೋ ಅದೇ ಬ್ರಹ್ಮವೆಂದು ತಿಳಿಯಬೇಕು. ಹಾಗಿಲ್ಲದಿದ್ದರೆ ಅದು ವಿಷಯವಾಗಿಯೂ ಪರೋಕ್ಷವಾಗಿಯೂ ಆಗುವದು.

***ಇದಮಿದಮಿತಿ ಪ್ರತೀತೇ ವಸ್ತುನಿ ಸರ್ವತ್ರ ಬಾಧ್ಯಮಾನೇಽಪಿ ।**
**ಅನಿದಮಬಾಧ್ಯಂ ತತ್ತ್ವಂ ಸತ್ತ್ವಾದೇತಸ್ಯ ನ ಚ ಪರೋಕ್ಷತ್ವಮ್ ॥ ೧೯ ॥**

೧೯. 'ಇದು, 'ಇದು'– ಎಂದು ತೋರುವ ವಸ್ತುವೆಲ್ಲವೂ ಬಾಧಿತ

---

ಹೀಗೆ ಗುರುತುಹಾಕಿರುವ ಪದ್ಯಗಳು ಶ್ರೀಸದಾಶಿವೇಂದ್ರರ 'ಅದ್ವೈತತಾರಾವಳಿ' ಎಂಬ ಗ್ರಂಥಕ್ಕೆ ಸೇರಿರುತ್ತವೆ. ಪೀಠಿಕೆಯನ್ನು ನೋಡಿ.

ವಾದರೂ ಇದು ಎಂದು ಹೇಳುವದಕ್ಕೆ ಅರ್ಹವಲ್ಲದೆ ಬಾಧಿತವಾಗದೆ ಇರುವ ತತ್ತ್ವವು ಇರುವದು ; ಏಕೆಂದರೆ ಅದು-ಯಾವಾಗಲೂ ಇದ್ದುಕೊಂಡೇ ಇರುವದು. ಇದು ಪರೋಕ್ಷವೂ ಅಲ್ಲ.

**ಟಿಪ್ಪಣಿ**:– ಗಡಿಗೆ, ಮನೆ – ಎಂದು ಮುಂತಾಗಿ ಬೇರೆಬೇರೆಯ ವಿಷಯಗಳನ್ನು ನಾವು ಅರಿಯುವಾಗ ಗಡಿಗೆ ಮುಂತಾದವುಗಳು ಅಲ್ಲಲ್ಲಿಯೇ ಇದ್ದುಕೊಂಡಿರುತ್ತವೆ ; ಅವುಗಳಲ್ಲಿ 'ಇರವು' ಎಲ್ಲಾ ಕಡೆಯಲ್ಲಿಯೂ ಯಾವಾಗಲೂ ಇದ್ದುಕೊಂಡಿರುವದು. ಆದ್ದರಿಂದ ಸತ್ಯತ್ವವೇ ಮುಂತಾದವುಗಳಿಂದ ತೋರಿಬರುವ ಬ್ರಹ್ಮವು ಪರಮಾರ್ಥವು ಮತ್ತು ಅಪರೋಕ್ಷ ವಾಗಿಯೂ ಇರುವದು – ಎಂದಭಿಪ್ರಾಯ. ಈ ವಿಚಾರಸರಣಿಯನ್ನು **ಗೀತಾಭಾಷ್ಯ** (೨–೧೬)ಕ್ಕೆ ಹೋಲಿಸಿ ನೋಡಿರಿ.

**ನಾವೇದ್ಯಮಪಿ ಪರೋಕ್ಷಂ ಭವತಿ ಬ್ರಹ್ಮ ಸ್ವಯಂಪ್ರಕಾಶತ್ವಾತ್ ।**
**ಸತ್ಯಂ ಜ್ಞಾನಮನನ್ತಂ ಬ್ರಹ್ಮೇತ್ಯೇತಸ್ಯ ಲಕ್ಷಣಂ ಪ್ರಥತೇ ॥ ೨೦ ॥**

೨೦. ಬ್ರಹ್ಮವು ಅರಿಯಲ್ಪಡತಕ್ಕದ್ದಲ್ಲವಾದರೂ ಪರೋಕ್ಷವಾಗುವ ದಿಲ್ಲ, ಏಕೆಂದರೆ ಅದು ಸ್ವಯಂಪ್ರಕಾಶರೂಪವಾಗಿರುತ್ತದೆ. ಇದಕ್ಕೆ ''ಸತ್ಯಂ ಜ್ಞಾನಮನ್ತಂ ಬ್ರಹ್ಮ'' (ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು) ಎಂಬ (ತೈ.೨–೧) ಲಕ್ಷಣವು ಪ್ರಸಿದ್ಧವಾಗಿರುತ್ತದೆ.

**ಟಿಪ್ಪಣಿ**:– ಜ್ಞಾನಕ್ಕೆ ವಿಷಯವಾಗದಿದ್ದರೆ ಪರೋಕ್ಷವಾಗಿರಬೇಕೆಂಬ ನಿಯಮವೇನೂ ಇಲ್ಲ; ಬ್ರಹ್ಮವು ಜ್ಞಾನದ ತಿರುಳೇ ಆಗಿರುವದರಿಂದ ಅದು ಪ್ರಕಾಶರೂಪವಾಗಿ ನಮ್ಮಲ್ಲಿಯೇ ಅಪರೋಕ್ಷವಾಗಿ ತೋರುತ್ತದೆ ಎಂದು ಭಾವ.

## ೭. ಆತ್ಮನಲ್ಲಿ ಉಪಾಧಿಯಿಂದಲೇ ಭೇದ

**ಸತಿ ಕೋಶಶಕ್ತ್ಯುಪಾಧೌ ಸಂಭವತಸ್ತಸ್ಯ ಜೀವತೇಶ್ವರತೇ ।**
**ನೋ ಚೇತ್ತಯೋರಭಾವಾದ್ವಿಗತವಿಶೇಷಂ ವಿಭಾತಿ ನಿಜರೂಪಮ್ ॥ ೨೧ ॥**

೨೧.. ಕೋಶ, ಶಕ್ತಿ – ಎಂಬ ರೂಪದ ಉಪಾಧಿಯು ಇದ್ದರೆ ಅವಕ್ಕೆ ಜೀವತ್ವವೂ ಈಶ್ವರತ್ವವೂ ಸಂಭವಿಸುತ್ತವೆ. ಇಲ್ಲದಿದ್ದರೆ ಅವುಗಳು ಇಲ್ಲದ್ದರಿಂದ ಯಾವ ವಿಶೇಷವೂ ಇಲ್ಲದೆ ತನ್ನ ರೂಪದಿಂದಲೇ ಅದು ತೋರುತ್ತಿರುವದು.

**ಸತಿ ಸಕಲದೃಶ್ಯಬಾಧೇ ನ ಕಿಮಪ್ಯಸ್ತೀತಿ ಲೋಕಸಿದ್ಧಂ ಚೇತ್ ।**
**ಯನ್ನ ಕಿಮಪೀತಿ ಸಿದ್ಧಂ ಬ್ರಹ್ಮ ತದೇವೇತಿ ವೇದತಃ ಸಿದ್ಧಮ್ ॥ ೨೨ ॥**

೨೨. ಸಕಲದೃಶ್ಯವೂ ಅಲ್ಲಗಳೆದುಹೋಗಲಾಗಿ ಯಾವದೊಂದೂ ಇರುವದಿಲ್ಲವೆಂದು ಲೋಕಸಿದ್ಧವಾಗಿದೆಯಲ್ಲ!– ಎಂದರೆ ಯಾವದೊಂದೂ ಇಲ್ಲ ಎಂದು ಯಾವದು ಸಿದ್ಧವಾಗಿದೆಯೋ ಅದೇ ಬ್ರಹ್ಮವೆಂದು ವೇದಸಿದ್ಧವಾಗಿರುತ್ತದೆ.

ಟಿಪ್ಪಣಿ :– ಯಾವ ಉಪಾಧಿಗಳೂ ಇಲ್ಲದಿರುವಾಗ ಉಪಾಧಿಗಳ ಅಭಾವಕ್ಕೂ ಸಾಕ್ಷಿಯಾಗಿರುವದು ಬ್ರಹ್ಮವು ಎಂಬುದು ಅಭಿಪ್ರಾಯವಿರಬಹುದು.

## ೮. ವಾಕ್ಯಾರ್ಥಚಿಂತನೆ

**ಏವಮಪಿ ವಿರಹಿತಾನಾಂ[1] ತತ್ವಮಸೀತ್ಯಾದಿವಾಕ್ಯಚಿನ್ತನಯಾ ।**
**ಪ್ರತಿಭಾತ್ಯೇಷ ಪರೋಕ್ಷವದಾತ್ಮಾ ಪ್ರತ್ಯಕ್ಪ್ರಕಾಶಮಾನೋಽಪಿ ॥ ೨೩ ॥**

೨೩. ಹೀಗಿದ್ದರೂ ಒಳಗೇ ಅಪರೋಕ್ಷವಾಗಿ ಬೆಳಗುತ್ತಿರುವನಾದರೂ ಆತ್ಮನು 'ತತ್ತ್ವಮಸಿ' ಮುಂತಾದ ವಾಕ್ಯಚಿಂತನೆಯಿಲ್ಲದವರಿಗೆ ಪರೋಕ್ಷವಾಗಿರುವಂತೆಯೇ ತೋರುತ್ತಾನೆ.

ಟಿಪ್ಪಣಿ :– ಏವಮಪಿ– ಹೀಗಿದ್ದರೂ ಎಂದರೆ ಪಂಚಕೋಶವಿಚಾರಯುಕ್ತರಾದವರಿಗೂ ಎಂಬರ್ಥವನ್ನು ವ್ಯಾಖ್ಯಾನದಲ್ಲಿ ತೆಗೆದಿದೆ. ಹೀಗೆ ಯಾವಾಗಲೂ ಸ್ವಯಂಪ್ರಕಾಶನಾದರೂ ಎಂಬರ್ಥವೇ ಪ್ರಕೃತಕ್ಕೆ ಹೊಂದುವದೆಂದು ತೋರುತ್ತದೆ.

**ತಸ್ಮಾತ್ಪದಾರ್ಥಶೋಧನಪೂರ್ವಂ[2] ವಾಕ್ಯಸ್ಯ ಚಿನ್ತಯನ್ನರ್ಥಮ್ ।**
**ದೇಶಿಕದಯಾಪ್ರಭಾವಾದಪರೋಕ್ಷಯತಿ ಕ್ಷಣೇನ ಚಾತ್ಮಾನಮ್ ॥೨೪॥**

೨೪. ಆದ್ದರಿಂದ ಪದಾರ್ಥಶೋಧನಪೂರ್ವಕವಾಗಿ ವಾಕ್ಯದ ಅರ್ಥವನ್ನು ಚಿಂತಿಸುತ್ತಿದ್ದವನು ಗುರುವಿನ ದಯೆಯ ಪ್ರಭಾವದಿಂದ ಕ್ಷಣಮಾತ್ರದಲ್ಲಿ ಆತ್ಮನನ್ನು ಅಪರೋಕ್ಷಮಾಡಿಕೊಳ್ಳುವನು.

ಟಿಪ್ಪಣಿ :– 'ಆದ್ದರಿಂದ' ಎಂದರೆ ಕೇವಲ ಅಜ್ಞಾನದಿಂದ ಮಾತ್ರ ಪರೋಕ್ಷನಾಗಿ ತೋರುವದರಿಂದ. ವಾಕ್ಯಾರ್ಥಕ್ಕೆ ವಾಕ್ಯದ ಪದಗಳ ಅರ್ಥಗಳನ್ನು ಸರಿಯಾಗಿ ತಿಳಿದುಕೊಳ್ಳುವದು ಅತ್ಯವಶ್ಯವು.

**ದೇಹೇನ್ದ್ರಿಯಾದಿಧರ್ಮಾನಾತ್ಮನ್ಯಾರೋಪಯನ್ನಭೇದೇನ ।**
**ಕರ್ತೃತ್ವಾದ್ಯಭಿಮಾನೀ ಬೋಧಃ ಸ್ಯಾತ್ತ್ವಂಪದಸ್ಯ ವಾಚ್ಯೋಽರ್ಥಃ ॥ ೨೫ ॥**

1. 'ಏವಂಮತಿರಹಿತಾನಾಂ' (ಈ ತಿಳಿವಳಿಕೆಯಿಲ್ಲದವರಿಗೆ) ಎಂಬುದೊಂದು ಪಾ॥

2. 'ಶೋಧನಪೂರ್ವಕವಾಕ್ಯಸ್ಯ' ಎಂಬ ಪಾಠಾಂತರಕ್ಕಿಂತ ಇದೇ ಉತ್ತಮಪಾಠವು.

೨೫. ದೇಹ, ಇಂದ್ರಿಯಗಳು – ಮುಂತಾದವುಗಳ ಧರ್ಮಗಳನ್ನು ಆತ್ಮನಲ್ಲಿ ಅಭೇದದಿಂದ ಹುಟ್ಟುಗಟ್ಟಿಕೊಂಡು ಕರ್ತೃತ್ವವೇ ಮುಂತಾದವುಗಳಲ್ಲಿ ಅಭಿಮಾನವಿಟ್ಟಿರುವ ಅರಿವೇ ತ್ವಂಪದಕ್ಕೆ ವಾಚ್ಯಾರ್ಥವೆನಿಸುವದು.

**ದೇಹಾಹನ್ತೇನ್ದ್ರಿಯಾಣಾಂ[1] ಸಾಕ್ಷೀ ತೇಭ್ಯೋ ವಿಲಕ್ಷಣತ್ವೇನ ।**
**ಪ್ರತಿಭಾತಿ ಯೋಽವಬೋಧಃ ಪ್ರೋಕ್ತೋಽಸೌ ತ್ವಂಪದಸ್ಯ ಲಕ್ಷ್ಯೋಽರ್ಥಃ ॥**

೨೬. ದೇಹ, ಅಹಂಕಾರ, ಇಂದ್ರಿಯಗಳು – ಇವುಗಳಿಗೆ ಸಾಕ್ಷಿಯಾಗಿ ಇವುಗಳಿಗಿಂತ ಬೇರೆಯಾಗಿ ಯಾವ ಅರಿವು ಉಂಟಾಗುವದೋ ಅದು ತ್ವಂಪದಕ್ಕೆ ಲಕ್ಷ್ಯಾರ್ಥವೆನಿಸುತ್ತದೆ.

ಟಿಪ್ಪಣಿ :– ಅನಾತ್ಮವಿಶಿಷ್ಟವಾಗಿ 'ನೀನು' ಎಂದು ಹೇಳಲ್ಪಡುವದೇ ವಾಚ್ಯಾರ್ಥವು, ಕೇವಲ ಸಾಕ್ಷಿಚೈತನ್ಯವೇ 'ನೀನು' ಎಂಬ ಪದದ ಲಕ್ಷ್ಯಾರ್ಥವು.

**ವೇದಾವಸಾನವಾಚಾ ಸಂವೇದ್ಯಂ ಸಕಲಜಗದುಪಾದಾನಮ್ ।**
**ಸರ್ವಜ್ಞತ್ವಾದ್ಯುಪೇತಂ ಚೈತನ್ಯಂ ತತ್ಪದಸ್ಯ ವಾಚ್ಯೋಽರ್ಥಃ ॥ ೨೭ ॥**

೨೭. ವೇದಾಂತವಾಕ್ಯದಿಂದ ಅರಿಯಲ್ಪಡತಕ್ಕದ್ದಾಗಿಯೂ ಸಕಲ ಜಗತ್ಕಾರಣವಾಗಿಯೂ ಸರ್ವಜ್ಞತ್ವಾದಿಗಳಿಂದ ಕೂಡಿದ್ದಾಗಿಯೂ ಇರುವ ಚೈತನ್ಯವು ತತ್ಪದಕ್ಕೆ ವಾಚ್ಯಾರ್ಥವು.

**ವಿವಿಧೋಪಾಧಿವಿಮುಕ್ತಂ ವಿಶ್ವಾತೀತಂ ವಿಶುದ್ಧಮದ್ವೈತಮ್ ।**
**ಅಕ್ಷರಮನುಭವವೇದ್ಯಂ ಚೈತನ್ಯಂ ತತ್ಪದಸ್ಯ ಲಕ್ಷ್ಯೋಽರ್ಥಃ ॥ ೨೮ ॥**

೨೮. ಎಲ್ಲಾ ಬಗೆಯ ಉಪಾಧಿಗಳಿಂದಲೂ ರಹಿತವಾಗಿ ಜಗತ್ತನ್ನು ಮೀರಿ ಅತ್ಯಂತಶುದ್ಧವಾಗಿ ಎರಡನೆಯದಿಲ್ಲದೆ ನಾಶರಹಿತವಾದ ಅನುಭವಕ್ಕೆ ಮಾತ್ರ ತಿಳಿದುಬರುವ ಚೈತನ್ಯವು ತತ್ಪದಕ್ಕೆ ಲಕ್ಷ್ಯಾರ್ಥವು.

**ಟಿಪ್ಪಣಿ** :– ಜಗತ್ಕಾರಣತ್ವವೇ ಮುಂತಾದ ಉಪಾಧಿಯಿಂದ ಕೂಡಿರುವದು ವಾಚ್ಯಾರ್ಥವು, ಉಪಾಧಿಶೂನ್ಯವಾಗಿರುವದು ಲಕ್ಷ್ಯಾರ್ಥವು. ತತ್ಪದಾರ್ಥದ ವಿಷಯದಲ್ಲಿ ಬ್ರ.ಸೂ.ಭಾ. ೪–೧–೨ (ಭಾ. ಭಾ. ೫೦೬) ಇವೇ ಮುಂತಾದ ಕಡೆಗಳಲ್ಲಿ ಹೇಳಿರುವದನ್ನು ಇದಕ್ಕೆ ಹೋಲಿಸಿ ನೋಡಬೇಕು.

---

1. "ದೇಹಸ್ಯ ಚೇನ್ದ್ರಿಯಾಣಾಮ್" ಎಂಬ ಪಾಠವೂ ಉಂಟು. ಅದು ಛಂದಸ್ಸಿಗೆ ಅನುಗುಣವಾಗಿದೆ.

**ಸಾಮಾನಾಧಿಕರಣ್ಯಂ ತದನು ವಿಶೇಷಣವಿಶೇಷ್ಯತಾ ಚೇತಿ ।**
**ಅಥ ಲಕ್ಷ್ಯ ಲಕ್ಷಕತ್ವಂ ಭವತಿ ಪದಾರ್ಥಾತ್ಮನಾಂ ಚ ಸಂಬನ್ಧಃ ॥೨೯॥**

೨೯. ಸಾಮಾನಾಧಿಕರಣ್ಯ, ವಿಶೇಷಣವಿಶೇಷ್ಯಭಾವ, ಲಕ್ಷ್ಯಲಕ್ಷಕ ಭಾವ – ಹೀಗೆ ಕ್ರಮವಾಗಿ ಪದ, ಪದಾರ್ಥ, ಆತ್ಮ – ಇವುಗಳಿಗೆ ಮೂರು ಸಂಬಂಧವಿರುವದು.

ಟಿಪ್ಪಣಿ :– ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿರಿ.

**ಏಕತ್ರ ವೃತ್ತಿರರ್ಥೇ ಶಬ್ದಾನಾಂ ಭಿನ್ನವೃತ್ತಿಹೇತೂನಾಮ್ ।**
**ಸಾಮಾನಾಧಿಕರಣ್ಯಂ ಭವತೀತ್ಯೇವಂ ವದನ್ತಿ ಲಾಕ್ಷಣಿಕಾಃ ॥೩೦॥**

೩೦. ಬೇರೆಬೇರೆ ಪ್ರವೃತ್ತಿನಿಮಿತ್ತಗಳುಳ್ಳ ಶಬ್ದಗಳು ಒಂದೇ ವಸ್ತುವಿನಲ್ಲಿ ವರ್ತಿಸುವದೇ ಸಾಮಾನಾಧಿಕರಣ್ಯವಾಗುವದೆಂದು ಲಾಕ್ಷಣಿಕರು ಹೇಳುತ್ತಾರೆ.

**ಟಿಪ್ಪಣಿ** :–ಸಾಮಾನಾಧಿಕರಣ್ಯ – ಎಂದರೆ ಒಂದೇ ಅಧಿಕರಣ ಅಥವಾ ಆಶ್ರಯವುಳ್ಳವಾಗಿರುವಿಕೆ – ಎಂದು ಅಕ್ಷರಾರ್ಥ. ಕನ್ನೈದಿಲೆ ಎಂಬ ಸಮಸ್ತಪದದಲ್ಲಿ ಕರಿದು, ನೈದಿಲೆ ಎಂಬ ಎರಡು ಶಬ್ದಗಳಿವೆ ; ಇವುಗಳಲ್ಲಿ ಕರಿದು ಎಂಬುದು ಕಪ್ಪೆಂಬ ಗುಣವುಳ್ಳ ವಸ್ತುವನ್ನು ಹೇಳುವದು. ನೈದಿಲೆಯೆಂಬುದು ಒಂದಾನೊಂದು ಹೂವನ್ನು ಹೇಳುವದು. ಹೀಗೆ ಬೇರೆಬೇರೆ ಅರ್ಥವುಳ್ಳ ಎರಡು ಶಬ್ದಗಳು ಒಂದೇ ವಸ್ತುವಾದ ಕನ್ನೈದಿಲೆಯನ್ನು ಹೇಳುವದಕ್ಕೆ ಬಂದಿರುವದರಿಂದ ಇದು ಕರಿದು, ನೈದಿಲೆ – ಎಂಬೀ ಶಬ್ದಗಳ ಸಾಮಾನಾಧಿಕರಣ್ಯವಾಯಿತು.

**ಪ್ರಾತ್ಯಕ್ಷ್ಯಂ ಪಾರೋಕ್ಷ್ಯಂ ಪರಿಪೂರ್ಣತ್ವಂ ಚ ಸದ್ವಿತೀಯತ್ವಮ್[1] ।**
**ಇತರೇತರಂ ವಿರುದ್ಧಂ ತತ ಇಹ[2] ಭವಿತವ್ಯಮೇವ ಲಕ್ಷಣಯಾ ॥ ೩೧ ॥**

೩೧. ಪ್ರತ್ಯಕ್ಷತ್ವ, ಪರೋಕ್ಷತ್ವ ; ಪರಿಪೂರ್ಣತ್ವ, ಸದ್ವಿತೀಯತ್ವ – ಇವು ಒಂದಕ್ಕೊಂದು ವಿರುದ್ಧವಾಗಿರುವ ಧರ್ಮಗಳು. ಆದ್ದರಿಂದ ಇಲ್ಲಿ ಲಕ್ಷಣೆಯೇ ಆಗಬೇಕು.

1. ''ಪ್ರತ್ಯಕ್ಷಪರೋಕ್ಷತ್ವಂ ಪರಿಪೂರ್ಣತ್ವಸದ್ವಿತೀಯಮ್'' ಎಂಬ ನಿ॥ ಪಾಠಕ್ಕಿಂತ ಈ ಪಾಠವೇ ಮೇಲು ; ''ಪ್ರತ್ಯಕ್ಪರೋಕ್ಷತ್ವೇ'' ಎಂಬ ವಾ॥ ಪಾಠಕ್ಕೆ ಒಳಗಿರುವ ಮತ್ತು ಪರೋಕ್ಷವಾಗಿರುವ ಎಂದು ಅರ್ಥ.

2. ''ನ ತದಿಹ'' ಎಂಬ ಪಾಠಕ್ಕಿಂತ ಈ ಮ॥ ಪಾಠವು ಉತ್ತಮ.

**ಟಿಪ್ಪಣಿ :–** ಈಗ ಮಹಾವಾಕ್ಯದಲ್ಲಿ ಪದಗಳ ಲಕ್ಷ್ಯಾರ್ಥವನ್ನೇ ಏತಕ್ಕೆ ತೆಗೆದುಕೊಳ್ಳಬೇಕೆಂಬುದನ್ನು ಹೇಳುತ್ತಾರೆ. ಆತ್ಮನು ಪ್ರತ್ಯಕ್ಷನು, ಬ್ರಹ್ಮವು ಪರೋಕ್ಷವು ; ಆತ್ಮನು ಸದ್ವಿತೀಯನು, ಬ್ರಹ್ಮವು ಪರಿಪೂರ್ಣವು. ಹೀಗೆ ಒಂದಕ್ಕೊಂದು ವಿರುದ್ಧವಾದ ಎರಡು ಪದಾರ್ಥಗಳನ್ನು ಹೇಳುವ ತ್ವಮ್ ಮತ್ತು ತತ್ ಎಂಬ ಶಬ್ದಗಳಿಗೆ ಸಾಮಾನಾಧಿಕರಣ್ಯವಾಗಲಾರದು. ಆದರೆ ಶ್ರುತಿಯು ಸಾಮಾನಾಧಿಕರಣ್ಯದಿಂದ 'ತತ್ ತ್ವಮಸಿ' ಎಂದು ಹೇಳುತ್ತಿರುವದರಿಂದ ಈ ಪದಗಳಿಗೆ ಲಕ್ಷಣಾರ್ಥವನ್ನೇ ತೆಗೆದುಕೊಳ್ಳಬೇಕೆಂದು ಸಿದ್ಧವಾಗುತ್ತದೆ.

**ಮಾನಾನ್ತರೋಪರೋಧಾ[1] ನ್ಮುಖ್ಯಾರ್ಥಸ್ಯಾಪರಿಗ್ರಹೇ ಜಾತೇ ।**
**ಮುಖ್ಯಾವಿನಾಕೃತೇಽರ್ಥೇ ಯಾ ವೃತ್ತಿಃ ಸೈವ ಲಕ್ಷಣಾ ಪ್ರೋಕ್ತಾ ॥ ೩೨ ॥**

೩೨. ಮತ್ತೊಂದು ಪ್ರಮಾಣಕ್ಕೆ ವಿರೋಧವಾದ್ದರಿಂದ ಮುಖ್ಯಾರ್ಥವನ್ನು ತೆಗೆದುಕೊಳ್ಳಬಾರದೆಂದಾಗಿರುವಲ್ಲಿ ಮುಖ್ಯಾರ್ಥಕ್ಕೆ ಸಂಬಂಧಪಟ್ಟಿರುವ ಅರ್ಥದಲ್ಲಿ ಇರುವ ಶಬ್ದವೃತ್ತಿಯೇ ಲಕ್ಷಣೆಯೆನಿಸುತ್ತದೆ.

**ನಿಖಿಲಮಪಿ ವಾಚ್ಯಮರ್ಥಂ ತ್ಯಕ್ತ್ವಾ ವೃತ್ತಿಸ್ತದನ್ವಿತೇಽನ್ಯಾರ್ಥೇ ।**
**ಜಹತೀತಿ ಲಕ್ಷಣಾ ಸ್ಯಾದ್ಗಙ್ಗಾಯಾಂ ಘೋಷವದತ್ರ ನ ಗ್ರಾಹ್ಯಾ[2] ॥ ೩೩ ॥**

೩೩. ವಾಚ್ಯಾರ್ಥವನ್ನೆಲ್ಲ ಬಿಟ್ಟು ಅದಕ್ಕೆ ಸಂಬಂಧಪಟ್ಟ ಮತ್ತೊಂದು ಅರ್ಥದಲ್ಲಿ ವರ್ತಿಸುವದು ಜಹಲ್ಲಕ್ಷಣೆ ಎನಿಸುವದು. ಇದಕ್ಕೆ 'ಗಂಗೆಯಲ್ಲಿ ಹಳ್ಳಿ' ಎಂಬುದೇ ಉದಾಹರಣೆ. ಅದನ್ನು ಇಲ್ಲಿ ಗ್ರಹಿಸುವ ಹಾಗಿಲ್ಲ.

**ಟಿಪ್ಪಣಿ :–** ತತ್ ತ್ವಮ್ ಎಂಬ ಎರಡು ಪದಗಳಲ್ಲಿ ಯಾವದೊಂದಕ್ಕೂ ವಾಚ್ಯಾರ್ಥವನ್ನು ಪೂರ ಬಿಟ್ಟು ಮತ್ತೊಂದು ಅರ್ಥವನ್ನು ಸ್ವೀಕರಿಸುವಹಾಗಿಲ್ಲ.

**ವಾಚ್ಯಾರ್ಥಮತ್ಯಜನ್ತ್ಯಾ ಯಸ್ಯಾ ವೃತ್ತೇಃ ಪ್ರವೃತ್ತಿರನ್ಯಾರ್ಥೇ ।**
**ಇಯಮಜಹತೀತಿ ಕಥಿತಾ ಶೋಣೋ ಧಾವತಿವದತ್ರ ನ ಗ್ರಾಹ್ಯಾ ॥ ೩೪ ॥**

೩೪. ವಾಚ್ಯಾರ್ಥವನ್ನು ಬಿಡದೆ ಯಾವ ವೃತ್ತಿಯು ಮತ್ತೊಂದು ಪದಾರ್ಥದಲ್ಲಿ ವರ್ತಿಸುವದೋ ಅದಕ್ಕೆ ಅಜಹಲ್ಲಕ್ಷಣೆ ಎಂದು ಹೆಸರು ಕೊಟ್ಟಿದ್ದಾರೆ. 'ಕೆಂಪು ಓಡುತ್ತಿದೆ' ಎಂಬುದು ಉದಾಹರಣೆ. ಅದೂ ಇಲ್ಲಿ ಗ್ರಾಹ್ಯವಲ್ಲ.

1. "ಮಾನಾನ್ತರೋಪರೋಧೇ" ನಿ॥

2. "ಇತಿವದತ್ರ ನ ಗ್ರಾಹ್ಯಾ" ಎಂಬ ನಿ॥ ಪಾಠವೂ "ಘೋಷವದಿಹ" ಎಂಬ ವಾ॥ ಪಾಠಗಳೂ ಈ ಪಾಠದಂತೆಯೇ ಛಂದಸ್ಸಿಗೆ ಹೊಂದುಗಡೆಯಾಗಿಲ್ಲ.

**ಟಿಪ್ಪಣಿ** :– 'ಶೋಣೋ ಧಾವತಿ' (ಕೆಂಪು ಓಡುತ್ತಿದೆ) ಎಂದರೆ ಕೆಂಪು ಕುದುರೆ ಓಡುತ್ತಿದೆ ಎಂದರ್ಥ. ಇಲ್ಲಿ ಕೆಂಪು ಎಂಬ ವಾಚ್ಯಾರ್ಥವನ್ನು ಸೇರಿಸಿಕೊಂಡೇ ಕುದುರೆಯನ್ನು ಕೆಂಪುಶಬ್ದವು ಹೇಳುತ್ತಿದೆ. ಆದರೆ ತ್ವಮ್‌ಶಬ್ದಕ್ಕೆ ಹೀಗೆ ವಾಚ್ಯಾರ್ಥವನ್ನು ಇಟ್ಟುಕೊಂಡರೆ ವಾಕ್ಯಾರ್ಥವು ವಿರುದ್ಧವಾಗುವದೆಂದು ಆಗಲೆ ಹೇಳಿದ್ದಾಗಿದೆ.

**ಜಹದಜಹತೀತಿ ಸಾ ಸ್ಯಾದ್ಯಾ ವಾಚ್ಯಾರ್ಥೈಕದೇಶಮಪಹಾಯ ।**
**ಬೋಧಯತಿ ಚೈಕದೇಶಂ ಸೋऽಯಂ ದ್ವಿಜ ಇತಿವದಾಶ್ರಯೇದೇನಾಮ್ ॥೩೫॥**

೩೫. ವಾಚ್ಯಾರ್ಥದಲ್ಲಿ ಸ್ವಲ್ಪಭಾಗವನ್ನು ಬಿಟ್ಟು ಒಂದು ಭಾಗವನ್ನು ಯಾವದು ತಿಳಿಸುವದೋ ಅದು ಜಹದಜಹಲ್ಲಕ್ಷಣೆ ಎನಿಸುವದು. ಇದಕ್ಕೆ 'ಈತನೇ ಆ ದ್ವಿಜನು' ಎಂಬುದು ಉದಾಹರಣೆ. ಇದನ್ನು ಇಲ್ಲಿ ಆಶ್ರಯಿಸಬೇಕು.

**ಟಿಪ್ಪಣಿ** :– ತತ್ ಎಂಬುದರ ವಾಚ್ಯಾರ್ಥದಲ್ಲಿ ವಿರುದ್ಧವಾದ ಅಂಶವನ್ನು ಬಿಟ್ಟು ೨೬ನೆಯ ಪದ್ಯದಲ್ಲಿ ಹೇಳಿರುವಂತೆ ಲಕ್ಷ್ಯಾರ್ಥವನ್ನು ತೆಗೆದುಕೊಳ್ಳಬೇಕು. ತ್ವಪದಕ್ಕೆ ಹೀಗೆಯೇ ಒಂದು ಭಾಗವಾಗಿ ೨೮ನೆಯ ಪದ್ಯದಲ್ಲಿ ಹೇಳಿದರ್ಥವನ್ನು ತೆಗೆದುಕೊಳ್ಳಬೇಕು. ಈಗ ಇವೆರಡಕ್ಕೂ ಸಾಮಾನಾಧಿಕರಣ್ಯವು ಹೊಂದುವದರಿಂದ ಇದೇ ವಾಕ್ಯಾರ್ಥವು.

**ಸೋऽಯಂ ದ್ವಿಜ ಇತಿ ವಾಕ್ಯಂ ತ್ಯಕ್ತ್ವಾऽಪರೋಕ್ಷಪರೋಕ್ಷದೇಶಾದ್ಯಮ್[1] ।**
**ದ್ವಿಜಮಾತ್ರಲಕ್ಷಕತ್ವಾತ್ ಕಥಯತ್ಯೈಕ್ಯಂ ಪದಾರ್ಥಯೋರುಭಯೋಃ ॥೩೬॥**

೩೬. 'ಈತನೇ ಆ ದ್ವಿಜನು' ಎಂಬ ವಾಕ್ಯವು ಪ್ರತ್ಯಕ್ಷಪರೋಕ್ಷ ದೇಶವೇ ಮುಂತಾದವುಗಳನ್ನು ಬಿಟ್ಟು ಬರಿಯ ದ್ವಿಜನನ್ನೇ ತೋರಿಸುವದರಿಂದ ಎರಡು ಪದಾರ್ಥಗಳ ಐಕ್ಯವನ್ನು ಹೇಳುತ್ತದೆ.

**ತದ್ವತ್ ತತ್ತ್ವಮಸೀತಿ ತ್ಯಕ್ತ್ವಾ ಪ್ರತ್ಯಕ್ಪರೋಕ್ಷತಾದೀನಿ ।**
**ಚಿದ್ವಸ್ತು ಲಕ್ಷಯಿತ್ವಾ ಬೋಧಯತಿ ಸ್ಪಷ್ಟಮಸಿಪದೇನೈಕ್ಯಮ್ ॥ ೩೭ ॥**

೩೭. ಅದರಂತೆ ತತ್ತ್ವಮಸಿ ಎಂಬ ವಾಕ್ಯವೂ ಪ್ರತ್ಯಕ್ತ್ವ, ಪರೋಕ್ಷತ್ವ ಮುಂತಾದವುಗಳನ್ನು ಬಿಟ್ಟು ಚೈತನ್ಯವಸ್ತುವನ್ನು ಮಾತ್ರ ತೋರಿಸಿಕೊಟ್ಟು 'ಅಸಿ' ಎಂಬ ಪದದಿಂದ ಐಕ್ಯವನ್ನು ಹೇಳುತ್ತದೆ.

---

1. "ಪ್ರತ್ಯಕ್ಷಪರೋಕ್ಷದೇಶಾದ್ಯಮ್" ಪಾ ॥

ಟಿಪ್ಪಣಿ :– ''ಪರೋಕ್ಷಾಪರೋಕ್ಷತಾದೀನಿ'' ಎಂಬುದಕ್ಕಿಂತ ಇಲ್ಲಿಟ್ಟುಕೊಂಡಿರುವ ಪಾಠವೇ ಮೇಲು. ಆತ್ಮನ ಪ್ರತ್ಯಕ್ತ್ವ, ಎಂದರೆ ಒಳಗಿರುವದು ; ಬ್ರಹ್ಮನ ಪರೋಕ್ಷತ್ವ – ಮುಂತಾದವುಗಳನ್ನು ಬಿಟ್ಟು ಎಂದು ಅರ್ಥ.

## ೯. ಮಹಾವಾಕ್ಯದ ಜ್ಞಾನದ ಫಲ

**ಇತ್ಥಂ ಬೋಧಿತಮರ್ಥಂ ಮಹತಾ ವಾಕ್ಯೇನ ದರ್ಶಿತೈಕ್ಯೇನ ।**
**ಅಹಮಿತ್ಯಪರೋಕ್ಷಯತಾಂ ವೇದೋ ವೇದಯತಿ ವೀತಶೋಕತ್ವಮ್॥೩೮॥**

೩೮. ಹೀಗೆ ಮಹಾವಾಕ್ಯವು ಐಕ್ಯವನ್ನು ತೋರಿಸಿ ತಿಳಿಸಿಕೊಟ್ಟಿರುವ ಅರ್ಥವನ್ನು 'ಅದೇ ನಾನು' ಎಂದು ಅಪರೋಕ್ಷವಾಗಿಸಿಕೊಂಡವರು ಶೋಕವಿಲ್ಲದವರಾಗುವರೆಂದು ವೇದವು ಹೇಳುತ್ತದೆ.

## ೧೦. ವಸ್ತುಬೋಧಕವಾಕ್ಯವೂ ಪ್ರವರ್ತಕವಾಗಬಹುದು

**ಪ್ರಾಯಃಪ್ರವರ್ತಕತ್ವಂ ವಿಧಿವಚಸಾಂ ಲೋಕವೇದಯೋರ್ದೃಷ್ಟಮ್ ।**
**ಸಿದ್ಧಂ ಬೋಧಯತೋಽರ್ಥಂ ಕಥಮೇತದ್ಭವತಿ[1] ತತ್ತ್ವಮಸ್ಯಾದೇಃ ॥೩೯॥**

**ವಿಧಿರೇವ ನ ಪ್ರವೃತ್ತಿಂ ಜನಯತ್ಯಭಿಲಷಿತವಸ್ತುಬೋಧೋಽಪಿ ।**
**ರಾಜಾ ಯಾತಿ[2] ಸುತೋಽಭೂದಿತಿ ಬೋಧೇನ ಪ್ರವರ್ತತೇ ಲೋಕಃ ॥೪೦॥**

೩೯–೪೦. (ಆಕ್ಷೇಪ) : ಲೌಕಿಕವಾಕ್ಯಗಳಲ್ಲಾಗಲಿ ವೇದವಾಕ್ಯಗಳಲ್ಲಾಗಲಿ ಸಾಮಾನ್ಯವಾಗಿ **ವಿಧಿವಾಕ್ಯ**ಗಳೇ ಪ್ರವರ್ತಕವಾಗುವವೆಂಬುದು ಕಂಡುಬಂದಿರುತ್ತದೆ. ಸಿದ್ಧರೂಪವಾದ ವಸ್ತುವನ್ನು ತಿಳಿಸುವ ''ತತ್ತ್ವಮಸಿ'' ಮುಂತಾದ ವಾಕ್ಯಕ್ಕೆ ಇದು ಹೇಗೆ ಸರಿಯಾದೀತು ?

(ಸಮಾಧಾನ) : ವಿಧಿವಾಕ್ಯವೇ ಪ್ರವರ್ತನೆಯನ್ನುಂಟುಮಾಡುವದೆಂಬ ನಿಯಮವೇನೂ ಇಲ್ಲ. ಇಷ್ಟವಸ್ತುವಿನ ಅರಿವೂ ಪ್ರವರ್ತಕವಾಗಬಹುದು. ಹೇಗೆಂದರೆ, 'ರಾಜನು ಹೋಗುತ್ತಿದ್ದಾನೆ', 'ಮಗನು ಹುಟ್ಟಿದನು' ಎಂಬ ಅರಿವಿನಿಂದ ಜನರು ಕಾರ್ಯದಲ್ಲಿ ತೊಡಗುತ್ತಾರೆ.

1. 'ಕಥಮಿವ ತದ್ಭವತಿ' ಎಂದು ಅ॥.

2. 'ರಾಜಾ ಭವತಿ' ಎಂಬ ನಿ॥ ಪಾಠಕ್ಕಿಂತ ಇದು ಉತ್ತಮವೆಂದು ತೋರುತ್ತದೆ.

ಟಿಪ್ಪಣಿ :– ಈ ವಿಚಾರವು ಇಲ್ಲಿ ಏತಕ್ಕೆ ಬಂತೆಂಬುದು ತಿಳಿಯಲಿಲ್ಲ. ಇದು ಸಿದ್ಧಾಂತಕ್ಕೆ ವಿರುದ್ಧವಾಗಿಯೂ ಇದೆ. ಪೀಠಿಕೆಯನ್ನು ನೋಡಿರಿ.

## ೧೧. ಗುರುವಿನ ಆವಶ್ಯಕತೆ

***ಐಕ್ಯಪರೈಃ ಶ್ರುತಿವಾಕ್ಯೈರಾತ್ಮಾ ಶಶ್ವತ್ಪ್ರಕಾಶ್ಯಮಾನೋಽಪಿ ।**
**ದೇಶಿಕದಯಾವಿಹೀನೈರಪರೋಕ್ಷಯಿತುಂ ನ ಶಕ್ಯತೇ ಪುರುಷೈಃ ॥೪೧॥**

೪೧. ಐಕ್ಯವನ್ನು ತಾತ್ಪರ್ಯದಿಂದ ಬೋಧಿಸುವ ಶ್ರುತಿವಾಕ್ಯಗಳಿಂದ ಆತ್ಮನು ಯಾವಾಗಲೂ ಬೆಳಗುವನಾದರೂ ಗುರುವಿನ ದಯೆಯಿಲ್ಲದ ಜನರಿಗೆ ಆತ್ಮನ ಅಪರೋಕ್ಷವನ್ನು ಪಡೆಯುವದು ಆಗಲಾರದು.

**ವಿರಹಿತಕಾಮ್ಯನಿಷಿದ್ಧೋ ವಿಹಿತಾನುಷ್ಠಾನನಿರ್ಮಲಸ್ವಾನ್ತಃ ।**
**ಭಜತಿ ಸ್ವಯಮೇವ[1] ಬೋಧಂ ಗುರುಣಾ ಕಿಮಿತಿ ತ್ವಯಾ ನ ಮನ್ತವ್ಯಮ್ ॥೪೨॥**

***ಕರ್ಮಭಿರೇವ ನ ಬೋಧಃ ಪ್ರಭವತಿ ಗುರುಣಾ ವಿನಾ ದಯಾನಿಧಿನಾ ।**
**ಆಚಾರ್ಯವಾನ್ ಹಿ ಪುರುಷೋ ವೇದೇತ್ಯರ್ಥಸ್ಯ ವೇದಸಿದ್ಧತ್ವಾತ್ ॥೪೩॥**

೪೨–೪೩. ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ವಿಹಿತಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಹೊಂದಿದಾತನು ತಾನೇ ಜ್ಞಾನವನ್ನು ಪಡೆಯುತ್ತಾನಾದ್ದರಿಂದ ಗುರುವಿನಿಂದೇನು ? – ಎಂದು ನೀನು ಎಣಿಸಬಾರದು. ದಯಾನಿಧಿಯಾದ ಗುರುವಿಲ್ಲದೆ ಬರಿಯ ಕರ್ಮಗಳಿಂದಲೇ ಜ್ಞಾನವುಂಟಾಗಲಾರದು. ಏಕೆಂದರೆ ''ಆಚಾರ್ಯನುಳ್ಳ ಪುರುಷನೇ ಅರಿತುಕೊಳ್ಳುತ್ತಾನೆ'' (ಛಾಂ.೬–೧೪–೨) ಎಂಬ ವಿಷಯವು ವೇದದಲ್ಲಿ ಪ್ರಸಿದ್ಧವಾಗಿರುತ್ತದೆ.

## ೧೨. ವೇದಪ್ರಾಮಾಣ್ಯ

**ವೇದೋಽನಾದಿತಯಾ ವಾ ಯದ್ವಾ ಪರಮೇಶ್ವರಪ್ರಣೀತತಯಾ ।**
**ಭವತಿ ಪರಮಂ ಪ್ರಮಾಣಂ ಬಾಧೋ[2] ನಾಸ್ತಿ ಸ್ವತಶ್ಚ ಪರತೋ ವಾ ॥೪೪॥**

1.'ನಿಜಮೇವ' ಎಂಬ ವಾ ॥ ಪಾಠವೂ ಇದರಂತೆ ಛಂದಸ್ಸಿಗೆ ಅನನುಗುಣವೇ ; 'ಸ್ವಮೇವ' ಎಂಬ ಅ ॥ ಪಾಠವು ಛಂದಸ್ಸಿಗೆ ಅನುಗುಣ, ಅರ್ಥಕ್ಕೆ 'ಸ್ವಯಮ್' ಎಂದೇ ಬೇಕಾಗಿದೆ.

*.'ಬೋಧೋ' ಎಂಬ ನಿ॥ ಪಾಠವನ್ನು ಒಪ್ಪಿ ವ್ಯಾಖ್ಯಾನಕಾರರು ಬರೆದಿರುವ ವಿವರಣೆಯು ವಸ್ತು ಸಮರ್ಪಕವಾಗಿಲ್ಲ.

೪೪. ವೇದವು ಅನಾದಿಯಾಗಿರುವದರಿಂದ ಅಥವಾ ಪರಮೇಶ್ವರನಿಂದ ಮಾಡಲ್ಪಟ್ಟಿರುವದರಿಂದ ಪರಮಪ್ರಮಾಣವು. ಅದಕ್ಕೆ ತನ್ನಿಂದಲಾಗಲಿ ಮತ್ತೊಂದರಿಂದಲಾಗಲಿ ಬಾಧೆಯಿಲ್ಲ.

**ನಾಪೇಕ್ಷತೇ ಯದನ್ಯತ್ಯದಪೇಕ್ಷನ್ತೇಽಖಿಲಾನಿ ಮಾನಾನಿ ।**
**ವಾಕ್ಯಂ ತನ್ನಿಗಮಾನಾಂ ಮಾನಂ ಬ್ರಹ್ಮಾದ್ಯತೀನ್ದ್ರಿಯಾವಗತೌ　　॥ ೪೫ ॥**

೪೫. ವೇದವಾಕ್ಯವು ಮತ್ತೊಂದನ್ನು ಬಯಸುವದಿಲ್ಲವಾದ್ದರಿಂದಲೂ ಮಿಕ್ಕ ಪ್ರಮಾಣಗಳೆಲ್ಲವೂ ಅದನ್ನೇ ಬಯಸುತ್ತವೆಯಾದ್ದರಿಂದಲೂ ಅದು ಬ್ರಹ್ಮವೇ ಮುಂತಾದ ಅತೀಂದ್ರಿಯವಸ್ತುಗಳನ್ನು ತಿಳಿದುಕೊಳ್ಳುವದಕ್ಕೆ ಪ್ರಮಾಣವು.

**ಮಾನಂ ಪ್ರಬೋಧಯನ್ತಂ ಬೋಧಂ ಮಾನೇನ ಯೇ ಬುಭುತ್ಸನ್ತೇ ।**
**ಏಧೋಭಿರೇವ ದಹನಂ ದಗ್ಧುಂ ವಾಞ್ಛನ್ತಿ ತೇ ಮಹಾತ್ಮಾನಃ　　॥ ೪೬ ॥**

೪೬. ಪ್ರಮಾಣವನ್ನು ತಿಳಿಸಿಕೊಡುವ ಚೈತನ್ಯವನ್ನು ಪ್ರಮಾಣದಿಂದಲೇ ಅರಿಯಬೇಕೆಂದು ಯಾರು ಬಯಸುತ್ತಾರೋ ಆ ಮಹಾತ್ಮರು ಕಟ್ಟಿಗೆಗಳಿಂದಲೇ ಬೆಂಕಿಯನ್ನು ಸುಡಬೇಕೆಂದು ಬಯಸುತ್ತಿರುತ್ತಾರೆ.

**ಟಿಪ್ಪಣಿ :–** ಅನಾದಿಯಾಗಿ ಈಶ್ವರನ ಉಸಿರಂತೆ ಕಾಣಿಸಿಕೊಳ್ಳುವ ವೇದವೇ ಅಬಾಧಿತ ಪ್ರಮಾಣವೆಂದು ನಾವು ಹೇಳಿದ್ದರೂ ಆತ್ಮಚೈತನ್ಯವು ಪ್ರಮಾಣಕ್ಕೆ ವಿಷಯವೆಂಬ ಅಭಿಪ್ರಾಯದಿಂದಲ್ಲ. ಏಕೆಂದರೆ ಪ್ರಮಾಣವನ್ನೇ ಚೈತನ್ಯವು ಬೆಳಗುತ್ತದೆ, ಪ್ರಮಾಣವು ಚೈತನ್ಯವನ್ನು ಬೆಳಗಲಾರದು.

**ವೇದೋಽನಾದಿರಮುಷ್ಯ ವ್ಯಞ್ಜಕ ಈಶಃ ಸ್ವಯಂಪ್ರಕಾಶಾತ್ಮಾ ।**
**ತದಭಿವ್ಯಕ್ತಿಮುದೀಕ್ಷ್ಯ ಪ್ರೋಕ್ತೋಽಸೌ ಸೂರಿಭಿಃ ಪ್ರಮಾಣಮಿತಿ　　॥ ೪೭ ॥**

೪೭. ವೇದವು ಅನಾದಿಯು. ಸ್ವಯಂಪ್ರಕಾಶಸ್ವರೂಪನಾದ ಈಶ್ವರನು ಅದನ್ನು ತೋರಿಸಿಕೊಡುವಾತನು. ಆತನು ಇದರಿಂದ ಅಭಿವ್ಯಕ್ತನಾಗುವನೆಂಬುದನ್ನು ಕಂಡು ಇದು ಪ್ರಮಾಣ ಎಂದು ಬಲ್ಲವರು ಹೇಳುತ್ತಾರೆ.

**ಟಿಪ್ಪಣಿ :–** ಇಲ್ಲಿ 'ತದಭಿವ್ಯಕ್ತಿ' ಎಂದರೆ ಆ ವೇದದ ಅಭಿವ್ಯಕ್ತಿಯೆಂದಾದರೂ ಆ ಈಶ್ವರನ ಅಭಿವ್ಯಕ್ತಿಯೆಂದಾದರೂ ಅರ್ಥಮಾಡಬಹುದಾಗಿದೆ. ಗ್ರಂಥಕರ್ತೃವಿನ ಆಶಯವೇನೋ ಹೇಳುವದಕ್ಕೆ ಬರುವಹಾಗಿಲ್ಲ. ಆದರೂ 'ವೇದವು ಈಶ್ವರನಿಂದ ವ್ಯಕ್ತವಾಗುವಾಗ

ಅವನೂ ವ್ಯಕ್ತನಾಗುವದರಿಂದ ಅದನ್ನು ಪ್ರಮಾಣವೆಂದು ಹೇಳುತ್ತಾರೆ' ಎಂದು ಒಂದು ಬಗೆಯಿಂದ ಹೊಂದುಗಡೆಮಾಡಿರುತ್ತೇವೆ. ವೇದಪ್ರಾಮಾಣ್ಯವಿಷಯದಲ್ಲಿ ಸೂತ್ರಭಾಷ್ಯವೇ ಮುಂತಾದವುಗಳಲ್ಲಿ ಹೇಳಿರುವ ಕ್ರಮವೇ ಬೇರೆ. ಪೀಠಿಕೆಯನ್ನು ನೋಡಿ.

**ರೂಪಾಣಾಮವಲೋಕೇ ಚಕ್ಷುರಿವಾನ್ಯನ್ನ ಕಾರಣಂ ದೃಷ್ಟಮ್ ।**
**ತದ್ವದದೃಷ್ಟಾವಗತೌ ವೇದವದನ್ಯೋ ನ ವೇದಕೋ ಹೇತುಃ ॥ ೪೮ ॥**

೪೮. ಬಣ್ಣಗಳನ್ನು ಅರಿಯುವದಕ್ಕೆ ಕಣ್ಣಿನಂತೆ ಮತ್ತೆ ಯಾವದೂ ಸಾಧನವಾಗಿರುವದು ಕಂಡುಬಂದಿರುವದಿಲ್ಲ. ಇದರಂತೆ ಅದೃಷ್ಟವಾದದ್ದನ್ನು ಅರಿತುಕೊಳ್ಳುವದಕ್ಕೆ ವೇದದಂತೆ ಮತ್ತೆ ಯಾವದೂ ತಿಳಿಸುವ ಸಾಧನವಿರುವದಿಲ್ಲ.

**ನಿಗಮೇಷು ನಿಶ್ಚಿತಾರ್ಥಂ ತನ್ತ್ರೇ ಕಶ್ಚಿದ್ಯದಿ ಪ್ರಕಾಶಯತಿ ।**
**ತದಿದಮನುವಾದಮಾತ್ರಂ ಪ್ರಾಮಾಣ್ಯಂ ತಸ್ಯ ಸಿಧ್ಯತಿ ನ ಕಿಞ್ಚಿತ್ ॥೪೯॥**

೪೯. ವೇದಗಳಲ್ಲಿ ನಿಶ್ಚಿತವಾದ ವಿಷಯವನ್ನು ಶಾಸ್ತ್ರದಲ್ಲಿ ಯಾರಾದರೂ ತಿಳಿಸಿಕೊಟ್ಟರೆ, ಅದು ಅನುವಾದವೇ ಹೊರತು ಅದಕ್ಕೆ ಯಾವ ಪ್ರಾಮಾಣ್ಯವೂ ಬರುವದಿಲ್ಲ.

**ಟಿಪ್ಪಣಿ** :– ಪೌರುಷೇಯವಾದ ಶಾಸ್ತ್ರಗಳಲ್ಲಿಯೂ ವೇದದಲ್ಲಿ ಹೇಳಿರುವ ಅಂಶವಿದ್ದರೆ ಮೂಲಪ್ರಮಾಣವು ವೇದವೇ : ಶಾಸ್ತ್ರವು ಅನುವಾದವೇ ಹೊರತು ಸ್ವತಂತ್ರ ಪ್ರಮಾಣವಲ್ಲ– ಎಂದರ್ಥ.

## ೧೩. ವೇದಕ್ಕೆ ಅದ್ವೈತದಲ್ಲಿಯೇ ತಾತ್ಪರ್ಯ

**ಅಂಶದ್ವಯವತಿ ನಿಗಮೇ ಸಾಧಯತಿ ದ್ವೈತಮೇವ ಕೋಽಪ್ಯಂಶಃ ।**
**ಅದ್ವೈತಮೇವ ವಸ್ತು ಪ್ರತಿಪಾದಯತಿ ಪ್ರಸಿದ್ಧಮಪರೋಽಂಶಃ ॥ ೫೦ ॥**

೫೦. ಎರಡು ಭಾಗಗಳಿರುವ ವೇದದಲ್ಲಿ ಒಂದಂಶವು ದ್ವೈತವನ್ನೇ ಹೇಳುತ್ತದೆ, ಇನ್ನೊಂದು ಅದ್ವೈತವಸ್ತುವನ್ನೇ ಸಿದ್ಧಪಡಿಸಿ ಪ್ರತಿಪಾದಿಸುತ್ತದೆ.

**ಟಿಪ್ಪಣಿ** :– ಇಲ್ಲಿ 'ಸಾಧಯತಿ' (ಸಾಧಿಸುತ್ತದೆ) ಎಂದಿದ್ದರೂ ತಿಳಿಸುತ್ತದೆ, ಹೇಳುತ್ತದೆ ಎಂದಿಷ್ಟೇ ಅರ್ಥವನ್ನು ಹೇಳಬೇಕು. ಏಕೆಂದರೆ ದ್ವೈತಕ್ಕೆ ಕರ್ಮಕಾಂಡವು ಪ್ರಮಾಣವೆಂದೇನೂ ಗ್ರಂಥಕರ್ತೃಗಳ ಅಭಿಪ್ರಾಯವಿರುವದಿಲ್ಲ.

**ಅದ್ವೈತಮೇವ ಸತ್ಯಂ ತಸ್ಮಿನ್ ದ್ವೈತಂ ನ ಸತ್ಯಮಧ್ಯಸ್ತಮ್ ।**
**ರಜತಮಿವ ಶುಕ್ತಿಕಾಯಾಂ ಮೃಗತೃಷ್ಣಾಯಾಮಿವೋದಕಸ್ಫುರಣಮ್ ॥೫೧॥**

೫೧. ಅದ್ವೈತವೇ ಸತ್ಯವು, ಕಪ್ಪೆಯಚಿಪ್ಪಿನಲ್ಲಿ ಆರೋಪಿತವಾಗಿರುವ ಬೆಳ್ಳಿಯಂತೆಯೂ ಬಿಸಿಲುಕುದುರೆಯಲ್ಲಿ ನೀರಿನ ತೋರಿಕೆಯಂತೆಯೂ ಅದರಲ್ಲಿ ಅಧ್ಯಸ್ತವಾಗಿರುವ ದ್ವೈತವು ಸತ್ಯವಲ್ಲ.

**ಆರೋಪಿತಂ ಯದಿ ಸ್ಯಾದದ್ವೈತಂ ವಸ್ತ್ವವಸ್ತುನಿ ದ್ವೈತೇ ।**
**ತದಯುಕ್ತಮೇವ ಯಸ್ಮಾತ್ ಸತ್ಯೇಽಧ್ಯಾಸೋ ಭವತ್ಯಸತ್ಯಾನಾಮ್ ॥ ೫೨ ॥**

೫೨. ವಸ್ತುವಾಗಿರುವ ಅದ್ವೈತವು ಅವಸ್ತುವಾದ ದ್ವೈತದಲ್ಲಿ ಆರೋಪಿತವಾಗಿರುತ್ತದೆ ಎಂದರೆ ಅದು ಸರಿಯಲ್ಲ. ಏಕೆಂದರೆ ಸತ್ಯವಸ್ತುವಿನಲ್ಲಿಯೇ ಅಸತ್ಯವಾದದ್ದನ್ನು ಅಧ್ಯಾಸಮಾಡುತ್ತಾರೆ.

**ಯದ್ಯಾರೋಪಣಮುಭಯೋಸ್ತದ್ವ್ಯತಿರಿಕ್ತಸ್ಯ ಕಸ್ಯಚಿದಭಾವಃ[1] ।**
**ಆರೋಪಣಂ ನ ಶೂನ್ಯೇ ತಸ್ಮಾದದ್ವೈತಸತ್ಯತಾ ಗ್ರಾಹ್ಯಾ ॥ ೫೩ ॥**

೫೩. ಎರಡೂ ಆರೋಪಿತವಾಗಲಿ ಎಂದರೆ ಅವರೆಡಕ್ಕಿಂತ ಬೇರೆಯಾಗಿ ಯಾವದೂ ಇಲ್ಲ. ಶೂನ್ಯದಲ್ಲಿಯೇ ಆರೋಪವಾಗುವಹಾಗಿಲ್ಲ. ಆದ್ದರಿಂದ ಅದ್ವೈತವೇ ಸತ್ಯವೆಂದು ಗ್ರಹಿಸಬೇಕು.

**ಟಿಪ್ಪಣಿ :–** ಇಲ್ಲಿಯವರೆಗೆ ಹೇಳಿರುವ ಯುಕ್ತಿಯಲ್ಲಿ ಅದ್ವೈತವನ್ನು ಸತ್ಯವೆಂದು ಒಪ್ಪಿಯೇ ಇರುವದರಿಂದ, 'ಆದ್ದರಿಂದ ಅದ್ವೈತಸತ್ಯತ್ವವನ್ನು ಒಪ್ಪಬೇಕು' ಎಂದು ಹೇಳಿದ್ದು ಅಷ್ಟು ಸ್ವಾರಸ್ಯವಾಗಿಲ್ಲ. ಆದರೆ ಯಾವದರಲ್ಲಿ ಆರೋಪಿತವಾಗಿರುವದೋ ಅದು ಸತ್ಯ, ಯಾವದು ಆರೋಪಿತವಾಗಿರುವದೋ ಅದು ಅಸತ್ಯ. ಶಾಸ್ತ್ರವು ದ್ವೈತವನ್ನೇ ಪ್ರತಿಪಾದಿಸುತ್ತದೆ ಎಂದಿಟ್ಟುಕೊಂಡರೆ ಅದ್ವೈತವು ಸತ್ಯವಲ್ಲದ್ದರಿಂದ ಅದನ್ನು ಪ್ರತಿಪಾದಿಸಬೇಕಾದ ಆವಶ್ಯಕತೆಯೇ ಇಲ್ಲದೆಹೋಗುತ್ತದೆ. ಆದರೆ ಜ್ಞಾನಕಾಂಡವು ಅದ್ವೈತವನ್ನು ಪ್ರತಿಪಾದಿಸುತ್ತಿರುವದರಿಂದ ಅದ್ವೈತವು ಆರೋಪಿತವೆಂಬುದು ಶಾಸ್ತ್ರಸಮ್ಮತವಲ್ಲ ಎಂದು ಗ್ರಂಥಕಾರರ ಆಶಯವಿರಬಹುದು.

**ಪ್ರತ್ಯಕ್ಷಾದ್ಯನವಗತಂ ಶ್ರುತ್ಯಾ ಪ್ರತಿಪಾದನೀಯಮದ್ವೈತಮ್ ।**
**ದ್ವೈತಂ ನ ಪ್ರತಿಪಾದ್ಯಂ ತಸ್ಯ ಸ್ವತ ಏವ ಲೋಕಸಿದ್ಧತ್ವಾತ್ ॥ ೫೪ ॥**

1. "ಅಭಾವಾತ್" ಎಂದೂ ಪಾಠಾಂತರವುಂಟು ; ಅದಕ್ಕಿಂತ ಇದೇ ಉತ್ತಮವೆಂತ ತೋರುತ್ತದೆ.

೫೪. ಪ್ರತ್ಯಕ್ಷವೇ ಮುಂತಾದ ಪ್ರಮಾಣದಿಂದ ಅರಿಯುವದಕ್ಕಾಗದೆ ಇರುವ ಅದ್ವೈತವು ಶ್ರುತಿಯು ಪ್ರತಿಪಾದಿಸುವದಕ್ಕೆ ತಕ್ಕದ್ದು. ದ್ವೈತವು ಶಾಸ್ತ್ರವು ಪ್ರತಿಪಾದಿಸುವದಕ್ಕೆ ತಕ್ಕದ್ದಲ್ಲ; ಏಕೆಂದರೆ ಅದು ಲೋಕಸಿದ್ಧವಾಗಿದೆ.

**ಟಿಪ್ಪಣಿ :–** ಬೇರೆ ಪ್ರಮಾಣದಿಂದ ಸಿದ್ಧವಾಗಿರುವದನ್ನೇ ವೇದವೂ ಹೇಳಿದರೆ ವೇದವು ಅನುವಾದವಾಗುತ್ತದೆಯಾದ್ದರಿಂದ ಅಪ್ರಮಾಣವಾಗುತ್ತದೆ. ಆದ್ದರಿಂದ ಲೋಕಸಿದ್ಧ ವಲ್ಲದ ಅದ್ವೈತವನ್ನೇ ಶಾಸ್ತ್ರವು ಹೇಳುತ್ತದೆ ಎಂದು ಅದಕ್ಕೆ ಪ್ರಾಮಾಣ್ಯವನ್ನು ಹೇಳುವದು ಯುಕ್ತವಾಗಿದೆ. ಕರ್ಮಕಾಂಡವು ದ್ವೈತವನ್ನು ಅನುವಾದಮಾಡುತ್ತದೆ ಎಂದು ಮಾತ್ರ ಹೇಳಬಹುದು ; ಹಾಗೆ ಹೇಳುವದರಿಂದ ಅದಕ್ಕೇನೂ ಅಪ್ರಾಮಾಣ್ಯವುಂಟಾಗುವದಿಲ್ಲ; ಏಕೆಂದರೆ ಅದು ಕರ್ಮವಿಷಯದಲ್ಲಿ ಪ್ರಮಾಣವಾಗಿರುತ್ತದೆ.

**ಅದ್ವೈತಂ ಸುಖರೂಪಂ ದುಸ್ಸಹದುಃಖಂ ಸದಾ ಭವೇದ್ದ್ವೈತಮ್ ।**
**ಯತ್ರ ಪ್ರಯೋಜನಂ ಸ್ಯಾತ್ ಪ್ರತಿಪಾದಯತಿ ಶ್ರುತಿಸ್ತದೇವಾಸೌ ॥ ೫೫ ॥**

೫೫. ಅದ್ವೈತವು ಸುಖರೂಪವಾಗಿರುತ್ತದೆ. ದ್ವೈತವು ಯಾವಾಗಲೂ, ತಡೆಯುವದಕ್ಕೆ ಶಕ್ಯವಲ್ಲದಂಥ ದುಃಖವಾಗಿರುತ್ತದೆ. ಯಾವದರಲ್ಲಿ ಪ್ರಯೋಜನವಿರುವದೋ ಅದನ್ನೇ ಈ ವೇದವು ಪ್ರತಿಪಾದಿಸುತ್ತದೆ.

**ಟಿಪ್ಪಣಿ :–** ದ್ವೈತವು ಲೋಕಸಿದ್ಧವಾಗಿರುವದೆಂಬ ಕಾರಣವಲ್ಲದೆ, ಅದರ ಪ್ರತಿಪಾದನೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬ ಮತ್ತೊಂದು ಕಾರಣದಿಂದಲೂ ಅದನ್ನು ವೇದವು ತಾತ್ಪರ್ಯದಿಂದ ಬೋಧಿಸುವದಿಲ್ಲವೆಂದು ತಿಳಿಯಬಹುದಾಗಿದೆ.

## ೧೪. ಜೀವತ್ವವು ಸ್ವಾಭಾವಿಕವಲ್ಲ

**ನಿಗಮಗಿರಾ ಪ್ರತಿಪಾದ್ಯಂ ವಸ್ತು ಯದಾನನ್ದರೂಪಮದ್ವೈತಮ್ ।**
**ಸ್ವಾಭಾವಿಕಂ ಸ್ವರೂಪಂ ಜೀವತ್ವಂ ತಸ್ಯ ಕೇಚನ ಬ್ರುವತೇ ॥೫೬॥**

೫೬. ವೇದಾಂತವಾಕ್ಯದಿಂದ ಪ್ರತಿಪಾದ್ಯವಾಗಿರುವ ಆನಂದ ರೂಪವಾದ ಅದ್ವೈತವಾದ ವಸ್ತುವಿದೆಯಲ್ಲ, ಅದರಲ್ಲಿ ಜೀವತ್ವವು ಸ್ವಾಭಾವಿಕವಾಗಿರುವದೆಂದು ಕೆಲವರು ಹೇಳುತ್ತಾರೆ.

ಟಿಪ್ಪಣಿ :– ಸ್ವಾಭಾವಿಕವೆಂದರೆ ಅಜ್ಞಾನಕೃತವಲ್ಲವೆಂದರ್ಥ.

**ಸ್ವಾಭಾವಿಕಂ ಯದಿ ಸ್ಯಾಜ್ಜೀವತ್ವಂ ತಸ್ಯ ವಿಶದವಿಜ್ಞಪ್ತೇಃ ।**
**ಸಕೃದಪಿ ನ ತದ್ವಿನಾಶಂ ಗಚ್ಛೇದುಷ್ಣಪ್ರಕಾಶವದ್ವಹ್ನೇಃ ॥೫೭॥**

೫೭. ನಿರ್ಮಲಜ್ಞಾನಸ್ವರೂಪವಾದ ಆ ಬ್ರಹ್ಮಕ್ಕೆ ಜೀವತ್ವವು ಸ್ವಾಭಾವಿಕವೇ ಆದರೆ, ಬೆಂಕಿಯ ಬಿಸಿಯಂತೆಯೂ ಬೆಳಕಿನಂತೆಯೂ ಅದು ಒಂದು ಸಲವೂ ನಾಶವನ್ನು ಹೊಂದಲಾರದು.

**ಯದ್ವದಯೋ ರಸವಿದ್ಧಂ ಕಾಞ್ಚನತಾಂ ಯಾತಿ ತದ್ವದೇವಾಸೌ ।**
**ಜೀವಃ ಸಾಧನಶಕ್ತ್ಯಾ ಪರತಾಂ ಯಾತೀತಿ ಕೇಚಿದಿಚ್ಛನ್ತಿ ॥೫೮॥**

೫೮. ಕಬ್ಬಿಣವು ಹೇಗೆ ಯಾವದೋ ಒಂದು ರಸದಿಂದ ಬಳಿದ ಮೇಲೆ ಚಿನ್ನವಾಗುವಂತೆ ಈ ಜೀವನು ಸಾಧನದ ಬಲದಿಂದ ಪರಬ್ರಹ್ಮವಾಗುತ್ತಾನೆಂದು ಕೆಲವರು ಹೇಳುತ್ತಾರೆ.

**ತದಿದಂ ಭವತಿ ನ ಯುಕ್ತಂ ಗತವತಿ ತಸ್ಮಿಂಶ್ಚಿರೇಣ ರಸವೀರ್ಯೇ ।**
**ಪ್ರತಿಪದ್ಯತೇ ಪ್ರಣಾಶಂ ಹೈಮೋ ವರ್ಣೋಽಪ್ಯಯಸ್ಸಮಾರೂಢಃ ॥೫೯॥**
**ಜೀವತ್ವಮಪಿ ತಥೇದಂ ಬಹುವಿಧಸುಖದುಃಖಲಕ್ಷಣೋಪೇತಮ್ ।**
**ಗತಮಿವ ಸಾಧನಶಕ್ತ್ಯಾ ಪ್ರತಿಭಾತ್ಯೇವ ಪ್ರಯಾತಿ ನ ವಿನಾಶಮ್ ॥೬೦॥**

೫೯–೬೦. ಇದು ಸರಿಯಲ್ಲ. ಏಕೆಂದರೆ ಬಹುಕಾಲಕ್ಕೆ ಆ ರಸದ ಸಾಮರ್ಥ್ಯವು ಹೋಗಲು ಕಬ್ಬಿಣಕ್ಕೆ ಹತ್ತಿಕೊಂಡಿದ್ದ ಚಿನ್ನದ ಬಣ್ಣವು ನಾಶವನ್ನು ಹೊಂದುತ್ತದೆ. ಇದರಂತೆ ಬಹುವಿಧವಾದ ಸುಖದುಃಖಗಳಿಂದ ಕೂಡಿಕೊಂಡಿರುವ ಜೀವತ್ವವೂ ಸಾಧನಬಲದಿಂದ ಹೋದಂತೆ ಕಾಣಿಸುವದೇ ಹೊರತು ನಿಜವಾಗಿ ನಾಶವನ್ನೈದುವದಿಲ್ಲ.

**ತಸ್ಮಾತ್ ಸ್ವತೋ ಯದಿ ಸ್ಯಾಜ್ಜೀವಃ ಸತತಂ ಸ ಏವ ಜೀವಃ ಸ್ಯಾತ್ ।**
**ಏವಂ ಯದಿ ಪರಮಾತ್ಮಾ ಪರಮಾತ್ಮೈವಾಯಮಿತಿ ಭವೇದ್ಯುಕ್ತಮ್ ॥೬೧॥**

೬೧. ಆದ್ದರಿಂದ ಅವನು ತಾನು ಜೀವನಾಗಿದ್ದರೆ, ಯಾವಾಗಲೂ ಜೀವನೇ ಆಗಿರುತ್ತಾನೆ. ಇದರಂತೆ ಪರಮಾತ್ಮನಾಗಿದ್ದರೆ ಇವನು ಪರಮಾತ್ಮನೇ ಆಗಿರುತ್ತಾನೆ – ಎಂಬುದೇ ಯುಕ್ತವಾಗಿರುತ್ತದೆ.

**ಯದಿ ವಾ ಪರೇಣ ಸಾಮ್ಯಂ ಜೀವಶ್ಚೇದ್ಭಜತಿ ಸಾಧನಬಲೇನ ।**
**ಕಾಲೇನ ತದಪಿ ಕಿಯತಾ ನಶ್ಯತ್ಯೇವೇತಿ ನಿಶ್ಚಿತಂ ಸಕಲೈಃ ॥೬೨॥**

೬೨. ಅಥವಾ ಸಾಧನಬಲದಿಂದ ಜೀವನು ಪರಮಾತ್ಮನ ಸಾಮ್ಯವನ್ನು ಪಡೆದುಕೊಂಡರೂ ಅದು ಸ್ವಲ್ಪಕಾಲಕ್ಕೆ ನಾಶವಾಗಿಯೇ ತೀರುವದೆಂದು ಎಲ್ಲರೂ ನಿಶ್ಚಯಿಸಿರುತ್ತಾರೆ.

ಟಿಪ್ಪಣಿ :– ಕೃತಕವಾದದ್ದು ಅನಿತ್ಯವೆಂದು ಎಲ್ಲರಿಗೂ ತಿಳಿದೇ ಇದೆ. ಆದ್ದರಿಂದ ಸಾಧನದಿಂದ ಬಂದದ್ದು ನಾಶವಾಗಲೇಬೇಕು.

ತಸ್ಮಾತ್ ಪರಂ ಸ್ವಕೀಯಂ ಮೋಹಂ ಮೋಹಾತ್ಮಕಂ ಚ ಸಂಸಾರಮ್ ।
ಸ್ವಜ್ಞಾನೇನ ಜಹಿತ್ವಾ[1] ಪೂರ್ಣಃ ಸ್ವಯಮೇವ ಶಿಷ್ಯತೇ ನಾನ್ಯತ್ ॥೬೩॥

೬೩. ಆದ್ದರಿಂದ ತನ್ನ ವಿಷಯವಾದ ಹೆಚ್ಚಿನ ಅಜ್ಞಾನವನ್ನೂ ಅಜ್ಞಾನಮಯವಾದ ಸಂಸಾರವನ್ನೂ ತನ್ನ ಜ್ಞಾನದಿಂದ ನಾಶಮಾಡಿಕೊಂಡು ಪೂರ್ಣನಾದ ತಾನೊಬ್ಬನೇ ಆಗುತ್ತಾನೆ, ಮತ್ತೇನೂ ಉಳಿಯುವದಿಲ್ಲ.

ಟಿಪ್ಪಣಿ :– ಜೀವನು ಸ್ವಭಾವದಿಂದ ಜೀವನಲ್ಲ. ಅವನು ಸಾಧನದಿಂದ ಬ್ರಹ್ಮವಾಗುವದಿಲ್ಲ. ಅಜ್ಞಾನದಿಂದ ಜೀವನೆಂದು ತನ್ನನ್ನು ತಾನೇ ಎಣಿಸಿಕೊಂಡಿರುತ್ತಾನೆ ; ಜ್ಞಾನದಿಂದ ಪೂರ್ಣಬ್ರಹ್ಮವೇ ಆಗಿರುತ್ತೇನೆಂದು ತಿಳಿದುಕೊಳ್ಳುತ್ತಾನೆ.

## ೧೫. ಆತ್ಮೈಕತ್ವವೇ ಶ್ರುತಿಗಳ ತಾತ್ಪರ್ಯ

ಸತ್ಯಜ್ಞಾನಾನನ್ದಂ[2] ಪ್ರಕೃತಂ ಪರಮಾತ್ಮರೂಪಮದ್ವೈತಮ್ ।
ಅವಬೋಧಯನ್ತಿ ನಿಖಿಲಾಃ ಶ್ರುತಯಃ ಸ್ಮೃತಿಭಿಃ ಸಮಂ ಸಮಸ್ತಾಭಿಃ ॥೬೪॥

೬೪. ಪ್ರಕೃತವಾದ ಪರಮಾತ್ಮಸ್ವರೂಪವನ್ನು ಸತ್ಯಜ್ಞಾನಾನಂದರೂಪವೆಂದೂ ಅದ್ವೈತವೆಂದೂ ಎಲ್ಲಾ ಶ್ರುತಿಗಳೂ ಸಮಸ್ತಸ್ಮೃತಿಗಳೊಡನೆ ಪ್ರತಿಪಾದಿಸುತ್ತಿವೆ.

ಏಕತ್ವಬೋಧಕಾನಾಂ ನಿಖಿಲಾನಾಂ ನಿಗಮವಾಕ್ಯಜಾಲಾನಾಮ್ ।
ವಾಕ್ಯಾನ್ತರಾಣಿ ಸಕಲಾನ್ಯಭಿಧೀಯನ್ತೇ ಸ್ಮ[3] ಶೇಷಭೂತಾನಿ ॥೬೫॥

೬೫. ಅದ್ವೈತವನ್ನು ಹೇಳುವ ಎಲ್ಲಾ ಉಪನಿಷದ್ವಾಕ್ಯಗಳಿಗೆ ಉಳಿದ ವಾಕ್ಯಗಳೆಲ್ಲವೂ ಶೇಷವಾಗಿರುವವೆಂದು ಹೇಳುತ್ತಾರೆ.

ಯಸ್ಮಿನ್ಮಿಹಿರವದುದಿತೇ ತಿಮಿರವದಪಯಾನ್ತಿ ಕರ್ತೃತಾದೀನಿ ।
ಜ್ಞಾನಂ ವಿರಹಿತಭೇದಂ ಕಥಮೇತದ್ಭವತಿ[4] ತತ್ತ್ವಮಸ್ಯಾದೇಃ ॥೬೬॥

1. 'ಗ್ರಸಿತ್ವಾ' ಎಂದು ಪಾ ॥ 2. 'ಸತ್ಯಂ ಜ್ಞಾನಮನನ್ತಮ್' ಎಂದೂ ಪಾಠವಿದೆ.

3. ''ಸ್ಮ'' ಎಂಬ ಭೂತಕಾಲಸೂಚಕಾವ್ಯಯವು ಏಕೆ ಬಂದಿದೆಯೋ ತಿಳಿಯದು ; ''ऽಸ್ಯ'' ಎಂಬ ವಾ॥ ಅ॥ ಪಾಠವೂ ಹೊಂದುವದಿಲ್ಲ. 4. ''ಕಥಮಿವ ತದ್ಭವತಿ'' ವಾ ॥ ಅ ॥

೬೬. ಯಾವ ಜ್ಞಾನವು ಸೂರ್ಯನಂತೆ ಹುಟ್ಟಿದ ಮಾತ್ರದಿಂದ ಕರ್ತೃತ್ವವೇ ಮುಂತಾದವು ಕತ್ತಲೆಯಂತೆ ತೊಲಗುತ್ತವೆಯೋ ಯಾವ ಭೇದವೂ ಇಲ್ಲದ ಅಂಥ ಜ್ಞಾನವು ಹೇಗೆ ಆಗುತ್ತದೆ ? ತತ್ತ್ವಮಸಿ ಮುಂತಾದ ವಾಕ್ಯಗಳಿಂದ.

**ಟಿಪ್ಪಣಿ :–** ತತ್ತ್ವಮಸಿ ಮುಂತಾದ ವಾಕ್ಯಗಳಿಂದ ಹೇಗೆ ಆ ಜ್ಞಾನವುಂಟಾದೀತು ? ಎಂದು ಪೂರ್ವಪಕ್ಷಿಯ ಆಕ್ಷೇಪವೆಂದು ವ್ಯಾಖ್ಯಾನಕಾರನು ಬರೆದಿರುತ್ತಾನೆ. ಆದರೆ ಮುಂದೆ ಈ ಆಕ್ಷೇಪಕ್ಕೆ ಪರಿಹಾರವಿಲ್ಲವಾದ್ದರಿಂದ 'ಅದ್ವೈತಬೋಧಕವಾಕ್ಯಗಳು ಯಾವವು ?' ಎಂದು ಪ್ರಶ್ನೆ ; 'ತತ್ತ್ವಮಸಿ' ಮುಂತಾದವುಗಳು ಎಂದು ಉತ್ತರ– ಎಂದು ಶ್ಲೋಕಕ್ಕೆ ಅರ್ಥವನ್ನು ಮಾಡುವದು ಉತ್ತಮ.

## ೧೬. ವೇದಾಂತವಾಕ್ಯಜ್ಞಾನವು ಕರ್ಮಾಂಗವಲ್ಲ

**ಕರ್ಮಪ್ರಕರಣನಿಷ್ಠಂ ಜ್ಞಾನಂ ಕರ್ಮಾಙ್ಗಮಿಷ್ಯತೇ ಪ್ರಾಜ್ಞೈಃ ।**
**ಭಿನ್ನಪ್ರಕರಣಭಾಜಃ ಕರ್ಮಾಙ್ಗತ್ವಂ ಕಥಂ ಭವೇಜ್ಜ್ಞಪ್ತೇಃ ॥೬೭॥**

೬೭. ಕರ್ಮಪ್ರಕರಣದಲ್ಲಿರುವ ಜ್ಞಾನವು ಕರ್ಮಕ್ಕೆ ಅಂಗವಾಗುವದೆಂದು ತಿಳಿದವರು ಹೇಳುತ್ತಾರೆ. ಬೇರೆಯ ಪ್ರಕರಣದಲ್ಲಿರುವ ಜ್ಞಾನವು ಹೇಗೆ ಕರ್ಮಕ್ಕೆ ಅಂಗವಾದೀತು ?

**ಟಿಪ್ಪಣಿ :–** ಇಲ್ಲಿ ಜ್ಞಾನವು ಏಕತ್ವವನ್ನು ಹೇಳುತ್ತದೆಯೆಂದು ಏಕೆ ಇಟ್ಟುಕೊಳ್ಳಬೇಕು ? ಇದನ್ನು ಕರ್ಮಕ್ಕೆ ಅಂಗವಾದದ್ದೆಂದು ಏತಕ್ಕೆ ಭಾವಿಸಬಾರದು ? – ಎಂಬ ಆಕ್ಷೇಪವನ್ನು ಇಟ್ಟುಕೊಂಡು ಉತ್ತರವನ್ನು ಹೇಳಿದೆಯೆಂದು ತಾತ್ಪರ್ಯವನ್ನು ಕಲ್ಪಿಸಬೇಕು. ಪೂರ್ವಾರ್ಧದಲ್ಲಿ ಆಕ್ಷೇಪವೆಂದೂ ಉತ್ತರಾರ್ಧದಲ್ಲಿ ಪರಿಹಾರವೆಂದೂ ವ್ಯಾಖ್ಯಾನಕಾರರು ಕಲ್ಪಿಸಿರುವ ವಿಂಗಡವು ಅಷ್ಟು ಯುಕ್ತವಾಗಿ ಕಾಣುವದಿಲ್ಲ.

**ಅಧಿಕಾರಿವಿಷಯಭೇದೌ ಕರ್ಮಜ್ಞಾನಾತ್ಮಕಾವುಭೌ ಕಾಣ್ಡೌ ।**
**ಏವಂ ಸತಿ ಕಥಮನಯೋರಙ್ಗಾಙ್ಗಿತ್ವಂ ಪರಸ್ಪರಂ ಘಟತೇ ॥೬೮॥**

೬೮. ಕರ್ಮಕಾಂಡ, ಜ್ಞಾನಕಾಂಡ – ಇವೆರಡಕ್ಕೂ ಅಧಿಕಾರಿ, ವಿಷಯ– ಈ ವಿಷಯಗಳಲ್ಲಿ ಬೇರೆಬೇರೆಯಾಗಿರುತ್ತವೆ. ಹೀಗಿರುವಲ್ಲಿ ಇವೆರಡಕ್ಕೂ ಒಂದಕ್ಕೊಂದು ಅಂಗವಾಗಿಯೂ ಅಂಗಿಯಾಗಿಯೂ ಇರುವದು ಹೇಗೆತಾನೆ ಹೊಂದೀತು ?

**ಟಿಪ್ಪಣಿ :–** ಕರ್ಮಕಾಂಡಕ್ಕೆ ಕರ್ತೃತ್ವಬುದ್ಧಿಯುಳ್ಳವನು ಅಧಿಕಾರಿ, ಧರ್ಮವು ವಿಷಯ; ಜ್ಞಾನಕಾಂಡಕ್ಕೆ ಮುಮುಕ್ಷುವು ಅಧಿಕಾರಿ. ಅಕರ್ತೃತ್ವಜ್ಞಾನವು ವಿಷಯ. ಹೀಗಿರುವದರಿಂದ ಇವುಗಳಲ್ಲಿ ಯಾವದೊಂದೂ ಮತ್ತೊಂದಕ್ಕೆ ಅಂಗವಾಗಲೇ ಆರದು.

***ಜ್ಞಾನಂ ಕರ್ಮಣಿ ನ ಸ್ಯಾಜ್ಜ್ಞಾನೇ ಕರ್ಮೇದಮಪಿ ತಥಾ ನ ಸ್ಯಾತ್ ।**
**ತತ್ಕಥಮನಯೋರುಭಯೋಸ್ತಪನತಮೋವತ್ಸಮುಚ್ಚಯೋ ಘಟತೇ ॥೬೯॥**

೬೯. ಜ್ಞಾನವು ಕರ್ಮದಲ್ಲಿರಲಾರದು, ಅದರಂತೆ ಈ ಕರ್ಮವೂ ಜ್ಞಾನದಲ್ಲಿರಲಾರದು. ಹೀಗಿರುವಲ್ಲಿ ಸೂರ್ಯ ಮತ್ತು ಕತ್ತಲೆಯಂತೆ ಇವೆರಡಕ್ಕೂ ಸಮುಚ್ಚಯವೆಂಬುದು ಹೇಗೆ ಹೊಂದೀತು ?

**ಟಿಪ್ಪಣಿ :–** ಕರ್ತೃತ್ವಬುದ್ಧಿಯೆಂದರೆ ಜ್ಞಾನವಲ್ಲ ; ಏಕೆಂದರೆ ಜ್ಞಾನವೆಂದರೆ ನಾನು ಅಕರ್ತೃ ಎಂಬ ಬುದ್ಧಿಯು. ಆದ್ದರಿಂದ ಜ್ಞಾನವಿದ್ದಲ್ಲಿ ಕರ್ಮವೂ ಇರಲು ಸಾಧ್ಯವಿಲ್ಲ.

***ತಸ್ಮಾನ್ಮೋಹನಿವೃತ್ತೌ ಜ್ಞಾನಂ ನ ಸಹಾಯಮನ್ಯದರ್ಥಯತೇ ।**
**ಯದ್ವದ್ಘನತರತಿಮಿರಪ್ರಕರಪರಿಧ್ವಂಸನೇ ಸಹಸ್ರಾಂಶುಃ ॥೭೦॥**

೭೦. ಆದ್ದರಿಂದ ದಟ್ಟವಾದ ಕತ್ತಲೆಯ ಸಮೂಹವನ್ನು ನಾಶಗೊಳಿಸುವದಕ್ಕೆ ಸೂರ್ಯನು ಮತ್ತೊಂದರ ಸಹಾಯವನ್ನು ಹೇಗೆ ಬಯಸುವದಿಲ್ಲವೋ ಅದರಂತೆ ಅಜ್ಞಾನವನ್ನು ನಾಶಗೊಳಿಸುವದಕ್ಕೆ ಜ್ಞಾನವು ಮತ್ತೊಂದು ಸಹಾಯವನ್ನು ಬಯಸುವದಿಲ್ಲ.

## ೧೭. ಬ್ರಹ್ಮವು ದೃಶ್ಯಸಂಬಂಧವಿಲ್ಲದ ಅದ್ವಿತೀಯಚೈತನ್ಯವೇ

**ಜ್ಞಾನಂ ತದೇವಮಮಲಂ ಸಾಕ್ಷೀ ವಿಶ್ವಸ್ಯ ಭವತಿ ಪರಮಾತ್ಮಾ ।**
**ಸಮ್ಬುಧ್ಯತೇ ನ ಧರ್ಮೈಃ ಸಾಕ್ಷೀ ತೈರೇವ ಸಚ್ಚಿದಾನನ್ದಃ ॥೭೧॥**

೭೧. ಈ ರೀತಿಯಲ್ಲಿ ಜ್ಞಾನವೆಂಬುದು ಜಗತ್ತಿನ ನಿರ್ಮಲವಾದ ಸಾಕ್ಷಿಯಾದ ಪರಮಾತ್ಮನಾಗಿರುವದು. ಸಚ್ಚಿದಾನಂದರೂಪವಾದ ಸಾಕ್ಷಿಯು ಆ ಧರ್ಮಗಳ ಸಂಬಂಧವುಳ್ಳದ್ದಲ್ಲ.

**ಟಿಪ್ಪಣಿ :**— ಈ ಶ್ಲೋಕಕ್ಕೆ ಸಂಬಂಧವು ಸ್ಪಷ್ಟವಾಗಿಲ್ಲ. 'ಈ ರೀತಿಯಲ್ಲಿ' ಎಂಬುದು ಯಾವದಕ್ಕೆ ಸೇರಿದ್ದೋ, 'ಆ ಧರ್ಮಗಳಿಂದ' ಎಂಬುದು ಯಾವದಕ್ಕೆ ಸೇರಿದ್ದೋ ಸ್ಪಷ್ಟವಾಗಿಲ್ಲ. ವ್ಯಾಖ್ಯಾನಕಾರರು 'ತದೇವ' ಎಂದು ಬಿಡಿಸಿಕೊಂಡಿರುತ್ತಾರೆ : ಆದರೆ ಆಗ 'ಮಮಲಮ್' ಎಂಬ ಪದಕ್ಕೆ ಅರ್ಥವಿಲ್ಲದೆ ಹೋಗುತ್ತದೆ. 'ತದೇವಮ್' ಎಂಬುದಕ್ಕೆ ಬದಲು 'ತದೇಕಮ್' ಎಂಬ ಪಾಠಾಂತರವಿದ್ದರೂ ಇರಬಹುದಾಗಿತ್ತು. ಆದರೆ ಆ ಪಾಠವು ಅಚ್ಚಿನ ಪುಸ್ತಕಗಳಲ್ಲಿಲ್ಲ.

**ರಜ್ಜ್ವಾದೇರುರಗಾದ್ಯೈಃ ಸಮ್ಬನ್ಧವದಸ್ಯ[1] ದೃಶ್ಯಸಮ್ಬನ್ಧಃ ।**
**ಸತತಮಸಙ್ಗೋಽಯಮಿತಿ ಶ್ರುತಿರಪ್ಯಮುಮರ್ಥಮೇವ ಸಾಧಯತಿ ॥೭೨॥**

೭೨. ಹಗ್ಗವೇ ಮುಂತಾದದ್ದಕ್ಕೆ ಹಾವೇ ಮುಂತಾದದ್ದರ ಸಂಬಂಧದಂತೆಯೇ ಇದಕ್ಕೆ ದೃಶ್ಯದ ಸಂಬಂಧವು. ಈ ಆತ್ಮನು ಯಾವಾಗಲೂ ಅಸಂಗನೇ ಎಂಬ ಶ್ರುತಿಯು ಈ ಅರ್ಥವನ್ನೇ ಸಾಧಿಸುತ್ತದೆ.

**ಟಿಪ್ಪಣಿ :**— ಹಗ್ಗಕ್ಕೆ ಹಾವಿನ ಸಂಬಂಧವು ಅವಿದ್ಯೆಯಿಂದಾದದ್ದು, ನಿಜವಾಗಿಲ್ಲ. ಇದರಂತೆಯೇ ಆತ್ಮನಿಗೆ ದೃಶ್ಯಸಂಬಂಧವನ್ನು ತಿಳಿಯಬೇಕು – ಎಂದರ್ಥ. ''ಅಸಙ್ಗೋಽಹ್ಯಯಂ ಪುರುಷಃ'' (ಬೃ.೪-೩-೧೫) ಎಂಬ ಶ್ರುತಿಯೇ ಇದಕ್ಕೆ ಪ್ರಮಾಣವು.

**ಕರ್ತೃ ಚ ಕರ್ಮ ಚ ಯಸ್ಯ ಸ್ಫುರತಿ ಬ್ರಹ್ಮೈವ ತನ್ನ ಜಾನಾತಿ ।**
**ಯಸ್ಯ ನ ಕರ್ತೃ ನ ಕರ್ಮ ಸ್ಫುಟತರಮಯಮೇವ ವೇದಿತುಂ ಕ್ರಮತೇ ॥೭೩॥**

೭೩. ಯಾವದಕ್ಕೆ ಕರ್ತೃವೂ ಕರ್ಮವೂ ಇರುವದೋ ಅದು ಬ್ರಹ್ಮವನ್ನು ತಿಳಿಯುವದೇ ಇಲ್ಲ. ಯಾವದಕ್ಕೆ ಕರ್ತೃವಿಲ್ಲವೋ ಕರ್ಮವೂ ಇಲ್ಲವೋ ಅದೇ ಅತಿಸ್ಫುಟವಾಗಿ ತಿಳಿಯಬಲ್ಲದು.

**ಟಿಪ್ಪಣಿ :**— ಇಲ್ಲಿ ವ್ಯಾಖ್ಯಾನವು ಯಾರಿಗೆ ಕರ್ತೃಕರ್ಮಗಳು ಕಾಣುತ್ತವೆಯೋ ಅದೇ ಬ್ರಹ್ಮವು – ಎಂದು ಬೇರೆ ಅರ್ಥವನ್ನು ಮಾಡಿರುತ್ತದೆ. ಆದರೆ ಜ್ಞಾನಸ್ವರೂಪವಸ್ತು ನಿರ್ಣಯಿಸುವದಕ್ಕೆ ಬಂದ ಪ್ರಕರಣವಾದ್ದರಿಂದ ಆ ಅರ್ಥವನ್ನು ನಾವು ಕೈಬಿಟ್ಟಿರುತ್ತೇವೆ. ಜ್ಞಾನವು ಜ್ಞಾತೃವನ್ನಾಶ್ರಯಿಸಿಕೊಂಡು ವಿಷಯವನ್ನು ಬೆಳಗುವದೆಂದು ಲೋಕಪ್ರಸಿದ್ಧವಾಗಿದೆ. ಆದರೆ ಬ್ರಹ್ಮವು ವಿಷಯವಲ್ಲವಾದ್ದರಿಂದ ಅಂಥ ಜ್ಞಾನವು ಬ್ರಹ್ಮವನ್ನು ಬೆಳಗಲಾರದು. ಬ್ರಹ್ಮವೇ ಜ್ಞಾನರೂಪವಾಗಿರುತ್ತದೆ.. ಈ ಜ್ಞಾನಕ್ಕೆ ಕರ್ತೃವಾದ ಜ್ಞಾತೃವಾಗಲಿ ಕರ್ಮವೆಂಬ

1.ಸಂಬನ್ಧಸ್ತಸ್ಯ ಪಾ ॥

ವಿಷಯವಾಗಲಿ ಇಲ್ಲ ; ಅದು ಅದ್ವಿತೀಯಚೈತನ್ಯವು. ಅದು ಸ್ವಯಂಪ್ರಕಾಶವಾಗಿರುವದ ರಿಂದ ತಾನೇ ತನ್ನನ್ನು ಬೆಳಗುತ್ತದೆ ಎಂದು ಹೇಳಬಹುದು.

ಕರ್ತೃತ್ವಾದಿಕಮೇತನ್ಮಾಯಾಶಕ್ತ್ಯಾ ಪ್ರತೀಯತೇ ನಿಖಿಲಮ್ ।
ಇತಿ ಕೇಚಿದಾಹುರೇಷಾ ಭ್ರಾನ್ತಿರ್ಬ್ರಹ್ಮಾತಿರೇಕತೋ ನಾನ್ಯತ್ ॥೭೪॥

೭೪. ಈ ಕರ್ತೃತ್ವವೇ ಮುಂತಾದದ್ದೆಲ್ಲವೂ ಮಾಯಾಶಕ್ತಿಯಿಂದ ತೋರುವದೆಂದು ಕೆಲವರು ಹೇಳುತ್ತಾರೆ. ಇದು ಭ್ರಾಂತಿ, ಬ್ರಹ್ಮಕ್ಕಿಂತ ಬೇರೆಯಾಗಿ ಏನೊಂದೂ ಇಲ್ಲ.

**ಟಿಪ್ಪಣಿ :–** ಮಾಯಾಶಕ್ತಿಯಿಂದ ತೋರುತ್ತದೆ ಎಂಬುದೂ ಮಂದಾಧಿಕಾರಿಗಳಿಗಾಗಿ ಹೇಳಿರುವದು. ಪರಮಾರ್ಥವಾಗಿ ಮಾಯೆಯೆಂಬುದೂ ಬ್ರಹ್ಮವೇ ಎಂದು ಅಭಿಪ್ರಾಯ.

## ೧೮. ಸದ್ರೂಪವಾದ ಬ್ರಹ್ಮವೇ ಜಗತ್ಕಾರಣವು

ತಸ್ಮಿನ್ ಬ್ರಹ್ಮಣಿ ವಿದಿತೇ ವಿಶ್ವಮಶೇಷಂ ಭವೇದಿದಂ ವಿದಿತಮ್ ।
ಕಾರಣಮೃದಿ ವಿದಿತಾಯಾಂ ಘಟಕರಕಾದ್ಯಾ ಯಥಾವಗಮ್ಯನ್ತೇ ॥೭೫॥

೭೫. ಆ ಬ್ರಹ್ಮವನ್ನು ತಿಳಿದುಕೊಂಡರೆ ಜಗತ್ತೆಲ್ಲವನ್ನೂ ತಿಳಿದುಕೊಂಡಂತೆ ಆಗುವದು. ಕಾರಣವಾದ ಮಣ್ಣನ್ನು ಅರಿತುಕೊಂಡರೆ ಗಡಿಗೆ ಕುಡಿಕೆ ಮುಂತಾದವನ್ನು ಹೇಗೆ ಅರಿತುಕೊಂಡಂತಾಗುವದೋ ಹಾಗೆ.

**ಟಿಪ್ಪಣಿ :–** ಛಾಂ. ೬–೧–೪ರಲ್ಲಿ ಈ ಮಣ್ಣಿನ ದೃಷ್ಟಾಂತವನ್ನು ಕೊಟ್ಟಿದೆ.

ತದಿದಂ ಕಾರಣಮೇಕಂ ವಿಗತವಿಶೇಷಂ ವಿಶುದ್ಧಚಿದ್ರೂಪಮ್ ।
ತಸ್ಮಾತ್ಸದೇಕರೂಪಾನ್ಮಾಯೋಪಹಿತಾದಭೂದಶೇಷಮಿದಮ್[1] ॥೭೬॥

೭೬. ಆ ಈ ಕಾರಣವು ಒಂದು, ವಿಶೇಷಗಳಿಲ್ಲದ್ದು, ವಿಶುದ್ಧ ಚೈತನ್ಯರೂಪವಾದದ್ದು. ಸನ್ಮಾತ್ರರೂಪವಾದ ಈ ಮಾಯೋಪಹಿತ ಬ್ರಹ್ಮದಿಂದ ಇದೆಲ್ಲವೂ ಆಗಿರುತ್ತದೆ.

ಕಾರಣಮಸದಿತಿ ಕೇಚಿತ್ ಕಥಯನ್ತ್ಯಸತೋ ಭವೇನ್ನ ಕಾರಣತಾ ।
ಅಙ್ಕುರಜನನೀ ಶಕ್ತಿಃ ಸತಿ ಖಲು ಬೀಜೇ ಸಮೀಕ್ಷ್ಯತೇ ಸಕಲೈಃ ॥೭೭॥

1. ಮಾಯೋಪಹಿತಾದಭೂದಿದಂ ವಿಶ್ವಮ್ ಪಾ ॥

೭೭. ಜಗತ್ಕಾರಣವು ಅಸತ್ತೆಂದು ಕೆಲವರು ಹೇಳುತ್ತಾರೆ. ಆದರೆ ಅಸತ್ತಾದದ್ದಕ್ಕೆ ಕಾರಣತ್ವವು ಹೊಂದುವದಿಲ್ಲ. ಬೀಜವಿದ್ದರೆ ಮಾತ್ರ ಮೊಳಕೆಯನ್ನುಂಟುಮಾಡುವ ಶಕ್ತಿಯಿರುವದೆಂದು ಎಲ್ಲರಿಗೂ ಕಂಡುಬಂದಿದೆಯಲ್ಲವೆ ?

**ಟಿಪ್ಪಣಿ** :– ಇಲ್ಲದ್ದು ಕಾರಣವಾಗಲಾರದೆಂಬುದು ಲೋಕಸಿದ್ಧ. ಆದರೂ ಶೂನ್ಯವಾದನಿರಾಕರಣಕ್ಕಾಗಿ ಇದನ್ನು ಹೇಳಿದೆ. ಈ ಅಭಿಪ್ರಾಯವು ಛಾಂ.೬–೨–೨ರಲ್ಲಿದೆ.

**ಕಾರಣಮಸದಿತಿ ಕಥಯನ್ ವನ್ಧ್ಯಾಪುತ್ರೇಣ ನಿರ್ವಹೇತ್ಕಾರ್ಯಮ್ ।**
**ಕಿಞ್ಚ ಮೃಗತೃಷ್ಣಿಕಾಮ್ಭಃ ಪೀತ್ವೋದನ್ಯಾಂ ಮಹೀಯಸೀಂ ಶಮಯೇತ್ ॥೭೮॥**

೭೮. ಕಾರಣವು ಅಸತ್ತೆನ್ನುವಾತನು ಬಂಜೆಯ ಮಗನಿಂದಲೇ ಕೆಲಸವನ್ನು ಮಾಡಿಕೊಂಡಾನು ; ಮತ್ತು ಬಿಸಿಲುಕುದುರೆಯ ನೀರನ್ನು ಕುಡಿದು ಹಿರಿದಾದ ಬಾಯಾರಿಕೆಯನ್ನು ಇಂಗಿಸಿಕೊಂಡಾನು !

**ಯಸ್ಮಾನ್ನ ಸೋಽಯಮಸತೋ ವಾದಃ ಸಂಭವತಿ ಶಾಸ್ತ್ರಯುಕ್ತಿಭ್ಯಾಮ್ ।**
**ತಸ್ಮಾತ್ಸದೇವ ತತ್ತ್ವಂ ಸರ್ವೇಷಾಂ ಭವತಿ ಕಾರಣಂ ಜಗತಾಮ್ ॥೭೯॥**

೭೯. ಈ ಅಸತ್ಕಾರಣವಾದವು ಶಾಸ್ತ್ರಯುಕ್ತಿಗಳಿಗೆ ಹೊಂದುವದಿಲ್ಲವಾದ್ದರಿಂದ ಸರ್ವಜಗತ್ತುಗಳಿಗೂ ಕಾರಣವಾದ ತತ್ತ್ವವು ಸತ್ತೇ ಎಂದು ಸಿದ್ಧವಾಗುತ್ತದೆ.

**ಟಿಪ್ಪಣಿ** :– ಅಸತ್ಕಾರಣವಾದವನ್ನು ಛಾಂದೋಗ್ಯ ೬–೨–೨ರಲ್ಲಿ ತಿರಸ್ಕರಿಸಿದೆ.

## ೧೯. ವಿವೇಕಾವಿವೇಕದಿಂದ ಬ್ರಹ್ಮದಲ್ಲಿ ಬೇರೆಬೇರೆ ಬುದ್ಧಿಗಳುಂಟಾಗುತ್ತವೆ

***ಜಗದಾಕಾರತಯಾಪಿ ಪ್ರಥತೇ ಗುರುಶಿಷ್ಯವಿಗ್ರಹತಯಾಪಿ ।**
**ಬ್ರಹ್ಮಾಕಾರತಯಾಪಿ[1] ಪ್ರತಿಭಾತೀದಂ ಪರಾತ್ಪರಂ ತತ್ತ್ವಮ್ ॥೮೦॥**

೮೦. ಈ ಪರಾತ್ಪರತತ್ತ್ವವು ಜಗತ್ತಿನ ರೂಪದಿಂದಲೂ ಗುರುಶಿಷ್ಯರ ರೂಪದಿಂದಲೂ ಬ್ರಹ್ಮರೂಪದಿಂದಲೂ ತೋರುತ್ತದೆ.

---

1. "ಬ್ರಹ್ಮಾದ್ಯಾಕಾರತಯಾ" ಎಂಬ ಪಾಠವನ್ನಿಟ್ಟುಕೊಂಡು ವ್ಯಾಖ್ಯಾನದಲ್ಲಿ ವಿವರಿಸಿದೆ. ಅದು ಮುಂದಿನ ಶ್ಲೋಕಕ್ಕೆ ಹೊಂದುವದಿಲ್ಲ.

ಟಿಪ್ಪಣಿ :- ಜ್ಞಾನಿಗಳಿಗೆ ಬ್ರಹ್ಮರೂಪದಿಂದಲೂ ಮುಮುಕ್ಷುಗಳಿಗೆ ಗುರು ಶಿಷ್ಯರೂಪದಿಂದಲೂ ಮಿಕ್ಕವರಿಗೆ ಜಗದ್ರೂಪದಿಂದಲೂ ಕಾಣುತ್ತದೆ.

**ಸತ್ಯಂ ಜಗದಿತಿ ಭಾನಂ ಸಂಸೃತಯೇ ಸ್ಯಾದಪಕ್ವಚಿತ್ತಾನಾಮ್ ।**
**ತಸ್ಮಾದಸತ್ಯಮೇತನ್ನಿಖಿಲಂ ಪ್ರತಿಪಾದಯನ್ತಿ ನಿಗಮಾನ್ತಾಃ ॥೮೧॥**

೮೧. ಚಿತ್ತವು ಪರಿಪಕ್ವವಾಗದವರಿಗೆ ಈ ಜಗತ್ತು ಸತ್ಯವೆಂದು ತೋರಿ ಸಂಸಾರಫಲವನ್ನು ಕೊಟ್ಟೀತು- ಎಂದು ಇದೆಲ್ಲವೂ ಅಸತ್ಯವೆಂದು ವೇದಾಂತ ವಚನಗಳು ಹೇಳುತ್ತವೆ.

**ಪರಿಪಕ್ವಮಾನಸಾನಾಂ ಪುರುಷವರಾಣಾಂ ಪುರಾತನೈಃ ಸುಕೃತೈಃ ।**
**ಬ್ರಹ್ಮೈವೇದಂ ಸರ್ವಂ ಜಗದಿತಿ ಭೂಯಃ ಪ್ರಬೋಧಯತ್ಯೇಷಃ ॥೮೨॥**

೮೨. ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಕರ್ಮಗಳಿಂದ ಮನಸ್ಸು ಪರಿಪಕ್ವವಾಗಿರುವ ಪುರುಷಶ್ರೇಷ್ಠರಿಗಾದರೋ ಈ ವೇದವು 'ಇದೆಲ್ಲವೂ ಬ್ರಹ್ಮವೇ' ಎಂದು ಮತ್ತೊಮ್ಮೆ ಬೋಧಿಸುತ್ತದೆ.

ಟಿಪ್ಪಣಿ :- ''ಇದಂ ಸರ್ವಂ ಯದಯಮಾತ್ಮಾ'' (ಬೃ.೨-೪-೬), ''ಬ್ರಹ್ಮೈವೇದಂ ವಿಶ್ವಮ್'' (ಮುಂ.೨-೨-೧೨) ಮುಂತಾದ ಶ್ರುತಿಗಳಲ್ಲಿ ಹೀಗೆಂದು ಬೋಧಿಸಿರುತ್ತದೆ.

**ಅನವಗತಕಾಞ್ಚನಾನಾಂ ಭೂಷಣಧೀರೇವ ಭೂಷಣೇ ಹೈಮೇ ।**
**ಏವಮವಿವೇಕಭಾಜಾಂ ಜಗತಿ ಜನಾನಾಂ ನ ತಾತ್ತ್ವಿಕೀ ಧಿಷಣಾ ॥೮೩॥**

೮೩. ಚಿನ್ನವೆಂಬುದನ್ನು ಅರಿಯದವರಿಗೆ ಚಿನ್ನದೊಡವೆಯಲ್ಲಿ ಬರಿಯ ಒಡವೆ ಎಂಬ ಬುದ್ಧಿಯೇ ಇರುತ್ತದೆ. ಇದರಂತೆ ಅವಿವೇಕಿಗಳಾದ ಜನರಿಗೆ ಜಗತ್ತಿನಲ್ಲಿ ಪರಮಾರ್ಥತತ್ತ್ವದ ಬುದ್ಧಿಯಿರುವದಿಲ್ಲ.

## ೨೦. ನಾನೆಂಬುದರ ನಿಜವಾದ ಅರ್ಥವು ಆತ್ಮನೇ

**ಅಹಮಾಲಮ್ಬನಸಿದ್ಧಂ ಕಸ್ಯ ಪರೋಕ್ಷಂ ಭವೇದಿದಂ ಬ್ರಹ್ಮ ।**
**ತದಪಿ ವಿಚಾರವಿಹೀನೈರಪರೋಕ್ಷಯಿತುಂ ನ ಶಕ್ಯತೇ ಮುಗ್ಧೈಃ ॥೮೪॥**

೮೪. ಅಹಂಪ್ರತ್ಯಯಕ್ಕೆ ಆಶ್ರಯವಾಗಿ ಸಿದ್ಧವಾಗಿರುವ ಈ ಬ್ರಹ್ಮವು ಯಾರಿಗೆ ತಾನೆ ಪರೋಕ್ಷವಾಗಿದ್ದೀತು ? ಹೀಗಿದ್ದರೂ ವಿಚಾರಶೂನ್ಯರಾದ ಮೂಢರಿಗೆ ಇದನ್ನು ಅಪರೋಕ್ಷವಾಗಿ ಕಾಣುವದಕ್ಕೆ ಆಗುವದಿಲ್ಲ.

**ಟಿಪ್ಪಣಿ :**– ಅತ್ಯಂತ ಅಪರೋಕ್ಷವಾಗಿರುವದೇ ಅಜ್ಞಾನದಿಂದ ಪರೋಕ್ಷ ವಾಗಿರುವಂತೆ ತೋರುತ್ತದೆ.

**ಅಹಮಿದಮಿತಿ ಚ ಮತಿಭ್ಯಾಂ ಸತತಂ ವ್ಯವಹರತಿ ಸರ್ವಲೋಕೋಽಪಿ ।**
**ಪ್ರಥಮಾ ಪ್ರತೀಚಿ ಚರಮಾ ನಿವಸತಿ ವಪುರಿನ್ದ್ರಿಯಾದಿಬಾಹ್ಯಾರ್ಥೇ ॥೮೫॥**

೮೫. 'ನಾನು', 'ಇದು'– ಎಂಬ ಪ್ರತ್ಯಯಗಳಿಂದ ಎಲ್ಲಾ ಜನರೂ ಯಾವಾಗಲೂ ವ್ಯವಹಾರಮಾಡುತ್ತಿದಾರೆ. ಮೊದಲನೆಯದು ಪ್ರತ್ಯಗಾತ್ಮನಲ್ಲಿರುತ್ತದೆ, ಕೊನೆಯದು ಶರೀರ, ಇಂದ್ರಿಯಗಳು – ಮುಂತಾದ ಹೊರಗಿನ ವಿಷಯದಲ್ಲಿರುತ್ತದೆ.

**ವಪುರಿನ್ದ್ರಿಯಾದಿವಿಷಯೇ ಯಾಽಹಮ್ಬುದ್ಧಿರ್ಮಹತ್ಯಸೌ[1] ಭ್ರಾನ್ತಿಃ ।**
**ತದ್ಬುದ್ಧಿರತಸ್ಮಿನ್ನಿತ್ಯಧ್ಯಾಸತ್ವೇನ[2] ಶಾಸ್ಯಮಾನತ್ವಾತ್ ॥೮೬॥**

೮೬. ಶರೀರ, ಇಂದ್ರಿಯಗಳು – ಮುಂತಾದವುಗಳ ವಿಷಯದಲ್ಲಿರುವ ನಾನೆಂಬ ಬುದ್ಧಿಯು ಮಹಾಭ್ರಾಂತಿಯು. ಏಕೆಂದರೆ 'ಅದಲ್ಲದ್ದರಲ್ಲಿ ಅದು' ಎಂಬುದೇ ಅಧ್ಯಾಸವೆಂದು ಹೇಳಿರುತ್ತದೆ.

**ಟಿಪ್ಪಣಿ :**– ''ಅತಸ್ಮಿಂಸ್ತದ್ಬುದ್ಧಿಃ'' ಎಂದು ಭಾಷ್ಯದಲ್ಲಿ ಹೇಳಿರುವದರಿಂದ ದೇಹೇಂದ್ರಿಯಾದಿಗಳಲ್ಲಿ ನಾನೆಂಬ ಬುದ್ಧಿಯು ಭ್ರಾಂತಿಯೇ – ಎಂದು ಬರೆಧಿರುವದನ್ನು ನೋಡಿದರೆ ಗ್ರಂಥಕರ್ತರು ಯಾರೆಂಬ ಬಗ್ಗೆ ಸಂಶಯವಾಗುತ್ತದೆ. ಪೀಠಿಕೆಯನ್ನು ನೋಡಿರಿ.

**ತಸ್ಮಾದಶೇಷಸಾಕ್ಷೀ ಪರಮಾತ್ಮೈವಾಹಮರ್ಥ ಇತ್ಯುಚಿತಮ್ ।**
**ಅಜಡವದೇವ ಜಡೋಽಯಂ ಸತ್ಸಂಬನ್ಧಾದ್ಭವತ್ಯಹಙ್ಕಾರಃ ॥೮೭॥**

೮೭. ಆದ್ದರಿಂದ ಎಲ್ಲಕ್ಕೂ ಸಾಕ್ಷಿಯಾಗಿರುವ ಪರಮಾತ್ಮನೇ ನಾನೆಂಬುದರ ಅರ್ಥವು– ಎಂಬುದೇ ಯೋಗ್ಯವು. ಜಡವಾದ ಈ ಅಹಂಕಾರವು ಸತ್ಸಂಬಂಧದಿಂದ ಜಡವಲ್ಲವೆಂಬಂತೆಯೇ ಕಾಣುತ್ತದೆ.

**ಟಿಪ್ಪಣಿ :**– ಅಹಂಕಾರವನ್ನೇ ಚೈತನ್ಯವೆಂಬುದು ಆತ್ಮನ ಅಧ್ಯಾಸದಿಂದ. ಆತ್ಮನೇ ನಿಜವಾದ ನಾನು.

---

1. 'ವಿಷಯಾಹಮ್ಬುದ್ಧಿಶ್ಚೇತ್' ಪಾ ॥

2. 'ಅತಸ್ಮಿಂಸ್ತದ್ಬುದ್ಧಿರಿತ್ಯಧ್ಯಾಸೇನ' ಎಂಬ ಪಾಠವು ಛಂದಸ್ಸಿಗೆ ಹೊಂದುವದಿಲ್ಲ.

**ತಸ್ಮಾತ್ಸರ್ವಶರೀರೇಷ್ವಹಮಹಮಿತ್ಯೇವ ಭಾಸತೇ ಸ್ಪಷ್ಟಃ ।**
**ಯಃ ಪ್ರತ್ಯಯೋ ವಿಶುದ್ಧಸ್ತಸ್ಯ ಬ್ರಹ್ಮೈವ ಭವತಿ ಮುಖ್ಯೋಽರ್ಥಃ ॥೮೮॥**

೮೮. ಆದ್ದರಿಂದ 'ನಾನು' 'ನಾನು' ಎಂದು ಎಲ್ಲಾ ಶರೀರಗಳಲ್ಲಿಯೂ ಸ್ಪಷ್ಟವಾಗಿ ತೋರುತ್ತಿರುವ ಪ್ರತ್ಯಯಕ್ಕೆ ಪರಿಶುದ್ಧವಾದ ಬ್ರಹ್ಮವೇ ಮುಖ್ಯಾರ್ಥವು.

**ಗೋಶಬ್ದಾರ್ಥೋ ಗೋತ್ವಂ ತದಪಿ ವ್ಯಕ್ತಿಃ ಪ್ರತೀಯತೇಽರ್ಥತಯಾ ।**
**ಅಹಮರ್ಥಃ ಪರಮಾತ್ಮಾ ತದ್ವದ್ಭ್ರಾನ್ತ್ಯಾ ಭವತ್ಯಹಙ್ಕಾರಃ ॥೮೯॥**

೮೯. ಗೋಶಬ್ದಕ್ಕೆ ಗೋತ್ವವೇ ಅರ್ಥವು.[1] ಆದರೂ ವ್ಯಕ್ತಿಯೇ ಅರ್ಥವಾಗಿ ತೋರುತ್ತದೆ. ಇದರಂತೆ ನಾನೆಂಬ ಮಾತಿಗೆ ಪರಮಾತ್ಮನೇ ಅರ್ಥವು. ಆದರೂ ಭ್ರಾಂತಿಯಿಂದ ಅಹಂಕಾರವೂ ಅರ್ಥವಾಗಿರುತ್ತದೆ.

**ಟಿಪ್ಪಣಿ :–** ಜಾತಿಯು ಶಬ್ದಕ್ಕೆ ಅರ್ಥವಾಗಿದ್ದರೂ ವ್ಯಕ್ತಿಯು ತೋರುವಂತೆ– ಎಂಬ ದೃಷ್ಟಾಂತವನ್ನು ದಾರ್ಷ್ಟಾಂತಿಕಕ್ಕೆ ಸರ್ವಥಾ ಸಮಾನವೆಂದು ಭಾವಿಸಬಾರದು. ಏಕೆಂದರೆ ಪರಮಾತ್ಮನಲ್ಲಿ ಜಾತಿಯಿಲ್ಲ, ವಾಚ್ಯತ್ವವೂ ಇಲ್ಲ.

**ದಗ್ಧೃತ್ವಾದಿಕಮಯಸಃ ಪಾವಕಸಙ್ಗೇನ ಭಾಸತೇ ಯದ್ವತ್ ।**
**ತದ್ವಚ್ಚೇತನಸಙ್ಗಾದಹಮಿ ಪ್ರತಿಭಾನ್ತಿ ಕರ್ತೃತಾದೀನಿ ॥ ೯೦ ॥**

೯೦. ಬೆಂಕಿಯ ಸಂಬಂಧದಿಂದ ಕಬ್ಬಿಣದಲ್ಲಿ ಸುಡುವದೇ ಮುಂತಾದವು ತೋರುವಂತೆ ಚೇತನದ ಸಂಬಂಧದಿಂದ ಅಹಂಕಾರದಲ್ಲಿ ಕರ್ತೃತ್ವವೇ ಮುಂತಾದವು ತೋರುತ್ತದೆ.

**ಟಿಪ್ಪಣಿ :–** ಇಲ್ಲಿಯೂ ದೃಷ್ಟಾಂತದಾರ್ಷ್ಟಾಂತಿಕಗಳಿಗೆ ಸರ್ವಸಮತ್ವವಿಲ್ಲ. ಚೈತನ್ಯದಲ್ಲಿ ಕರ್ತೃತ್ವವು ನಿಜವಾಗಿರುವದಿಲ್ಲ.

**ದೇಹೇನ್ದ್ರಿಯಾದಿದೃಶ್ಯವ್ಯತಿರಿಕ್ತಂ ವಿಮಲಮತುಲಮದ್ವೈತಮ್ ।**
**ಅಹಮರ್ಥ ಇತಿ ವಿದಿತ್ವಾ ತದ್ವ್ಯತಿರಿಕ್ತಂ ನ ಕಲ್ಪಯೇತ್ ಕಿಂಚಿತ್ ॥೯೧॥**

೯೧. ದೇಹ, ಇಂದ್ರಿಯಗಳು – ಮುಂತಾದ ದೃಶ್ಯಗಳಿಗಿಂತ ಬೇರೆಯಾಗಿರುವ ನಿರ್ಮಲವಾದ ನಿರುಪಮಾನವಾದ ಅದ್ವೈತವೇ ಅಹಮರ್ಥವೆಂಬುದನ್ನು ತಿಳಿದುಕೊಂಡ ಬಳಿಕ ಅದಕ್ಕಿಂತ ಬೇರೆಯಾಗಿ ಯಾವದನ್ನೂ ಕಲ್ಪಿಸಬಾರದು.

---

1. ಜಾತಿಯೇ ಶಬ್ದಾರ್ಥವು ಎಂಬ ಮೀಮಾಂಸಕರ ಅಭಿಪ್ರಾಯವನ್ನನುಸರಿಸಿ ಇದನ್ನು ಹೇಳಿದೆ.

**ಯದ್ವತ್ಸುಖದುಃಖಾನಾಮವಯವಭೇದಾದನೇಕತಾ ದೇಹೇ ।**
**ತದ್ವದಿಹಾಸತಿ ಭೇದೇಽಪ್ಯನುಭವ[1] ವೈವಿಧ್ಯಮಾತ್ಮನಾ[2] ಮೇಷಾಮ್ ॥೯೨॥**

೯೨. ಹೇಗೆ ಒಂದೇ ದೇಹದಲ್ಲಿ ಅವಯವಗಳು ಬೇರೆಬೇರೆಯಾಗಿರುವದರಿಂದ ಸುಖದುಃಖಗಳು ಬೇರೆಬೇರೆಯಾಗಿರುತ್ತವೆಯೋ ಅದರಂತೆ ಭೇದವಿಲ್ಲದಿದ್ದರೂ ಈ ಆತ್ಮರುಗಳಿಗೆ ವಿವಿಧವಾದ ಅನುಭವಗಳುಂಟಾಗುತ್ತಿರುವವು.

ಟಿಪ್ಪಣಿ :– ಒಬ್ಬೊಬ್ಬರಿಗೊಂದೊಂದು ಬಗೆಯ ಅನುಭವವಾಗುತ್ತಿರುವದರಿಂದ ಆತ್ಮರು ಅನೇಕರೆಂದು ತಿಳಿಯಬಾರದು.

## ೨೧. ಆತ್ಮನೊಬ್ಬನೇ ಸತ್ಯ, ಮಿಕ್ಕದ್ದೆಲ್ಲವೂ ಮಾಯಿಕ

**ಕಿಮಿದಂ ಕಿಮಸ್ಯ ರೂಪಂ ಕಥಮಿದಮಾಸೀದಮುಷ್ಯ[3] ಕೋ ಹೇತುಃ ।**
**ಇತಿ ನ ಕದಾಪಿ ವಿಚಿನ್ತ್ಯಂ ಚಿನ್ತ್ಯಂ ಮಾಯೇತಿ ಧೀಮತಾ ವಿಶ್ವಮ್ ॥೯೩॥**

೯೩. ಇದೇನು ? ಇದರ ಸ್ವರೂಪವೇನು ? ಇದು ಹೇಗಾಯಿತು ? ಇದಕ್ಕೆ ಕಾರಣವೇನು ?– ಎಂದು ಎಂದಿಗೂ ಚಿಂತಿಸಲೇಬಾರದು. ವಿವೇಕಿಯಾದವನು ಈ ಜಗತ್ತು ಮಾಯೆ ಎಂದೇ ಚಿಂತಿಸಬೇಕು.

***ದನ್ತಿನಿ ದಾರುವಿಕಾರೇ ದಾರು ತಿರೋ ಭವತಿ ಸೋಽಪಿ ತತ್ರೈವ ।**
**ಜಗತಿ ತಥಾ ಪರಮಾತ್ಮಾ ಪರಮಾತ್ಮನ್ಯಪಿ ಜಗತ್ತಿರೋಧತ್ತೇ ॥೯೪॥**

೯೪. ಮರದಿಂದಾಗಿರುವ ಆನೆಯಲ್ಲಿ ಮರವು ಮುಚ್ಚಿಕೊಂಡಿರುತ್ತದೆ. ಆನೆಯೂ ಆ ಮರದಲ್ಲಿಯೇ ಮುಚ್ಚಿಕೊಂಡಿರುತ್ತದೆ. ಅದರಂತೆ ಜಗತ್ತಿನಲ್ಲಿ ಪರಮಾತ್ಮನೂ ಪರಮಾತ್ಮನಲ್ಲಿ ಜಗತ್ತೂ ಮುಚ್ಚಿಹೋಗಿರುತ್ತದೆ.

ಟಿಪ್ಪಣಿ :– ಬ್ರಹ್ಮವನ್ನು ಕಂಡವರಿಗೆ ಜಗತ್ತಿಲ್ಲ, ಜಗತ್ತನ್ನು ಕಂಡವರಿಗೆ ಬ್ರಹ್ಮವಿಲ್ಲ. ೮೦, ೮೨, ೮೩ನೆಯ ಶ್ಲೋಕಗಳನ್ನು ನೋಡಿರಿ.

**ಆತ್ಮಮಯೇ ಮಹತಿ ಪಟೇ ವಿವಿಧಜಗಚ್ಚಿತ್ರಮಾತ್ಮನಾ ಲಿಖಿತಮ್ ।**
**ಸ್ವಯಮೇವ ಕೇವಲಮಸೌ ಪಶ್ಯನ್ಪ್ರಮುದಂ ಪ್ರಯಾತಿ ಪರಮಾತ್ಮಾ ॥೯೫॥**

೯೫. ಆತ್ಮನೆಂಬ ಮಹಾಪಟದ ಮೇಲೆ ಆತ್ಮನೇ ವಿವಿಧವಾಗಿರುವ ಜಗತ್ತೆಂಬ ಚಿತ್ರವನ್ನು ಬರೆದಿರುತ್ತಾನೆ. ಆ ಪರಮಾತ್ಮನು ತಾನೇ ಇದನ್ನು ನೋಡಿ ಸಂತೋಷಪಡುತ್ತಾನೆ.

---

1. ತದ್ವದಿಹ ಸತ್ಯಭೇದೇಽಪ್ಯನುಭವ............ಪಾ ॥

2. ಅನುಭವವೈಚಿತ್ರಮ್ ಪಾ ॥   3. ಕಥಮೇತದಭೂತ್ ಪಾ ॥

ಟಿಪ್ಪಣಿ :– ವ್ಯಾಖ್ಯಾನಕಾರನು ಯೋಗಿನೀಹೃದಯವೆಂಬ ಗ್ರಂಥದಿಂದ ಈ ಶ್ಲೋಕವನ್ನು ಉದಾಹರಿಸಿರುತ್ತಾನೆ : "ಜಗಚ್ಚಿತ್ರಂ ಸಮಾಲಿಖ್ಯ ಸ್ವೇಚ್ಛಾತೂಲಿಕಯಾತ್ಮನಿ । ಸ್ವಯಮೇವ ಸಮಾಲೋಕ್ಯ ಪ್ರೀಣಾತಿ ಭಗವಾನ್ ಶಿವಃ ॥" ಈ ಉದಾಹೃತಗ್ರಂಥವು ಕಾಶ್ಮೀರಶೈವಗ್ರಂಥವೆ? ಎಂಬುದು ವಿಚಾರಣೀಯವಾಗಿದೆ.

**ಚಿನ್ಮಾತ್ರಮಲಮಕ್ಷಯಮದ್ವಯಮಾನನ್ದಮನುಭವಾರೂಢಮ್ ।**
**ಬ್ರಹ್ಮೈವಾಸ್ತಿ ತದನ್ಯನ್ನ ಕಿಮಪ್ಯಸ್ತೀತಿ ನಿಶ್ಚಯೋ ವಿದುಷಾಮ್ ॥೯೬॥**

೯೬. ಚಿನ್ಮಾತ್ರವಾಗಿಯೂ ನಿರ್ಮಲವಾಗಿಯೂ ನಾಶರಹಿತವಾಗಿಯೂ ತನಗೆರಡನೆಯದಿಲ್ಲದ್ದಾಗಿಯೂ ಆನಂದರೂಪವಾಗಿಯೂ ಅನುಭವಮಾತ್ರಕ್ಕೆ ತಿಳಿದುಬರುವ ಬ್ರಹ್ಮವೊಂದೇ ಇದೆ, ಇನ್ನೊಂದು ಯಾವದೂ ಇಲ್ಲವೇ ಇಲ್ಲ– ಎಂಬುದು ಜ್ಞಾನಿಗಳ ನಿಶ್ಚಯವು.

**ವ್ಯವಹಾರಸ್ಯ ದಶೇಯಂ ವಿದ್ಯಾವಿದ್ಯೇತಿ ವೇದಪರಿಭಾಷಾ[1] ।**
**ನಾಸ್ತ್ಯೇವ ತತ್ತ್ವದೃಷ್ಟ್ಯಾ ತತ್ತ್ವಂ ಬ್ರಹ್ಮೈವ ನಾನ್ಯದಸ್ತ್ಯಸ್ಮಾತ್ ॥೯೭॥**

೯೭. ವೇದದಲ್ಲಿ ವಿದ್ಯೆ, ಅವಿದ್ಯೆ – ಎಂದು ಹೇಳಿರುವ ಪರಿಭಾಷೆಯೆಂಬ ವ್ಯವಹಾರದಶೆಯು ತತ್ತ್ವದೃಷ್ಟಿಯಿಂದ ಇಲ್ಲವೇ ಇಲ್ಲ. ಬ್ರಹ್ಮವೊಂದೇ ತತ್ತ್ವವು, ಅದಕ್ಕಿಂತ ಬೇರೆಯಿಲ್ಲವೇ ಇಲ್ಲ.

**ಅಸ್ತ್ಯನ್ಯದಿತಿ ಮತಂ ಚೇತ್ ತದಪಿ ಬ್ರಹ್ಮೈವ[2] ಚಾಸ್ತಿತಾರೂಪಮ್ ।**
**ವ್ಯತಿರಿಕ್ತಮಸ್ತಿತಾಯಾ ನಾಸ್ತಿತಯಾ ಶೂನ್ಯಮೇವ ತತ್ಸಿದ್ಧಮ್ ॥೯೮॥**

೯೮. ಮತ್ತೊಂದು ಇದೆಯೆಂದರೆ ಅದೂ ಸದ್ರೂಪವಾದ ಬ್ರಹ್ಮವೇ. ಸದ್ರೂಪಕ್ಕೆ ಬೇರೆಯಾದದ್ದು ಅಸದ್ರೂಪವೇ ಆದ್ದರಿಂದ ಅದು ಶೂನ್ಯ(ಇಲ್ಲ)ವೆಂದೇ ಸಿದ್ಧವಾಗುತ್ತದೆ.

## ೨೨. ಜೀವನ್ಮುಕ್ತಿವ್ಯವಹಾರ

**ತತ್ತ್ವಾವಬೋಧಶಕ್ತ್ಯಾ ಸುಸ್ಥಿತಯಾ[3] ಬಾಧಿತಾಪಿ ಸಾ ಮಾಯಾ ।**
**ಆದೇಹಪಾತಮೇಷಾಮಾಭಾತ್ಯಾತ್ಮಾಪ್ಯಯಂ ನಿಜೋ ವಿದುಷಾಮ್ ॥೯೯॥**

೯೯. ಸುಸ್ಥಿರವಾಗಿರುವ ತತ್ತ್ವಜ್ಞಾನಶಕ್ತಿಯಿಂದ ಆ ಮಾಯೆ ಬಾಧಿತವಾಗಿದ್ದರೂ ಈ ಜ್ಞಾನಿಗಳಿಗೆ ಶರೀರವು ಬೀಳುವವರೆಗೂ ತೋರುತ್ತಲೇ ಇರುತ್ತದೆ. ಅವರ ನಿಜವಾದ ಈ ಆತ್ಮನೂ ತೋರುತ್ತಲೇ ಇರುತ್ತಾನೆ.

1. ಭೇದಪರಿಭಾಷಾ ಪಾ ॥ 2. ಬ್ರಹ್ಮೈತದಸ್ತಿತಾರೂಪಮ್ ಪಾ ॥ 3. ಸ್ಥಿರತಾಯಾ ಪಾ ॥

*ಏಷ ವಿಶೇಷೋ ವಿದುಷಾಂ ಪಶ್ಯನ್ತೋಽಪಿ ಪ್ರಪಞ್ಚಸಂಸಾರಮ್ ।
ಪೃಥಗಾತ್ಮನೋ ನ ಕಿಂಚಿದ್ದೃಶ್ಯೇಯುಃ ಸಕಲನಿಗಮನಿರ್ಣೀತಾತ್ ॥೧೦೦॥

೧೦೦. ಆದರೆ ಜ್ಞಾನಿಗಳಲ್ಲಿ ಈ ಒಂದು ವಿಶೇಷವಿರುವದು : ಅವರು ಪ್ರಪಂಚಸಂಸಾರವನ್ನು ನೋಡುತ್ತಿದ್ದರೂ ಸಕಲೋಪನಿಷತ್ತುಗಳಲ್ಲಿ ನಿಶ್ಚಿತವಾಗಿರುವ ಆತ್ಮನಿಗಿಂತ ಬೇರೆಯಾಗಿ ಏನನ್ನೂ ಕಾಣುವದಿಲ್ಲ.

## ೨೩. ಗುರುಬೋಧನೆಯ ಉಪಸಂಹಾರ

ಕಿಂ ಚಿನ್ತ್ಯಂ ಕಿಮಚಿನ್ತ್ಯಂ ಕಿಂ ಕಥನೀಯಂ ಕಿಮಸ್ಯ[1]ಕಥನೀಯಮ್ ।
ಕಿಂ ಕೃತ್ಯಂ ಕಿಮಕೃತ್ಯಂ ನಿಖಿಲಂ ಬ್ರಹ್ಮೇತಿ ಜಾನತಾಂ ವಿದುಷಾಮ್ ॥೧೦೧॥

೧೦೧. ಎಲ್ಲವೂ ಬ್ರಹ್ಮವೆಂದು ತಿಳಿದ ಜ್ಞಾನಿಗಳಿಗೆ 'ವಿಚಾರಮಾಡ ತಕ್ಕದ್ದು ಯಾವದಿದೆ?' 'ವಿಚಾರಮಾಡಬಾರದ್ದು ಯಾವದಿದೆ'? ಹೇಳತಕ್ಕದ್ದೇನಿದೆ, ಹೇಳ ಬಾರದ್ದೇನಿದೆ ? ಮಾಡತಕ್ಕದ್ದು ಯಾವದಿದೆ, ಮಾಡಬಾರದ್ದು ಯಾವದಿದೆ ?

ನಿಖಿಲಂ ದೃಶ್ಯವಿಶೇಷಂ ದೃಗ್ರೂಪತ್ವೇನ ಪಶ್ಯತಾಂ ವಿದುಷಾಮ್ ।
ಬನ್ಧೋ ನಾಪಿ ನ ಮುಕ್ತಿರ್ನ ಪರಾತ್ಮತ್ವಂ ನ ಚಾಪಿ ಜೀವತ್ವಮ್ ॥೧೦೨॥

೧೦೨. ದೃಶ್ಯವಾಗಿ ಏನೇನು ಕಾಣುವದೋ ಅದೆಲ್ಲವನ್ನೂ ದೃಗ್ರೂಪ ದಿಂದಲೇ ಕಾಣುತ್ತಿರುವ ಜ್ಞಾನಿಗಳಿಗೆ ಬಂಧವಿಲ್ಲ, ಮುಕ್ತಿಯಿಲ್ಲ, ಪರಮಾತ್ಮರೂಪ ವಿಲ್ಲ, ಜೀವರೂಪವೂ ಇಲ್ಲ.

ಅಸಕೃದನುಚಿನ್ತಿತಾನಾಮವ್ಯಾಹತತರನಿಜೋಪದೇಶಾನಾಮ್ ।
ಪ್ರಾಮಾಣ್ಯಪರಮಸೀಮ್ನಾಂ ನಿಗಮನಮಿದಮೇವ ನಿಖಿಲನಿಗಮಾನಾಮ್ ॥

೧೦೩. ಅತ್ಯಂತ ಅವಿರುದ್ಧವಾದ ಉಪದೇಶವನ್ನೊಳಗೊಂಡಿರುವ, ಪ್ರಾಮಾಣ್ಯಕ್ಕೆಲ್ಲ ತೀರ ಕೊನೆಯೆನಿಸಿರುವ, ಎಲ್ಲಾ ವೇದಗಳನ್ನೂ ಅನುಚಿಂತನೆ ಮಾಡಿದರೆ ಇದೇ ಸಿದ್ಧಾಂತವಾಗುವದು.

ಇತಿ ಬೋಧಿತಃ[2] ಸ ಗುರುಣಾ ಶಿಷ್ಯೋ ಹೃಷ್ಟಃ[3] ಪ್ರಣಮ್ಯ ತಂ ಪದಯೋಃ
ಸ್ವಾನುಭವಸಿದ್ಧಮರ್ಥಂ ಸ್ವಯಮೇವಾನ್ತರ್ವಿಚಾರಯಾಮಾಸ ॥೧೦೪॥

೧೦೪. ಹೀಗೆಂದು ಗುರುವಿನ ಉಪದೇಶವನ್ನು ಪಡೆದ ಶಿಷ್ಯನು ಹರ್ಷದಿಂದ ಆತನ ಪಾದಗಳಿಗೆರಗಿ ತನ್ನ ಅನುಭವದಿಂದ ಸಿದ್ಧವಾದ ವಿಷಯವನ್ನು ತನ್ನಲ್ಲಿ ತಾನು ಹೀಗೆಂದು ವಿಚಾರಮಾಡಿದನು.

1. ಕಿಮಪ್ಯಕಥನೀಯಮ್ ಪಾ ॥ 2. ಇತ್ಥಂ ನಿಬೋಧ್ಯ ಗುರುಣಾ ಪಾ ॥
3. ಹೃಷ್ಯನ್ ಪಾ ॥

## ೨೪. ಶಿಷ್ಯನ ತತ್ತ್ವಾನುಸಂಧಾನ

ಅಜರೋ[1]ऽಹಮಕ್ಷರೋऽಹಂ
ಪ್ರಾಜ್ಞೋऽಹಂ ಪ್ರತ್ಯಗಾತ್ಮಬೋಧೋऽಹಮ್ ।
ಪರಮಾನನ್ದಮಯೋऽಹಂ
ಪರಮಶಿವೋऽಹಂ ಭವಾಮಿ ಪರಿಪೂರ್ಣಃ ॥೧೦೫॥

೧೦೫. ನಾನು ಮುಪ್ಪಿಲ್ಲದವನು, ನಾನು ನಾಶವಿಲ್ಲದವನು, ನಾನು ಪ್ರಾಜ್ಞನು, ನಾನು ಒಳಗಿನ ಆತ್ಮನಾಗಿರುವ ಚೈತನ್ಯವು, ನಾನು ಪರಮಾನಂದರೂಪನು, ನಾನು ಪರಮಶಿವನು, ಪರಿಪೂರ್ಣನಾಗಿರುವೆನು.

ಆಢ್ಯೋ[2]ऽಹಮಾತ್ಮಭಾಜಾ-
ಮಾತ್ಮಾನನ್ದಾನುಭೂತಿರಸಿಕೋऽಹಮ್ ।
ಆಬಾಲಗೋಪಮಖಿಲೈ-
ರಹಮಿತ್ಯನುಭೂಯಮಾನಮಹಿಮಾಹಮ್ ॥೧೦೬॥

೧೦೬. ಆತ್ಮಜ್ಞಾನಿಗಳಲ್ಲಿ ಶ್ರೇಷ್ಠನು ನಾನು, ಆತ್ಮಾನಂದದ ಅನುಭವದಲ್ಲಿ ರಸಿಕನು ನಾನು, ಹುಡುಗರವರೆಗೂ ದನಕಾಯುವವರವರೆಗೂ ಎಲ್ಲರೂ ನಾನು ಎಂದು ಅನುಭವಿಸುವ ಮಹಿಮೆಯುಳ್ಳವನು ನಾನು.

ಇಹಪರಸುಖವಿಮುಖೋऽಹಂ[3]
ನಿಜಸುಖಬೋಧಾನುಭೂತಿಭರಿತೋऽಹಮ್ ।
ಇತಿಮತಿದೂರತರೋऽಹಂ
ಭಾವೇತರಸುಖನಿಷಕ್ತಚಿತ್ತೋऽಹಮ್[4] ॥೧೦೭॥

೧೦೭. ಈ ಲೋಕಪರಲೋಕಗಳ ಸುಖಕ್ಕೆ ವಿಮುಖನಾಗಿರುವವನು ನಾನು, ಆತ್ಮಸುಖಜ್ಞಾನದ ಅನುಭವದಿಂದ ತುಂಬಿರುವಾತನು ನಾನು, ಇಂಥವನೆಂಬ ಬುದ್ಧಿಗೆ ಅತಿದೂರವಾಗಿರುವವನು ನಾನು, ವಿಷಯಸುಖಕ್ಕಿಂತ ಬೇರೆಯಾದ ಆನಂದದಲ್ಲಿ ಆಸಕ್ತವಾದ ಚಿತ್ತವುಳ್ಳವನು ನಾನು.

1. ಈ ಶ್ಲೋಕದಿಂದ ಮುಂದಕ್ಕಿರುವ ಶ್ಲೋಕಗಳ ಮೊದಲಕ್ಷರಗಳು ಅಕಾರಾದಿಯಾಗಿ ಕ್ಷಕಾರದವರೆಗೂ ಇವೆ. 2. ಆದ್ಯಃ ಪಾ॥

3. ಇನ್ದ್ರಿಯಸುಖವಿಮುಖೋऽಹಮ್ ಪಾ ॥

4. ಭಾವೇತರಸುಖಿತಚಿತ್ತೋऽಹಮ್ ಪಾ॥

**ಈಶೋऽಹಮೀಶ್ವರಾಣಾ–**
**ಮೀರ್ಷ್ಯಾದ್ವೇಷಾನುಷಙ್ಗರಹಿತೋऽಹಮ್ ।**
**ಈಕ್ಷಣವಿಷಯಮತೀನಾ–**
**ಮೀಪ್ಸಿತಪುರುಷಾರ್ಥಸಾಧನಪರೋऽಹಮ್ ॥೧೦೮॥**

೧೦೮. ನಾನು ಈಶ್ವರರಿಗೂ ಈಶ್ವರನು. ಹೊಟ್ಟೆಕಿಚ್ಚು, ಹಗೆತನ– ಇವುಗಳಲ್ಲಿ ಆಸಕ್ತಿಯಿಲ್ಲದವನು ನಾನು. ಅಪರೋಕ್ಷಜ್ಞಾನದಲ್ಲಿಯೇ ಮನಸ್ಸುಳ್ಳವರ ಇಷ್ಟಾರ್ಥವನ್ನು ಸಾಧನಮಾಡಿಕೊಡುವದರಲ್ಲಿ ತಾತ್ಪರ್ಯವುಳ್ಳವನು ನಾನು.

**ಉದಯೋऽಹಮೇವ ಜಗತಾ–**
**ಮುಪನಿಷದುದ್ಯಾನಕೃತವಿಹಾರೋऽಹಮ್ ।**
**ಉದ್ವೇಲಶೋಕಸಾಗರಶೋಷಣ**
**ವಾಡವ[1] ಹವ್ಯವಾಹನಾರ್ಚಿರಹಮ್[2] ॥೧೦೯॥**

೧೦೯. ಜಗತ್ತುಗಳ ಮೂಲವು ನಾನೇ, ಉಪನಿಷತ್ತುಗಳೆಂಬ ಹೂದೋಟದಲ್ಲಿ ವಿಹಾರವನ್ನು ಮಾಡುವವನು ನಾನು, ಮೇರೆದಪ್ಪಿರುವ ಶೋಕಸಾಗರವನ್ನು ಬತ್ತಿಸುವ ಬಡವಾನಲನ ಉರಿಯು ನಾನು.

**ಊರ್ಜಸ್ವಲನಿಜವಿಭವೈ–**
**ರೂರ್ಧ್ವಮಧಸ್ತಿರ್ಯಗಶ್ನುವಾನೋऽಹಮ್ ।**
**ಊಹಾಪೋಹವಿಚಾರೈ**
**ರುರರೀಕೃತವತ್ಪ್ರತೀಯಮಾನೋऽಹಮ್ ॥೧೧೦॥**

೧೧೦. ತೊಳತೊಳಗುತ್ತಿರುವ ನನ್ನ ವಿಭೂತಿಗಳಿಂದ ಮೇಲೂ ಕೆಳಗೂ ಅಡ್ಡಡ್ಡಲಾಗಿಯೂ ಹಬ್ಬಿಕೊಂಡಿರುವವನು ನಾನು. ತರ್ಕಪ್ರತಿತರ್ಕಗಳಿಂದಾಗಿರುವ ವಿಚಾರಗಳಿಂದ ಒಪ್ಪಿ ಸಿದ್ಧವಾಗುವಂತೆ ತೋರುವವನು ನಾನು.

**ಋಷಿರಹಮೃಷಿಗಣಕೋऽಹಂ**
**ಸೃಷ್ಟಿರಹಂ ಸೃಜ್ಯಮಾನಮಹಮೇವ[3] ।**
**ಋದ್ಧಿರಹಂ ವೃದ್ಧಿರಹಂ**
**ತೃಪ್ತಿರಹಂ ತೃಪ್ತಿದೀಪದೀಪ್ತಿರಹಮ್ ॥೧೧೧॥**

---

1. 'ಶೋಷಣವಾಡವ' ಎಂಬುದಕ್ಕೆ 'ವಾಡವಮುಖ' ಎಂದು ಪಾ ॥
2. ''ಹುತವಹನಾರ್ಚಿರಹಮ್'' ''ವಡವಾನಿಲಾರ್ಚಿರಹಮ್'' ಪಾ ॥
3. ದೃಷ್ಟಿರಹಂ ದೃಶ್ಯಮಾನಮಹಮೇವ ॥ ಪಾ ॥

೧೧೧. ಋಷಿಯು ನಾನು, ಋಷಿಸಮೂಹವೂ ನಾನು. ಸೃಷ್ಟಿಯು ನಾನು, ಸೃಷ್ಟಿಸಲ್ಪಡುವದೂ ನಾನೇ. ಸಮೃದ್ಧಿಯು ನಾನು, ಬೆಳವಣಿಗೆಯೂ ನಾನು; ತೃಪ್ತಿಯು ನಾನು, ತೃಪ್ತಿದೀಪದ ಬೆಳಕೂ ನಾನು.

**ಏಕೋಽಹಮೇತದೀದೃಶಮೇವಮಿತಿ[1]**
**ಸ್ಫುರಿತಭೇದರಹಿತೋಽಹಮ್ ।**
**ಏಷ್ಟವ್ಯೋಽಹಮನೀಹೈರನ್ತಃ**
**ಸುಕೃತಾನುಭೂತಿಭೂತೋಽಹಮ್[2] ॥೧೧೨॥**

೧೧೨. ನಾನು ಒಬ್ಬನೇ. ನಾನು ಇದು ಇಂಥದ್ದು, ಈ ರೀತಿಯಲ್ಲಿರುವದು– ಎಂದು ಹೊಳೆಯುವ ಭೇದವಿಲ್ಲದವನು. ಆಶಾರಹಿತರಾದವರಿಂದ ಪೂಜಿಸಲ್ಪಡುವವನು ನಾನು. ಒಳಗಿನ ಪುಣ್ಯದಿಂದ ಪಡೆಯುವ ಅನುಭವದ ರೂಪನಾಗಿರುವವನು ನಾನು.

**ಐಕ್ಯಾವಭಾಸಕೋಽಹಂ**
**ವಾಕ್ಯಪರಿಜ್ಞಾನಪಾವನಮತೀನಾಮ್ ।**
**ಐಶಮಹಮೇವ ತತ್ತ್ವಂ**
**ನೈಶತಮಃ ಪ್ರಾಯಮೋಹಮಿಹಿರೋಽಹಮ್ ॥೧೧೩॥**

೧೧೩. ವಾಕ್ಯದ ಸರಿಯಾದ ತಿಳಿವಳಿಕೆಯಿಂದ ಪವಿತ್ರವಾದ ಬುದ್ಧಿಯುಳ್ಳವರಿಗೆ ಐಕ್ಯವನ್ನು ಬೆಳಗಿ ತಿಳಿಸುವವನು ನಾನು. ನಾನೇ ಈಶ್ವರತತ್ತ್ವವು. ರಾತ್ರೆಯ ಕಗ್ಗತ್ತಲೆಯಂತಿರುವ ಮೋಹಕ್ಕೆ ಸೂರ್ಯನು ನಾನು.

**ಓಜೋಽಹಮೋಷಧೀನಾ–**
**ಮೋತಪ್ರೋತಾಯಮಾನಭುವನೋಽಹಮ್ ।**
**ಓಙ್ಕಾರಸಾರಸೋಲ್ಲಸ–**
**ದಾತ್ಮಸುಖಾಮೋದಮತ್ತಭೃಙ್ಗೋಽಹಮ್ ॥೧೧೪॥**

೧೧೪. ಗಿಡಮೂಲಿಕೆಗಳ ಸಾರವು ನಾನು. ಲೋಕಗಳ ಹಾಸುಹೊಕ್ಕಾಗಿರುವವನು ನಾನು. ಓಂಕಾರವೆಂಬ ಕಮಲದಿಂದ ಹೊರಡುವ ಆತ್ಮಸುಖವೆಂಬ ಪರಿಮಳದಿಂದ ಮದಿಸಿರುವ ಭ್ರಮರವು ನಾನು.

1. ''ಈದೃಶಮೇವೇತಿ'' ಎಂಬ ಪಾಠವಿದ್ದರೆ ಇಂಥದ್ದೇ ಎಂದು ಕನ್ನಡಿಸಬೇಕಾಗುವದು.
2. ''ಸುಕೃತಾನುಭೂತಿರಹಿತೋಽಹಮ್'' ಎಂಬ ಪಾಠಕ್ಕಿಂತ ಇದು ಉತ್ತಮ.

ಔಷಧಮಹಮಶುಭಾನಾ–
ಮೌಪಾಧಿಕಧರ್ಮಜಾಲರಹಿತೋಽಹಮ್ ।
ಔದಾರ್ಯಾತಿಶಯೋಽಹಂ
ವಿವಿಧಚತುರ್ವರ್ಗವಿತರಣಪರೋಽಹಮ್[1] ॥೧೧೫॥

೧೧೫. ಅಮಂಗಲಗಳಿಗೆಲ್ಲ ಔಷಧಿ ನಾನು. ಉಪಾಧಿಯಿಂದಾಗಿರುವ ಯಾವ ಧರ್ಮಜಾಲವೂ ಇಲ್ಲದವನು ನಾನು. ಮಿಗಿಲಿಲ್ಲದ ಔದಾರ್ಯವುಳ್ಳವನು ನಾನು. ಬಗೆಬಗೆಯ ಪುರುಷಾರ್ಥಗಳನ್ನು ಕೊಡುವದರಲ್ಲಿ ತಾತ್ಪರ್ಯವುಳ್ಳವನು ನಾನು.

ಅಙ್ಕುಶಮಹಮಖಿಲಾನಾಂ
ಮಹತ್ತಯಾ[2] ಮತ್ತವಾರಣೇನ್ದ್ರಾಣಾಮ್ ।
ಅಮ್ಬರಮಿವ ವಿಮಲೋಽಹಂ
ಶಮ್ಬರರಿಪುಜಾತವಿಕೃತಿರಹಿತೋಽಹಮ್ ॥೧೧೬॥

೧೧೬. ನಾನು ಮದಿಸಿದ ಶ್ರೇಷ್ಠವಾದ ಆನೆಗಳಿಗೆಲ್ಲ ಹೆಚ್ಚಿನವನಾದ್ದರಿಂದ ಅವುಗಳಿಗೆ ಅಂಕುಶವಾಗಿರುವೆನು. ನಾನು ಆಕಾಶದಂತೆ ನಿರ್ಮಲನಾಗಿರುವೆನು. ಮನ್ಮಥನಿಂದಾದ ವಿಕಾರವಿಲ್ಲದವನು ನಾನು.

ಅಸ್ತ[3]ವಿಕಲ್ಪಮತೀನಾ–
ಮಸ್ಖಲದುಪದೇಶಗಮ್ಯಮಾನೋಽಹಮ್ ।
ಅಸ್ಥಿರಸುಖವಿಮುಖೋಽಹಂ
ಸುಸ್ಥಿರಸುಖಬೋಧಸಮ್ಪದುಚಿತೋಽಹಮ್ ॥೧೧೭॥

೧೧೭. ಯಾವ ವಿಕಲ್ಪವೂ ಇಲ್ಲದ ಬುದ್ಧಿಯುಳ್ಳವರಿಗೆ ನಿಶ್ಚಿತವಾದ ಉಪದೇಶದಿಂದ ತಿಳಿಯುವ ತತ್ತ್ವವು ನಾನು. ಅಸ್ಥಿರವಾದ ಸುಖಗಳಿಗೆ ಹಿಮ್ಮೊಗನಾದವನು ನಾನು, ಅತ್ಯಂತಸ್ಥಿರವಾದ ಜ್ಞಾನಾನಂದಸಂಪತ್ತಿಗೆ ತಕ್ಕವನು ನಾನು.

---

1. 'ಕಾರಣಪರೋಽಹಮ್' ಎಂಬ ಪಾಠವು ಸರಿಯಲ್ಲ.

2. 'ಅಖಿಲಾನಾಮಹನ್ತಯಾ' ಎಂಬ ಪಾಠವಿದ್ದರೆ 'ಅಹಂಕಾರದಿಂದ ಮದಿಸಿದ ಮದ್ದಾನೆಗಳಿಗೆ' ಎಂದು ಕನ್ನಡಿಸಬೇಕು.

3. ''ಆತ್ಮವಿಕಲ್ಪಮತೀನಾಮ್' ಎಂಬ ಪಾಠಕ್ಕಿಂತ ಇದೇ ಸರಿಯಾದದ್ದು. ಇಲ್ಲಿ 'ಅಃ' ಎಂಬ ಅಕ್ಷರವು ಬೇಕಾಗಿದೆ.

ಕರುಣಾರಸಭರಿತೋಽಹಂ
ಕಬಲಿತಕಮಲಾಸನಾದಿಲೋಕೋಽಹಮ್ ।
ಕಲುಷಾಹಂವಿಧುರೋಽಹಂ[1]
ಕಲ್ಮಷಸುಕೃತೋಪಲೇಪರಹಿತೋಽಹಮ್ ॥೧೧೮॥

೧೧೮. ನಾನು ಕರುಣೆ ಎಂಬ ರಸದಿಂದ ತುಂಬಿರುವವನು. ಬ್ರಹ್ಮಲೋಕವೇ ಮುಂತಾದವುಗಳನ್ನು ನುಂಗುವವನು ನಾನು. ನಾನು ಕಲ್ಮಷವಾದ ನಾನೆಂಬ ರೂಪವಿಲ್ಲದವನು. ಪಾಪಪುಣ್ಯಗಳ ಅಂಟಿಲ್ಲದವನು ನಾನು.

ಖಾನಾಮಗೋಚರೋಽಹಂ
ಖಾತೀತೋಽಹಂ ಖಪುಷ್ಪಭವಗೋಽಹಮ್ ।
ಖಲಜನದುರಾಸದೋಽಹಂ
ಖಣ್ಡಜ್ಞಾನಾಪನೋದನಪರೋಽಹಮ್ ॥೧೧೯॥

೧೧೯. ಇಂದ್ರಿಯಗಳಿಗೆ ಗೋಚರನಲ್ಲದವನು ನಾನು. ಆಕಾಶವನ್ನೂ ಮೀರಿರುವನು ನಾನು. ಆಕಾಶಹೂವಿನಂತೆ ಸುಳ್ಳಾಗಿರುವ ಸಂಸಾರವನ್ನೆಲ್ಲ ವ್ಯಾಪಿಸಿಕೊಂಡಿರುವವನು ನಾನು. ದುಷ್ಟಜನರಿಗೆ ಅಪ್ರಾಪ್ಯನು ನಾನು, ಪರಿಚ್ಛಿನ್ನಜ್ಞಾನವನ್ನು ಕಳೆಯುವವನು ನಾನು.

ಗಲಿತದ್ವೈತಕಥೋಽಹಂ
ಗೇಹೀಭವದಖಿಲಮೂಲಹೃದಯೋಽಹಮ್[2] ।
ಗನ್ತವ್ಯೋಽಹಮನೀಹೈರ್ಗತ್ಯಾಗತಿರಹಿತ
ಪೂರ್ಣಬೋಧೋಽಹಮ್ ॥೧೨೦ ॥

೧೨೦. ಯಾವ ದ್ವೈತದ ಮಾತೂ ಇಲ್ಲದವನು ನಾನು. ಎಲ್ಲಕ್ಕೂ ಕಾರಣವಾಗಿರುವ[3] ಹೃದಯವನ್ನೇ ಮನೆಮಾಡಿಕೊಂಡಿರುವವನು ನಾನು. ನಾನು ಆಶಾರಹಿತರು ಪಡೆಯತಕ್ಕ ಗತಿ. ಹೋಗುವದೂ ಬರುವದೂ ಇಲ್ಲದ ಪೂರ್ಣಜ್ಞಾನವು ನಾನು.

---

1. 'ಕಲುಷಾಕೃತಿವಿಧುರೋಽಹಮ್', 'ಕಲುಷಾಕೃತಿರಹಿತೋಽಹಮ್' ಎಂದು ಪಾ ॥

2. 'ದೇಹೀಭವದಖಿಲ' ಎಂಬ ಪಾಠವು ತಪ್ಪು.

3. ಮನಸ್ಸಿನಿಂದಲೇ ಎಲ್ಲವೂ ಕಾಣುತ್ತದೆ. ಬಂಧಮೋಕ್ಷಗಳಿಗೆ ಅದೇ ಕಾರಣವೆಂದರ್ಥವಿರಬಹುದು.

ಘನತರವಿಮೋಹತಿಮಿರ
　ಪ್ರಕರಪ್ರಧ್ವಂಸಭಾನುನಿಕರೋಽಹಮ್ ।
ಘಟಿಕಾವಾಸರರಜನೀವತ್ಸರ
　ಯುಗಕಲ್ಪಕಾಲಭೇದೋಽಹಮ್ ॥೧೨೧॥

೧೨೧. ದಟ್ಟವಾಗಿರುವ ಭ್ರಾಂತಿಯೆಂಬ ಕತ್ತಲೆಯ ಸಮೂಹವನ್ನು ನಾಶಗೊಳಿಸುವ ಸೂರ್ಯಸಮೂಹವು ನಾನು. ಗಳಿಗೆ, ಹಗಲು, ರಾತ್ರಿ, ವರ್ಷ, ಯುಗ, ಕಲ್ಪ – ಎಂಬ ಕಾಲಭೇದಗಳೂ ನಾನು.

ಚರದಚರದಾತ್ಮಕೋಽಹಂ
　ಚತುರಮತಿಶ್ಲಾಘನೀಯಚರಿತೋಽಹಮ್ ।
ಚಪಲಜನದುರ್ಗಮೋಽಹಂ
　ಚಞ್ಚಲಭವಜಲಧಿಪಾರದೇಶೋಽಹಮ್ ॥೧೨೨॥

೧೨೨. ನಾನು ಸ್ಥಾವರಜಂಗಮಪ್ರಾಣಿಗಳ ರೂಪದಲ್ಲಿರುವವನು. ನಾನು ಜ್ಞಾನಿಗಳಿಂದ ಹೊಗಳತಕ್ಕ ನಡತೆಯುಳ್ಳವನು. ಚಪಲರಾದ ಜನರಿಗೆ ಎಂದಿಗೂ ಸಿಕ್ಕದವನು ನಾನು, ಚಂಚಲವಾದ ಸಂಸಾರಸಾಗರದ ಆಚೆಯ ದಡದ ಪ್ರದೇಶವು ನಾನು.

ಛನ್ದಃಸಿನ್ಧುನಿಗೂಢ –
　ಜ್ಞಾನಸುಖಾಸ್ವಾದ[1] ಮೋದಮಾನೋಽಹಮ್ ।
ಛಲಪದವಿಹಿತಮತೀನಾಂ
　ಛನ್ನೋಽಹಂ ಶಾನ್ತಿಮಾರ್ಗಗಮ್ಯೋಽಹಮ್ ॥೧೨೩॥

೧೨೩. ನಾನು ವೇದವೆಂಬ ಸಾಗರದಲ್ಲಿ ಕೂಡಿಹಾಕಿರುವ ಜ್ಞಾನ ಸುಖದ ಸವಿಯಿಂದ ಸಂತೋಷಗೊಂಡಿರುವವನು. ಮೋಹಗೊಳಿಸುವದಕ್ಕಾಗಿ ಒಂದು ಶಬ್ದಕ್ಕೆ ಇನ್ನೊಂದರ್ಥವನ್ನು ಕಲ್ಪಿಸುವ ಛಲಪದಗಳಲ್ಲಿ ಮನಸ್ಸಿಟ್ಟಿರುವವರಿಗೆ ನಾನು ಎಂದೆಂದಿಗೂ ಮರೆಯಾಗಿರುವವನು. ನಾನು ಶಾಂತಿಮಾರ್ಗದಿಂದಲೇ ಸಿಕ್ಕತಕ್ಕವನು.

ಜಲಜಾಸನಾದಿಗೋಚರ–
　ಪಞ್ಚಮಹಾಭೂತಮೂಲಭೂತೋಽಹಮ್ ।
ಜಗದಾನನ್ದಕರೋಽಹಂ
　ಜನ್ಮಜರಾರೋಗಮರಣರಹಿತೋಽಹಮ್ ॥೧೨೪॥

1. ಸುಖಾಹ್ಲಾದ ॥ ಪಾ ॥

೧೨೪. ಬ್ರಹ್ಮನೇ ಮುಂತಾದವರಿಗೆ ವಿಷಯವಾಗಿರುವ ಪಂಚಮಹಾ ಭೂತಗಳಿಗೆ ಮೂಲನಾದವನು ನಾನು. ನಾನೇ ಜಗತ್ತಿಗೆ ಆನಂದವನ್ನುಂಟು ಮಾಡುವವನು. ನಾನು ಹುಟ್ಟು, ಮುಪ್ಪು, ಬೇನೆ, ಸಾವು – ಇವು ಯಾವವೂ ಇಲ್ಲದವನು.

**ಟಿಪ್ಪಣಿ** :– ಬ್ರಹ್ಮನೇ ಮುಂತಾಗಿರುವವರ ವಿಷಯವಾದ ಪಂಚಮಹಾಭೂತಗಳು– ಎಂದರೆ ಅವರ ಶರೀರೇಂದ್ರಿಯಗಳಿಗೆ ಮೂಲವಾಗಿರುವ ಪಂಚಟುಹಾಭೂತಗಳು ಎಂದು ಅರ್ಥಮಾಡಿದರೆ ಜೀವರುಗಳ ಶರೀರವೆಲ್ಲ ಪಂಚಮಹಾಭೂತಮಯವಾಗಿರುವವು– ಎಂಬರ್ಥವು ಹೊರಡುತ್ತದೆ. ಆದರೆ ಬ್ರಹ್ಮನ ಶರೀರವೂ ಪಂಚಭೂತಮಯವೆಂದು ಇದರಿಂದ ಏರ್ಪಡುತ್ತದೆ.

ಝುಙ್ಕೃತಿಹುಙ್ಕೃತಿಶಿಞ್ಜಿತ–
ಬೃಂಹಿತಮುಖವಿವಿಧನಾದಭೇದೋಽಹಮ್ ।
ಝುಟಿತಿಘಟಿತಾತ್ಮವೇದನ
ದೀಪಪರಿಸ್ಫುರಿತಹೃದಯಭವನೋಽಹಮ್ ॥೧೨೫॥

೧೨೫. ತಾಳ, ಗೆಜ್ಜೆ –ಮುಂತಾದವುಗಳ ಝುಂಕಾರ, ವೀರರ ಹುಂಕಾರ, ಒಡವೆಗಳ ಜಣತ್ಕಾರ, ಆನೆಗಳ ಘೀಂಕಾರ– ಮುಂತಾದ ಬಗೆಬಗೆಯ ಧ್ವನಿಗಳು ನಾನು. ತಟ್ಟನೆ ಆಗುವ ಆತ್ಮಜ್ಞಾನವೆಂಬ ದೀಪದಿಂದ ಹೃದಯಸ್ಥಾನ ವನ್ನು ಬೆಳಗುವವನು ನಾನು.

ಜ್ಞಾನಮಹಂ ಜ್ಞೇಯಮಹಂ
ಜ್ಞಾತಾಹಂ ಜ್ಞಾನಸಾಧನಗಣೋಽಹಮ್ ।
ಜ್ಞಾತೃಜ್ಞಾನಜ್ಞೇಯ
ವಿನಾಕೃತಮಸ್ತಿತ್ವಮಾತ್ರಮೇವಾಹಮ್ ॥೧೨೬॥

೧೨೬. ಜ್ಞಾನವು ನಾನು, ಜ್ಞೇಯವು ನಾನು, ಜ್ಞಾತೃವೂ ನಾನು, ಜ್ಞಾನಕ್ಕೆ ಬೇಕಾದ ಸಾಧನಸಮೂಹವೂ ನಾನು. ಜ್ಞಾತೃ, ಜ್ಞಾನ, ಜ್ಞೇಯ– ಎಂಬ ತ್ರಿಪುಟಿಯಿಲ್ಲದ ಸನ್ಮಾತ್ರವೂ ನಾನು.

**ಟಿಪ್ಪಣಿ** :– ಜ್ಞಾನಸಾಧನವೆಂದರೆ ಅಮಾನಿತ್ವಾದಿಗಳು. ಗೀ.೧೩–೬ನ್ನು ನೋಡಿ.

**ತತ್ತ್ವಾತೀತಪದೋಽಹಂ**
**ತನುರಹಮಸ್ಮೀತಿ[1] ಭಾವರಹಿತೋಽಹಮ್ ।**
**ತಾಮಸದುರಧಿಗಮೋಽಹಂ**
**ತತ್ತ್ವಂಪದಬೋಧಬೋಧ್ಯಹೃದಯೋಽಹಮ್ ॥೧೨೭॥**

೧೨೭. ತತ್ತ್ವಗಳನ್ನು ದಾಟಿರುವ ಪರಸ್ವರೂಪನು ನಾನು. ಶರೀರವೇ ನಾನೆಂಬ ಭಾವವಿಲ್ಲದವನು ನಾನು. ತಾಮಸಜನರಿಗೆ ಸಿಕ್ಕದವನು ನಾನು. 'ಅದು' 'ನೀನು' ಎಂಬ ಪದಗಳ ಜ್ಞಾನದಿಂದ ತಿಳಿಯಬರುವ ರಹಸ್ಯವೇ ನಾನು.

**ಟಿಪ್ಪಣಿ :–** ಸಾಂಖ್ಯರೇ ಮೊದಲಾದವರು ಒಪ್ಪಿರುವ ತತ್ತ್ವಗಳೆಲ್ಲ ಅನಾತ್ಮವು. "ತತ್ ತ್ವಮಸಿ" ಎಂಬ ಮಹಾವಾಕ್ಯದಲ್ಲಿ ತತ್‌ಪದ ಮತ್ತು ತ್ವಂಪದ– ಇವುಗಳ ಶೋಧನೆಯನ್ನು ಮಾಡಿದರೆ ಪರಮಾರ್ಥವೇ ಕೊನೆಗೆ ಉಳಿಯುವದು.

**ದೈವತದೈತ್ಯನಿಶಾಚರ–**
**ಮಾನವತಿರ್ಯಙ್ಮಹೀಧರಾದಿರಹಮ್ ।**
**ದೇಹೇನ್ದ್ರಿಯರಹಿತೋಽಹಂ**
**ದಕ್ಷಿಣಪೂರ್ವಾದಿದಿಗ್ವಿಭಾಗೋಽಹಮ್ ॥೧೨೮॥**

೧೨೮. ದೇವತೆಗಳು, ದೈತ್ಯರು, ರಾತ್ರಿಂಚರರು, ಮನುಷ್ಯರು, ಮೂಕಪ್ರಾಣಿಗಳು, ಬೆಟ್ಟಗಳು – ಮುಂತಾದವುಗಳೆಲ್ಲವೂ ನಾನೇ. ದೇಹೇಂದ್ರಿಯ ಗಳಿಲ್ಲದವನು ನಾನು. ದಕ್ಷಿಣ, ಪೂರ್ವ– ಮುಂತಾದ ದಿಕ್ಕಿನ ವಿಭಾಗಗಳೂ ನಾನೇ.

**ಧರ್ಮಾಧರ್ಮಮಯೋಽಹಂ**
**ಧರ್ಮಾಧರ್ಮಾದಿಬನ್ಧರಹಿತೋಽಹಮ್ ।**
**ಧಾರ್ಮಿಕಜನಸುಲಭೋಽಹಂ**
**ಧನ್ಯೋಽಹಂ ಧಾತುರಾದಿಭೂತೋಽಹಮ್ ॥೧೨೯॥**

೧೨೯. ಧರ್ಮಾಧರ್ಮಸ್ವರೂಪನು ನಾನು. ಪಾಪ, ಪುಣ್ಯ– ಮುಂತಾದವುಗಳ ಬಂಧವಿಲ್ಲದವನು ನಾನು. ಧಾರ್ಮಿಕಜನರಿಗೆ ಸುಲಭವಾಗಿ ಸಿಕ್ಕುವವನು ನಾನು, ಕೃತಾರ್ಥನು ನಾನು, ಬ್ರಹ್ಮನಿಗೂ ಆದಿ ನಾನು.

---
1. "ತದನ್ತರೋಽಸ್ಮೀತಿ" ಪಾ ॥

ನಾಮಾದಿವಿರಹಿತೋಽಹಂ
ನರಕಸ್ವರ್ಗಾಪವರ್ಗರಹಿತೋಽಹಮ್ ।
ನಾದಾನ್ತವೇದಿತೋಽಹಂ
ನಾನಾವಿಧನಿಖಿಲನಿಗಮಸಾರೋಽಹಮ್[1] ॥೧೩೦॥

೧೩೦. ನಾನು ನಾಮಾದಿಗಳಿಲ್ಲದವನು. ನಾನು, ನರಕ, ಸ್ವರ್ಗ, ಮೋಕ್ಷ – ಎಂಬಿವಿಲ್ಲದವನು. ನಾದದ ಕೊನೆಯಲ್ಲಿ ತಿಳಿಯಬರುವವನು ನಾನು, ಬಗೆಬಗೆಯಾದ ಶಾಸ್ತ್ರಗಳೆಲ್ಲದರ ಸಾರವು ನಾನು.

**ಟಿಪ್ಪಣಿ** :– ಅನಾಹತನಾದದಿಂದ ಪರಮಾತ್ಮನನ್ನು ಕೆಲವರು ಯೋಗಿಗಳು ತಿಳಿದುಕೊಳ್ಳುವರಂತೆ.

ಪರಜೀವಭೇದಬಾಧಕ–
ಪರಮಾರ್ಥಜ್ಞಾನಶುದ್ಧಚಿತ್ತೋಽಹಮ್ ।
ಪ್ರಕೃತಿರಹಂ ವಿಕೃತಿರಹಂ
ಪರಿಣತಿರಹಮಸ್ಮಿ ಭಾಗಧೇಯಾನಾಮ್ ॥೧೩೧ ॥

೧೩೧. ಪರಮಾತ್ಮನಿಗೂ ಜೀವಾತ್ಮನಿಗೂ ಭೇದವನ್ನು ತೊಲಗಿಸುವ ಪರಮಾರ್ಥಜ್ಞಾನದಿಂದ ಶುದ್ಧವಾಗಿರುವ ಚಿತ್ತವುಳ್ಳವನು ನಾನು. ನಾನೇ ಪ್ರಕೃತಿಯು, ನಾನೇ ವಿಕೃತಿಯು. ಸೌಭಾಗ್ಯಗಳ ಪರಿಪಾಕವೇ ನಾನು.

ಫಣಧರಭೂಧರಧಾರಣವಿಗ್ರಹ
ವಿಧೃತಪ್ರಪಞ್ಚಸಾರೋಽಹಮ್ ।
ಫಾಲತಲೋದಿತಲೋಚನ
ಪಾವಕಪರಿಭೂತಪಞ್ಚಬಾಣೋಽಹಮ್ ॥೧೩೨॥

೧೩೨. ಆದಿಶೇಷ, ಕುಲಾಚಲಗಳು, ದಿಗ್ಗಜಗಳು – ಇವುಗಳ ರೂಪದಿಂದ ಪ್ರಪಂಚದ ತೂಕವನ್ನೆಲ್ಲ ಎತ್ತಿಹಿಡಿದುಕೊಂಡಿರುವವನು ನಾನು. ಹಣೆಯೆಡೆಯಿಂದೆದ್ದ ಕಣ್ಗೆಂಡದುರಿಯಿಂದ ಐಗಣೆಯ ಮನ್ಮಥನನ್ನು ಸುಟ್ಟಿರುವವನು ನಾನು.

ಬದ್ಧೋ ಭವಾಮಿ ನಾಹಂ
ಬನ್ಧಾನ್ಮುಕ್ತಸ್ತಥಾಪಿ ನೈವಾಹಮ್ ।

1. "ನಾನಾಗಮನಿಖಿಲವಿಶ್ವಸಾರೋಽಹಮ್" ಪಾ ॥

ಬೋಧ್ಯೋ ಭವಾಮಿ ನಾಹಂ
ಬೋಧೋಽಹಂ ನೈವ ಬೋಧಕೋ ನಾಹಮ್
||೧೩೩||

೧೩೩. ನಾನು ಬದ್ಧನಾಗಿಲ್ಲ, ಬಂಧದಿಂದ ಬಿಡುಗಡೆಯಾದವನೂ ಅಲ್ಲ. ನಾನು ತಿಳಿವನ್ನು ಹೊಂದಬೇಕಾದ (ಶಿಷ್ಯ)ನಲ್ಲ, ನಾನು ತಿಳಿವಳಿಕೆಯಲ್ಲ. ತಿಳಿಸಿಕೊಡುವ ಗುರುವೂ ನಾನಲ್ಲ.

ಭಕ್ತಿರಹಂ ಭಜನಮಹಂ
ಭುಕ್ತಿರಹಂ ಭುಕ್ತಿಮುಕ್ತಿರಹಮೇವ ।[1]
ಭೂತಾನುಶಾಸನೋಽಹಂ
ಭೂತಭವದ್ಭವ್ಯಮೂಲಭೂತೋಽಹಮ್ ||೧೩೪||

೧೩೪. ಭಕ್ತಿಯು ನಾನು, ಭಜನವು ನಾನು. ಭುಕ್ತಿಯು ನಾನು, ಭುಕ್ತಿಮುಕ್ತಿಯೂ ನಾನು. ಭೂತಗಳನ್ನು ಆಳುವವನು ನಾನು. ಹಿಂದಿನ, ಈಗಿನ ಮತ್ತು ಮುಂದಿನ ಘಟನೆಗಳಿಗೆ ಕಾರಣನಾದವನು ನಾನು.

ಮಾನ್ಯೋಽಹಮಸ್ಮಿ ಮಹತಾಮ್
ಮನ್ದಮತೀನಾಮಮಾನನೀಯೋಽಹಮ್ ।
ಮದರಾಗಮಾನಮೋಹಿತ–
ಮಾನಸದುರ್ವಾಸನಾದುರಾಪೋಽಹಮ್ ||೧೩೫||

೧೩೫. ದೊಡ್ಡವರಿಗೆ ಮಾನ್ಯನಾಗಿರುವವನು ನಾನು, ಮಂದಬುದ್ಧಿಯ ಜನರಿಗೆ ಅಮಾನ್ಯನಾಗಿರುವವನೂ ನಾನು. ಮದ, ರಾಗ, ಅಭಿಮಾನ–ಇವುಗಳಿಂದ ಮೋಹಗೊಂಡವರ ಮನಸ್ಸಿನ ದುರ್ವಾಸನೆಗೆ ಸಿಕ್ಕದವನು ನಾನು.

ಯಜನಯಜಮಾನಯಾಜಕ
ಯಾಗಮಯೋಽಹಂ ಯಮಾದಿರಹಿತೋಽಹಮ್ ।
ಯಮವರುಣಯಕ್ಷವಾಸವ
ರಾಕ್ಷಸಮರುದೀಶವಹ್ನಿರೂಪೋಽಹಮ್ ||೧೩೬||

೧೩೬. ಯಜ್ಞಮಾಡುವದು, ಯಜ್ಞವನ್ನು ಮಾಡುವವನು, ಋತ್ವಿಜರು, ಯಾಗ – ಇವುಗಳ ರೂಪದಲ್ಲಿರುವವನು ನಾನು. ಯಮ

1. "ಮುಕ್ತಿಯುಕ್ತಿರಹಮೇವ" ಎಂಬ ಪಾಠಾಂತರಕ್ಕೆ ಮೋಕ್ಷಕ್ಕೆ ಉಪಾಯವೂ ನಾನೇ ಎಂದರ್ಥ.

(ನಿಯಮ)– ಮುಂತಾದವುಗಳಿಲ್ಲದವನು ನಾನು. ಯಮ, ವರುಣ, ಕುಬೇರ, ಇಂದ್ರ, ನಿರ್ಋತಿ, ವಾಯು, ಈಶಾನ, ಅಗ್ನಿ – ಎಂಬ ದಿಕ್ಪಾಲಕರೂ ನಾನು.

ರಕ್ಷಾವಿಧಾನಶಿಕ್ಷಾವೀಕ್ಷಿತ
ಲೀಲಾವಲೋಕಮಹಿಮಾಽಹಮ್ ।
ರಜನೀದಿವಸವಿರಾಮ–
ಸ್ಫುರದನುಭೂತಿಪ್ರಮಾಣಸಿದ್ಧೋಽಹಮ್ ॥೧೩೭॥

೧೩೭. ಕಾಪಾಡುವದು, ಸೃಷ್ಟಿಸುವದು, ಸಂಹರಿಸುವದು – ಇವುಗಳನ್ನು ನೋಟದಿಂದಲೇ ಮಾಡುವ ಲೀಲೆಯ ಅವಲೋಕನವೆಂಬ ಮಹಿಮೆಯುಳ್ಳವನು ನಾನು. ಹಗಲುರಾತ್ರಿಗಳ ಅಭಾವವನ್ನು ಬೆಳಗುತ್ತಿರುವ ಅನುಭವಪ್ರಮಾಣದಿಂದ ಸಿದ್ಧನಾದವನು ನಾನು.

**ಟಿಪ್ಪಣಿ** :– ಹಗಲುರಾತ್ರಿಗಳೆಂದರೆ ಮನಸ್ಸಿನ ಅರಿವುಮರವುಗಳೆಂದೂ ಅರ್ಥಮಾಡಿ ಕೊಳ್ಳಬಹುದು.

ಲಕ್ಷಣಲಕ್ಷ್ಯಮಯೋಽಹಂ
ಲಾಕ್ಷಣಿಕೋಽಹಂ ಲಯಾದಿರಹಿತೋಽಹಮ್ ।
ಲಾಭಾಲಾಭಮಯೋಽಹಂ
ಲಬ್ಧ್ವ್ಯಾನಾಮಲಭ್ಯಮಾನೋಽಹಮ್ ॥೧೩೮॥

೧೩೮. ಲಕ್ಷಣಲಕ್ಷ್ಯಗಳ ಸ್ವರೂಪನು ನಾನು. ಲಕ್ಷಣಾರ್ಥವೂ ನಾನು. ಲಯವೇ ಮುಂತಾದವುಗಳಿಲ್ಲದವನು ನಾನು. ಲಾಭನಷ್ಟಗಳ ಸ್ವರೂಪನು ನಾನು. ಪಡೆಯಬೇಕಾದವುಗಳಲ್ಲೆಲ್ಲ ಪಡೆಯಲು ಸಿಕ್ಕದವನು ನಾನು.

ವರ್ಣಾಶ್ರಮರಹಿತೋಽಹಂ
ವರ್ಣಮಯೋಽಹಂ ವರೇಣ್ಯಗಣ್ಯೋಽಹಮ್ ।
ವಾಚಾಮಗೋಚರೋಽಹಂ
ವಚಸಾಮರ್ಥೇ ಪದೇ ನಿವಿಷ್ಟೋಽಹಮ್ ॥೧೩೯॥

೧೩೯. ನಾನು ವರ್ಣಾಶ್ರಮಗಳಿಲ್ಲದವನು, ಮಾತೃಕಾವರ್ಣರೂಪನು

ನಾನು. ಶ್ರೇಷ್ಠರಲ್ಲಿ ಗಣ್ಯನಾದವನು ನಾನು. ವಾಕ್ಕುಗಳಿಗೆ ವಿಷಯನಲ್ಲದವನು ನಾನು. ವಾಕ್ಯಗಳ ಪದದಲ್ಲಿಯೂ ಅರ್ಥದಲ್ಲಿಯೂ ಹೊಕ್ಕಿರುವವನು ನಾನು.[1]

ಟಿಪ್ಪಣಿ :– ಶಬ್ದಾರ್ಥಗಳೆಂಬೆರಡುರೂಪದಲ್ಲಿಯೂ ಇರುವವನು ಪರಮಾತ್ಮನೇ.

ಶಮದಮವಿರಹಿತಮನಸಾಂ
ಶಾಸ್ತ್ರಶತೈರಪ್ಯಗಮ್ಯಮಾನೋಽಹಮ್ ।
ಶರಣಮಹಮೇವ ವಿದುಷಾಂ
ಶಕಲೀಕೃತವಿವಿಧಸಂಶಯಗಣೋಽಹಮ್ ॥೧೪೦॥

೧೪೦. ಶಮದಮಗಳಿಲ್ಲದ ಚಿತ್ತದವರಿಗೆ ನೂರಾರು ಶಾಸ್ತ್ರಗಳಿಂದಲೂ ತಿಳಿಯುವದಕ್ಕಾಗದವನು ನಾನು. ಜ್ಞಾನಿಗಳಿಗೆ ಶರಣನಾದವನು ನಾನೇ. ವಿಧ ವಿಧವಾದ ಸಂಶಯಸಮೂಹಗಳನ್ನೆಲ್ಲ ಚೂರು ಚೂರುಮಾಡುವವನು ನಾನೇ.

ಷಡ್ಭಾವವಿರಹಿತೋಽಹಂ
ಷಡ್ಗುಣರಹಿತೋಽಹಮಹಿತರಹಿತೋಽಹಮ್ ।
ಷಟ್ಕೋಶವಿರಹಿತೋಽಹಂ
ಷಟ್ತ್ರಿಂಶತ್ತತ್ತ್ವಜಾಲರಹಿತೋಽಹಮ್ ॥೧೪೧॥

೧೪೧. ಆರು ವಿಕಾರಗಳಿಲ್ಲದವನು ನಾನು. ಆರು ಗುಣಗಳಿಲ್ಲದವನು ನಾನು. ಶತ್ರುಗಳಿಲ್ಲದವನು ನಾನು. ಆರು ಕೋಶಗಳಿಲ್ಲದವಸು ನಾನು. ಮೂವತ್ತಾರು ತತ್ತ್ವಸಮೂಹವಿಲ್ಲದವನು ನಾನು.

ಟಿಪ್ಪಣಿ :– ಹುಟ್ಟು, ಇರವು, ಬೆಳವಣಿಗೆ, ಮಾರ್ಪಡುವಿಕೆ, ಸೊರಗುವಿಕೆ, ಸಾವು– ಎಂಬ ಆರು ವಿಕಾರಗಳು ಪದಾರ್ಥಗಳಿಗಿರುವವು. ಷಡ್ಗುಣಗಳೆಂದರೆ ಮಧುರವೇ ಮುಂತಾದ ಸವಿಗಳೆಂದು ವ್ಯಾಖ್ಯಾನದಲ್ಲಿದೆ ; ಕಾಮಕ್ರೋಧಾದಿ ಅರಿಷಡ್ವರ್ಗವಿಲ್ಲದವನು ನಾನು – ಎಂದೂ ಅರ್ಥವನ್ನು ಮಾಡಬಹುದು. ಷಟ್ಕೋಶವೆಂದರೆ ನರಗಳು, ಎಲುಬು, ಮಜ್ಜಾ, ಚರ್ಮ, ಮಾಂಸ, ರಕ್ತ – ಎಂಬಿವುಗಳಿರುವ ಶರೀರವು. ಶೈವಾಗಮದಲ್ಲಿ ಪಂಚಭೂತಗಳು, ಜ್ಞಾನೇಂದ್ರಿಯ ಪಂಚಕ, ಪಂಚತನ್ಮಾತ್ರೆಗಳು, ಕರ್ಮೇಂದ್ರಿಯಪಂಚಕ,

---

1. "ವಚಸಾಮರ್ಥೇನ ಗಮ್ಯಮಾನೋಽಹಮ್" ಎಂಬ ಪಾಠಕ್ಕೆ ಮಾತುಗಳ ಅರ್ಥವೆಂದು ತಿಳಿಯತಕ್ಕವನು ನಾನು ಎಂದರ್ಥ.

ಮನೋಬುದ್ಧ್ಯಹಂಕಾರಗಳು, ಪ್ರಕೃತಿ, ಪುರುಷ, ಕಾಲ, ನಿಯತಿ, ರಾಗ, ವಿದ್ಯೆ, ಕಲಾ, ಮಾಯೆ, ಶುದ್ಧವಿದ್ಯೆ, ಈಶ್ವರ, ಸದಾಶಿವ, ಶಕ್ತಿ ಶಿವ – ಎಂಬ ಮೂವತ್ತಾರು ತತ್ತ್ವಗಳನ್ನು ಅಂಗೀಕರಿಸಿದೆ.

ಸಂವಿತ್ಸುಖಾತ್ಮಕೋಽಹಂ
ಸಮಾಧಿಸಙ್ಕಲ್ಪಕಲ್ಪವೃಕ್ಷೋಽಹಮ್ ।
ಸಂಸಾರವಿರಹಿತೋಽಹಂ
ಸಾಕ್ಷಾತ್ಕಾರೋಽಹಮಾತ್ಮವಿದ್ಯಾಯಾಃ ॥೧೪೨॥

೧೪೨. ಜ್ಞಾನಾನಂದಸ್ವರೂಪನು ನಾನು. ಸಮಾಧಿಯುಂಟಾಗ ಬೇಕೆಂಬ ಸಂಕಲ್ಪಕ್ಕೆ ಕಲ್ಪವೃಕ್ಷವಾಗಿರುವವನು ನಾನು. ಸಂಸಾರವಿಲ್ಲದವನು ನಾನು. ಆತ್ಮವಿದ್ಯೆಯ ಸಾಕ್ಷಾತ್ಕಾರವು ನಾನೇ.

ಹವ್ಯಮಹಂ ಕವ್ಯಮಹಂ
ಹೇಯೋಪಾದೇಯಭಾವಶೂನ್ಯೋಽಹಮ್ ।
ಹರಿರಹಮಸ್ಮಿ ಹರೋಽಹಂ
ವಿಧಿರಹಮೇವಾಸ್ಮಿ ಕಾರಣಂ ತೇಷಾಮ್ ॥೧೪೩॥

೧೪೩. ಹವ್ಯವು ನಾನು, ಕವ್ಯವೂ ನಾನು. ಬಿಡತಕ್ಕದ್ದು, ತೆಗೆದುಕೊಳ್ಳತಕ್ಕದ್ದು– ಎಂಬ ಭಾವವಿಲ್ಲದವನು ನಾನು, ಹರಿಯು ನಾನು, ಹರನು ನಾನು, ಬ್ರಹ್ಮನು ನಾನೇ. ಅವರೆಲ್ಲರಿಗೂ ಕಾರಣವು ನಾನೇ.

ಕ್ಷಾಲಿತಕಲುಷಮಯೋಽಹಂ
ಕ್ಷಮಿತಭವಕ್ಲೇಶಜಾಲಹೃದಯೋಽಹಮ್ ।
ಕ್ಷಾನ್ತಾದ್ಯಕ್ಷರಘಟಿತೋ[1]
ವಿವಿಧವ್ಯವಹಾರಮೂಲಮಹಮೇವ ॥೧೪೪॥

೧೪೪. ಪಾಪಗಳನ್ನೆಲ್ಲ ತೊಳೆದುಕೊಂಡ ಸ್ವರೂಪವುಳ್ಳವನು ನಾನು. ಸಂಸಾರದ ಕ್ಲೇಶಗಳನ್ನೆಲ್ಲ ನಾಶಗೊಳಿಸಿಕೊಂಡಿರುವವನು ನಾನು. ಅಕಾರಾದಿ ಯಾಗಿ ಕ್ಷಕಾರಾಂತವಾಗಿರುವ ಅಕ್ಷರಗಳಿಂದ ಕೂಡಿರುವ ಎಲ್ಲಾ ವ್ಯವಹಾರಕ್ಕೂ ಮೂಲವು ನಾನೇ.

**ಟಿಪ್ಪಣಿ** :– ಯಾವ ಮಾತಿನಲ್ಲಾದರೂ ಅಕಾರಾದಿಯಾಗಿ ಕ್ಷಕಾರದವರೆಗಿನ ಅಕ್ಷರಗಳೇ ಇರುವವು. ಇಂಥ ಶಬ್ದವು ಹೇಳುವದಕ್ಕೆಲ್ಲ ಮೂಲವು ಪರಮಾತ್ಮನೇ– ಎಂದು

1. "ಕ್ಷಾನ್ತಾದ್ಯಕ್ಷರಸುಘಟಿತ" ಪಾ ॥

ಅಭಿಪ್ರಾಯ. ಇದುವರೆಗೆ ಹೇಳಿರುವ ಸರ್ವಾತ್ಮತ್ವವರ್ಣನೆಯ ಶ್ಲೋಕಗಳ ಅಕ್ಷರಗಳು ಅಕಾರದಿಂದ ಕ್ಷಕಾರದವರೆಗಿನ ವರ್ಣಗಳೇ ಆಗಿವೆ ಎಂಬುದನ್ನು ಇದು ಸೂಚಿಸುತ್ತದೆ ಎನ್ನಬಹುದು. ಇಲ್ಲಿ೧೨೬ನೆಯ ಶ್ಲೋಕವಾದ ಬಳಿಕ ಟವರ್ಗದ ಅಕ್ಷರಗಳು ಆದಿಯಲ್ಲಿರುವ ಶ್ಲೋಕಗಳು ಬಿಟ್ಟುಹೋಗಿವೆ ; ಅಥವಾ ಗ್ರಂಥಕರ್ತರು ಬರೆದಿಲ್ಲ. ಇದೇಕೆಂಬುದು ತಿಳಿಯಲಿಲ್ಲ.

## ಅನುಸಂಧಾನದ ಉಪಸಂಹಾರ

*ಬಹುಭಿಃ ಕಿಮೇಭಿರುಕ್ತೈ
ರಹಮೇವೇದಂ ಚರಾಚರಂ ವಿಶ್ವಮ್ ।
ಶೀಕರಫೇನತರಙ್ಗಾಃ
ಸಿನ್ಧೋರಪರಾಣಿ ನ ಖಲು ವಸೂನಿ ॥ ೧೪೫ ॥

೧೪೫. ಇಷ್ಟೆಲ್ಲ ಹೇಳಿದ್ದರಿಂದೇನು ? ಈ ಸ್ಥಾವರಜಂಗಮರೂಪವಾಗಿರುವ ವಿಶ್ವವೆಲ್ಲವೂ ನಾನೇ. ಹನಿಗಳು, ನೊರೆ, ಅಲೆಗಳು – ಇವು ಯಾವವೂ ಸಮುದ್ರಕ್ಕಿಂತ ಬೇರೆಯ ವಸ್ತುಗಳಲ್ಲವಷ್ಟೆ.

*ಶರಣಂ ನ ಭವತಿ[1] ಜನನೀ
ನ ಪಿತಾ ನ ಸುತಾ ನ ಸೋದರಾ ನಾನ್ಯೇ ।
ಪರಮಂ ಶರಣಮಿದಂ ಸ್ಯಾಚ್ಚರಣಂ
ಮಮ ಮೂರ್ಧ್ನಿ ದೇಶಿಕನ್ಯಸ್ತಮ್ ॥೧೪೬॥

೧೪೬. ತಾಯಿಯಾಗಲಿ ತಂದೆಯಾಗಲಿ ಮಕ್ಕಳಾಗಲಿ ಅಣ್ಣತಮ್ಮಂದಿರಾಗಲಿ ಬೇರೆ ಯಾರೇ ಆಗಲಿ ರಕ್ಷಕರಲ್ಲ. ನನ್ನ ತಲೆಯಮೇಲೆ ಇಟ್ಟ ಈ ಗುರುವಿನ ಚರಣವೇ ಪರಮರಕ್ಷಕವಾದೀತು.

ಆಸ್ತೇ ದೇಶಿಕಚರಣಂ
ನಿರವಧಿಕಾऽಸ್ತೇ[2] ತದೀಕ್ಷಣೇ ಕರುಣಾ ।
ಆಸ್ತೇ ಕಿಮಪಿ ತದುಕ್ತಂ
ಕಿಮತಃ ಪರಮಸ್ತಿ ಜನ್ಮಸಾಫಲ್ಯಮ್ ॥೧೪೭॥

೧೪೭. ಸದ್ಗುರುವಿನ ಚರಣವಿದೆ ; ಆತನ ನೋಟದಲ್ಲಿ ಗಡಿಯಿಲ್ಲದ ಕರುಣೆ ಇದೆ ; ಆತನು ಹೇಳಿಕೊಟ್ಟಿರುವ ಒಂದಾನೊಂದು ಉಪದೇಶವಿದೆ. ಜನ್ಮಕ್ಕೆ ಸಾಫಲ್ಯವನ್ನು ಕೊಡುವದು ಮತ್ತೇನಿದೆ ?

1. "ಶರಣಂ ನ ಹಿ ಮಮ ಜನನೀ" ಪಾ ॥ 2. "ನಿರವಧಿರಾಸ್ತೇ" ಪಾ ॥

*ಕಾರುಣ್ಯಸಾರಸಾಂದ್ರಾಃ
ಕಾಂಕ್ಷಿತವರದಾನಕಲ್ಪಕವಿಶೇಷಾಃ ।
ಶ್ರೀಗುರುಚರಣಕಟಾಕ್ಷಾಃ
ಶಿಶಿರಾಃ ಶಮಯನ್ತಿ ಚಿತ್ತಸನ್ತಾಪಮ್ ॥೧೪೮॥

೧೪೮. ಕಾರುಣ್ಯಸಾರದಿಂದ ದಟ್ಟವಾಗಿ, ಬೇಡಿದ ವರಗಳನ್ನು ನೀಡುವ ಕಲ್ಪವೃಕ್ಷಗಳಾಗಿರುವ ಶ್ರೀಗುರುವರೇಣ್ಯರ ತಂಪಿನ ಕುಡಿನೋಟಗಳು ಚಿತ್ತದ ಬೇಗೆಯನ್ನು ಆರಿಸುತ್ತವೆ.

ಕವಲಿತಚಞ್ಚಲಚೇತೋ
ಗುರುತರಮಣ್ಡೂಕಜಾತಪರಿತೋಷಾ ।
ಶೇತೇ ಹೃದಯಗುಹಾಯಾಂ
ಚಿರತರಮೇಕೈವ ಚಿನ್ಮಯೀ ಭುಜಗೀ ॥೧೪೯॥

೧೪೯. ಚಂಚಲವಾದ ಚಿತ್ತವೆಂಬ ದಪ್ಪನೆಯ ಕಪ್ಪೆಯನ್ನು ತಿಂದು ತೃಪ್ತವಾಗಿರುವ ಚಿದ್ರೂಪವಾದ ಹೆಣ್ಣು ಹಾವು ಬಹುಕಾಲದಿಂದ ತಾನೊಂದೇ ಹೃದಯಗುಹೆಯಲ್ಲಿ ಮಲಗಿರುವದು.

*ಮಯಿ ಸುಖಬೋಧಪಯೋಧೌ
ಮಹತಿ ಬ್ರಹ್ಮಾಣ್ಡಬುದ್ಬುದಸಹಸ್ರಮ್ ।
ಮಾಯಾಮಯೇನ ಮರುತಾ
ಭೂತ್ವಾ ಭೂತ್ವಾಮುಹುಸ್ತಿರೋಧತ್ತೇ[1] ॥೧೫೦॥

೧೫೦. ಜ್ಞಾನಾನಂದಮಹಾಸಾಗರನಾದ ನನ್ನಲ್ಲಿ ಸಾವಿರಾರು ಬ್ರಹ್ಮಾಂಡ ಗಳೆಂಬ ಗುಳ್ಳೆಗಳು ಮಾಯಾರೂಪವಾದ ಗಾಳಿಯಿಂದ ಎದ್ದೆದ್ದು ಮತ್ತೆ ಕಣ್ಮರೆ ಯಾಗುತ್ತಿರುವವು.

ಗುರುಕೃಪಯೈವ ಸುನಾವಾ[2]
ಪ್ರಾಕ್ತನಭಾಗ್ಯಾನುಕೂಲಮಾರುತಯಾ ।
ದುಸ್ಸಹದುಃಖತರಙ್ಗೈಸ್ತುಙ್ಗಃ
ಸಂಸಾರಸಾಗರಸ್ತೀರ್ಣಃ ॥೧೫೧॥

1. "ಪುನಸ್ತಿರೋಧತ್ತೇ" ಎಂಬುದಕ್ಕಿಂತ ಇದೇ ಮೇಲು.

2. "ಗುರುಕರುಣಯೈವ ನಾವಾ" ಪಾ ॥

೧೫೧. ಹಿಂದಿನ ಜನ್ಮದ ಪುಣ್ಯವೆಂಬ ಅನುಕೂಲವಾದ ಗಾಳಿಯಿಂದ ಮುನ್ನಡೆಯುವ ತಡೆಯುವದಕ್ಕೆ ಕಷ್ಟವಾದ ದುಃಖಗಳೆಂಬ ಅಲೆಗಳಿಂದ ಎತ್ತರವಾಗಿರುವ ಸಂಸಾರಸಾಗರವನ್ನು ಗುರುಕೃಪೆಯೆಂಬ ಒಳ್ಳೆಯ ಹಡಗಿನಿಂದಲೇ ದಾಟಿದೆನು.

[1]ಸತಿ ತಮಸಿ ಮೋಹರೂಪೇ
ವಿಶ್ವಮುಪಶ್ಯಂ ತದೇತದಿತ್ಯಖಿಲಮ್ ।
ಉದಿತವತಿ ಬೋಧಭಾನೌ
ಕಿಮಪಿ ನ ಪಶ್ಯಾಮಿ ಕಿಂನ್ವಿದಂ ಚಿತ್ರಮ್ ॥೧೫೨॥

೧೫೨. ಅಜ್ಞಾನವೆಂಬ ಕತ್ತಲೆಯಿದ್ದಾಗ ವಿಶ್ವವೆಲ್ಲವನ್ನೂ ಇಗೋ ಇದೆಂದು ಕಾಣುತ್ತಿದ್ದೆನು. ಆದರೆ ಜ್ಞಾನಸೂರ್ಯನು ಹುಟ್ಟಿದನೊ ಇಲ್ಲವೊ, ಈಗ ಏನೂ ಕಾಣುತ್ತಲಿಲ್ಲವಲ್ಲ! ಇದೇನು ಆಶ್ಚರ್ಯವು !

ನಾಹಂ ನಮಾಮಿ ದೇವಾನ್
ದೇವಾನತೀತ್ಯ ನ ಸೇವತೇ ದೇವಮ್ ।
ನ ತದನು ಕರೋತಿ ವಿಧಾನಂ
ತಸ್ಮೈ ಯತತೇ ನಮೋ ನಮೋ ಮಹ್ಯಮ್ ॥೧೫೩ ॥

೧೫೩. ನಾನು ದೇವತೆಗಳನ್ನು ನಮಸ್ಕರಿಸುವದಿಲ್ಲ. ದೇವತೆಗಳನ್ನು ಮೀರಿದವನು ದೇವತೆಯನ್ನು ನಮಸ್ಕರಿಸನು ; ಆಮೇಲೆ ವಿಧಿಯನ್ನು ಅನುಸರಿಸುವದೂ ಇಲ್ಲ. ಅಂಥ ಯತಿಯಾದ ನನಗೆ ನಮಸ್ಕಾರ, ನಮಸ್ಕಾರ !

## ಗ್ರಂಥದ ಉಪಸಂಹಾರ

ಇತ್ಯಾತ್ಮಬೋಧಲಾಭಂ
ಮುಹುರನುಚಿನ್ತ್ಯ ಪ್ರಮೋದಮಾನೇನ ।
ಪ್ರಾರಬ್ಧಕರ್ಮಣೋಽನ್ತೇ
ಪರಂ ಪದಂ ಪ್ರಾಪ್ಯತೇ ಹಿ ಕೈವಲ್ಯಮ್[1] ॥೧೫೪॥

---

1. ಈ ಶ್ಲೋಕವು ಕೆಲವು ಪಾಠಗಳಲ್ಲಿಲ್ಲ.

೧೫೪. ಈ ರೀತಿಯಲ್ಲಿ ಆತ್ಮಜ್ಞಾನವನ್ನು ಪಡೆದದ್ದನ್ನು ಕುರಿತು ಮತ್ತೆ ಮತ್ತೆ ಚಿಂತನೆ ಮಾಡಿ ಸಂತೋಷಗೊಂಡವನು ಪ್ರಾರಬ್ಧಕರ್ಮದ ಕೊನೆಯಲ್ಲಿ ಕೈವಲ್ಯವೆಂಬ ಪರಮಪದವನ್ನು ಪಡೆಯುತ್ತಾನೆ.

**ಮೋಹಾನ್ಧಕಾರಹರಣಂ**
**ಸಂಸಾರೋದ್ವೇಲಸಾಗರೋತ್ತರಣಮ್ ।**
**ಸ್ವಾತ್ಮನಿರೂಪಣಮೇತತ್**
**ಪ್ರಕರಣಮಕುರುತ ದಕ್ಷಿಣಾಮೂರ್ತಿಃ ॥೧೫೫॥**

೧೫೫. ಮೋಹವೆಂಬ ಕತ್ತಲೆಯನ್ನು ನಾಶಗೊಳಿಸಿ ಸಂಸಾರವೆಂಬ ಮೇರೆದಪ್ಪಿದ ಸಾಗರವನ್ನು ದಾಟುವದಕ್ಕೆ ಬೇಕಾದ ಈ ''ಸ್ವಾತ್ಮನಿರೂಪಣ''ವೆಂಬ ಪ್ರಕರಣವನ್ನು ದಕ್ಷಿಣಾಮೂರ್ತಿಯು ರಚಿಸಿದನು.

ಟಿಪ್ಪಣಿ :– 'ಪ್ರಕರಣಮನ್ತರ್ವಿಚಿನ್ತ್ಯತಾಂ ಸದ್ಭಿಃ' ಈ ಪ್ರಕರಣವನ್ನು ಸತ್ಪುರುಷರು ತಮ್ಮೊಳಗೆ ಚಿಂತಿಸಬೇಕು – ಎಂಬರ್ಥದ ಪಾಠವೊಂದು ''ಅಕುರುತ ದಕ್ಷಿಣಾಮೂರ್ತಿಃ'' ಎಂಬುದಕ್ಕೆ ಬದಲು ಕೆಲವು ಪುಸ್ತಕಗಳಲ್ಲಿದೆ.

**ಅಜ್ಞಾನಾನ್ಧ್ಯವಿಹನ್ತಾ**
**ವಿರಚಿತವಿಜ್ಞಾನಪಙ್ಕಜೋಲ್ಲಾಸಃ ।**
**ಮಾನಸಗಗನತಲಂ ಮೇ**
**ಭಾಸಯತಿ ಶ್ರೀನಿವಾಸಗುರುಭಾನುಃ ॥೧೫೬॥**

೧೫೬. ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವವನೂ ವಿಜ್ಞಾನವೆಂಬ ಕಮಲವನ್ನು ಅರಳಿಸುವಾತನೂ ಆದ ಶ್ರೀನಿವಾಸಗುರುವೆಂಬ ಸೂರ್ಯನು ನನ್ನ ಮನಸ್ಸೆಂಬ ಆಕಾಶಪ್ರದೇಶವನ್ನು ಬೆಳಗುತ್ತಿರುವನು.

ಟಿಪ್ಪಣಿ :– ಶ್ರೀನಿವಾಸನೆಂದರೆ ಲಕ್ಷ್ಮೀನಿಲಯನಾದ ನಾರಾಯಣನೆಂದೂ ಅರ್ಥವಾಗುತ್ತದೆ. ಕೊನೆಯ ಎರಡು ಪದ್ಯಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಓಂ ತತ್ಸತ್

* * *

# ಸ್ವಾತ್ಮನಿರೂಪಣದ ಸಾರ

೧–೨. ಗುರುನಮಸ್ಕಾರದಿಂದ ಭ್ರಾಂತಿಯು ತೊಲಗಿ ಅದ್ವೈತಾನುಭವ ವಾಗುವದು.

೩–೬. ಸಂಸಾರಸಂತಪ್ತನಾದ ಶಿಷ್ಯನಿಗೆ ಗುರುವು ಸ್ವಾತ್ಮನಿರೂಪಣಪರವಾದ ವಾಕ್ಯಗಳಿಂದ ಹೀಗೆಂದು ಬೋಧಿಸುತ್ತಾನೆ : ಆತ್ಮನಿಲ್ಲವೆಂಬುದು ಸಂಶಯಗ್ರಸ್ತವಾಗಲಾರದು, ಏಕೆಂದರೆ ಸಂಶಯಪಡುವದಕ್ಕೂ ಆಧಾರವಾಗಿರುವವನು ಆತ್ಮನು, ನಾನು ಬ್ರಹ್ಮವಲ್ಲವೆಂಬುದು ಮೋಹವು, ಮೋಹದಿಂದ ಭೇದವೂ ಅದರಿಂದ ಸರ್ವಕ್ಲೇಶಗಳೂ ಆಗಿರುತ್ತವೆ.

೭–೧೭. ಕ್ಲೇಶಗಳನ್ನು ತಪ್ಪಿಸಿಕೊಳ್ಳುವದಕ್ಕೆ ಪಂಚಕೋಶವಿವೇಕವನ್ನು ಮಾಡಬೇಕು. ಶರೀರ, ಪ್ರಾಣ, ಅಹಂಮಮತ್ವವನ್ನು ವಹಿಸುವ ಮನಸ್ಸು, ಚಿದಾಭಾಸವಾದ ಬುದ್ಧಿ, ಸುಪ್ತಿಸುಖದಲ್ಲಿ ಅಭಿಮಾನವಿರುವ ಅಹಂಕಾರ – ಇವೇ ಅನ್ನಮಯಾದಿಕೋಶಗಳು ; ಇವು ಯಾವವೂ ಆತ್ಮ ನಲ್ಲವೆಂದು ತಿಳಿಯಬೇಕು.

ಕ್ಷುದ್ರಸುಖಗಳಿಗೆ ಬಿಂಬರೂಪವಾಗಿರುವ ಆನಂದವೇ ಸರ್ವರ ಆತ್ಮನು. ಅನ್ನ ಮಯಾದಿಗಳನ್ನು ಅನುಭವಿಸುವವನೇ ಆ ಆತ್ಮನು ; ಅವನು ಎಲ್ಲವನ್ನೂ ಅನುಭವಿಸುತ್ತಾನೆ, ಯಾವದಕ್ಕೂ ಅನುಭಾವ್ಯನಲ್ಲ.

೧೮–೨೨. ಇಂಥದ್ದೆಂದು ಯಾವದು ಗೋಚರವಲ್ಲವೋ ಅದೇ ಬ್ರಹ್ಮವು ; ಇದು ಎಂಬುದು ಬಾಧಿತವಾದರೂ ಬಾಧ್ಯವಾಗದೆ ಇರುವದೇ ಬ್ರಹ್ಮತತ್ತ್ವವು. ಅದು ವೇದ್ಯವಲ್ಲದಿದ್ದರೂ ಸ್ವಯಂಪ್ರಕಾಶವಾದ್ದರಿಂದ ಪರೋಕ್ಷವಲ್ಲ.

ಆ ಬ್ರಹ್ಮದಲ್ಲಿ ಕೋಶ, ಶಕ್ತಿ – ಎಂಬ ಉಪಾಧಿಗಳಿಂದ ಜೀವತ್ವವೂ ಈಶ್ವರತ್ವವೂ ಉಂಟಾಗಿರುತ್ತವೆ ; ಅವುಗಳಿಲ್ಲದಿದ್ದರೆ ಬ್ರಹ್ಮವು ನಿಜರೂಪದಿಂದ ತೋರಿಕೊಳ್ಳುವದು. ಎಲ್ಲವೂ ಬಾಧಿತವಾಗಲು ಯಾವದೂ ಇಲ್ಲವಷ್ಟೆ, ಯಾವದೂ ಅಲ್ಲದ ಅದೇ ಬ್ರಹ್ಮವು.

೨೩–೩೮. ನಮ್ಮೊಳಗಿದ್ದು ಪ್ರಕಾಶಿಸುತ್ತಿದ್ದರೂ ಆತ್ಮನು ತತ್ತ್ವಮಸೀತ್ಯಾದಿವಾಕ್ಯ ಚಿಂತನೆಯಿಲ್ಲದವರಿಗೆ ಪರೋಕ್ಷನಾಗಿರುತ್ತಾನೆ. ಆದ್ದರಿಂದ ಪದಾರ್ಥಶೋಧನಪೂರ್ವಕವಾಗಿ ವಾಕ್ಯಾರ್ಥವನ್ನು ಚಿಂತಿಸಬೇಕು. ಕರ್ತೃತ್ವಾದ್ಯಭಿಮಾನಿಯೇ ತ್ವಂಪದದ ವಾಚ್ಯಾರ್ಥವು, ದೇಹೇಂದ್ರಿಯಾದಿಗಳಿಗೆ ಸಾಕ್ಷಿಯಾಗಿರುವವನೇ ಅದಕ್ಕೆ ಲಕ್ಷ್ಯಾರ್ಥವು ; ಜಗತ್ಕಾರಣವಾಗಿರುವ ಸರ್ವಜ್ಞತ್ವಾದಿಗುಣಯುಕ್ತವಾದದ್ದು ತತ್ಪದದ ವಾಚ್ಯಾರ್ಥವು, ನಿರುಪಾಧಿಕವಾದ ಅದ್ವೈತತತ್ತ್ವವೇ ತತ್ಪದಕ್ಕೆ ಲಕ್ಷ್ಯಾರ್ಥವು. ಪದ, ಪದಾರ್ಥ, ಆತ್ಮ – ಇವುಗಳಿಗೆ ಸಾಮಾನಾಧಿಕರಣ್ಯ, ವಿಶೇಷಣವಿಶೇಷ್ಯಭಾವ, ಲಕ್ಷ್ಯಲಕ್ಷಕಭಾವ – ಎಂದು ಮೂರು ಸಂಬಂಧಗಳಿರುವವು. ಈ ಪದಾರ್ಥಗಳು ಒಂದಕ್ಕೊಂದು ವಿರುದ್ಧವಾಗಿರುವದರಿಂದ ಇಲ್ಲಿ ಲಕ್ಷಣೆಯನ್ನೇ ಸ್ವೀಕರಿಸಬೇಕು. ಇಲ್ಲಿ 'ಗಂಗೆಯಲ್ಲಿ ಹಳ್ಳಿ' ಎಂಬ ವಾಕ್ಯದಲ್ಲಿರುವಂತೆ ಜಹಲ್ಲಕ್ಷಣೆಯನ್ನು ಗ್ರಹಿಸಬಾರದು ; 'ಕೆಂಪು ಓಡುತ್ತಿದೆ' ಎಂಬಲ್ಲಿರುವಂತೆ ಅಜಹಲ್ಲಕ್ಷಣೆಯನ್ನು ಗ್ರಹಿಸತಕ್ಕದ್ದಲ್ಲ ; 'ಇವನೇ ಆ ದ್ವಿಜನು' ಎಂಬಲ್ಲಿರುವಂತೆ ಜಹದಜಹಲ್ಲಕ್ಷಣೆಯನ್ನೇ ಸ್ವೀಕರಿಸಬೇಕು. ಹೀಗೆ 'ತತ್ತ್ವಮಸಿ' ಎಂಬ ವಾಕ್ಯವು ಪ್ರತ್ಯಕ್ಷ,

ಪರೋಕ್ಷತ್ವ– ಮುಂತಾದ ವಿರುದ್ಧಧರ್ಮಗಳನ್ನು ಬಿಟ್ಟು ಅಸಿಪದದಿಂದ ಬ್ರಹ್ಮಾತ್ಮೈಕ್ಯವನ್ನು ಬೋಧಿಸುತ್ತದೆ. ಹೀಗೆ ವಾಕ್ಯಾರ್ಥವನ್ನು ತಿಳಿದವರಿಗೆ ಶೋಕನಾಶವಾಗುವದೆಂದು ವೇದವು ಹೇಳುತ್ತಿದೆ.

೩೯–೪೦. ಲೋಕದಲ್ಲಿ ವಿಧಿವಚನಗಳೇ ಪ್ರವರ್ತಕವಾಗಿರುತ್ತವೆಯಾದರೂ ಇಷ್ಟಾರ್ಥಜ್ಞಾನವನ್ನುಂಟುಮಾಡುವ ವಾಕ್ಯವೂ ಪ್ರವೃತ್ತಿಯನ್ನುಂಟುಮಾಡಬಹುದಾಗಿದೆ. 'ರಾಜನು ಹೋಗುತ್ತಿದಾನೆ', 'ಮಗನು ಹುಟ್ಟಿದನು'– ಮುಂತಾದ ವಾಕ್ಯಗಳು ಇದಕ್ಕೆ ಉದಾಹರಣೆ.

೪೧–೪೯. ಗುರುವಿಲ್ಲದೆ ಬರಿಯ ಕರ್ಮಗಳಿಂದಲೇ ಜ್ಞಾನವುಂಟಾಗಲಾರದು. ವೇದವು ಅನಾದಿಯಾದ್ದರಿಂದಲೋ ಪರಮೇಶ್ವರವಾಕ್ಯವಾದ್ದರಿಂದಲೋ ಪರಮಪ್ರಮಾಣವಾಗಿರುತ್ತದೆ. ವೇದವಾಕ್ಯವು ಇತರ ಪ್ರಮಾಣಗಳನ್ನು ಅಪೇಕ್ಷಿಸುವದಿಲ್ಲವಾದ್ದರಿಂದ ಬ್ರಹ್ಮಾತ್ಮಾದಿಯಾದ ಅತೀಂದ್ರಿಯಾರ್ಥಗಳನ್ನು ತಿಳಿಸುವದಕ್ಕೆ ಪ್ರಮಾಣವಾಗಿರುತ್ತದೆ. ವೇದವು ಪ್ರಮಾಣವೆಂಬುದೇಕೆಂದರೆ ತಾನು ಅನಾದಿಯಾಗಿದ್ದರೂ ಅದಕ್ಕೆ ಸ್ವಯಂಪ್ರಕಾಶನಾದ ಆತ್ಮನು ವ್ಯಂಜಕನಾಗಿರುತ್ತಾನೆ. ರೂಪವನ್ನು ಕಾಣುವದಕ್ಕೆ ಚಕ್ಷುಸ್ಸೇ ಅಸಾಧಾರಣಕರಣವಾಗಿರುವಂತೆ ಅದೃಷ್ಟಾರ್ಥವನ್ನರಿಯುವದಕ್ಕೆ ವೇದವೇ ಪ್ರಮಾಣವು ; ಪೌರುಷೇಯವಾಕ್ಯವು ಅದನ್ನು ಹೇಳುವದು ಅನುವಾದಮಾತ್ರವೇ.

೫೦–೫೫. ವೇದದಲ್ಲಿ ದ್ವೈತಾದ್ವೈತಗಳೆರಡನ್ನು ಹೇಳುವ ಅಂಶಗಳಿರುತ್ತವೆ. ಆದರೂ ಅದ್ವೈತವೇ ಸತ್ಯವು, ಅದರಲ್ಲಿ ದ್ವೈತವು ಶುಕ್ತಿಯಲ್ಲಿ ರಜತದಂತೆ ಅಧ್ಯಸ್ತವಾಗಿರುತ್ತದೆ. ಸತ್ಯವಾದ ಅದ್ವೈತವು ಅನೃತವಾದ ದ್ವೈತದಲ್ಲಿ ಆರೋಪಿತವಾಗಿರಲಾರದು. ಇವೆರಡೂ ಆರೋಪಿತವೆಂದರೆ ಶೂನ್ಯವಾದವು ಬಂದೊದಗುತ್ತದೆ. ಆದ್ದರಿಂದ ಅದ್ವೈತವೇ ವೇದಾರ್ಥವು. ದ್ವೈತವು ಲೋಕಸಿದ್ಧವಾಗಿರುವದರಿಂದ ಅದು ವೇದಪ್ರತಿಪಾದ್ಯವಲ್ಲ, ಪ್ರಮಾಣಾಂತರಗೋಚರವಲ್ಲದ ಅದ್ವೈತವೇ ಪ್ರತಿಪಾದ್ಯವು ; ಅದ್ವೈತಜ್ಞಾನದಿಂದ ಸುಖಪ್ರಾಪ್ತಿಯಿದೆ, ದ್ವೈತಜ್ಞಾನದಿಂದ ದುಃಖವೇ ಆಗುತ್ತದೆ : ಆದ್ದರಿಂದ ಸಫಲವಾದ ಅದ್ವೈತಜ್ಞಾನವೇ ವೇದದಿಂದ ಆಗುತ್ತದೆಯೆನ್ನಬೇಕು.

೫೬–೬೩. ಆನಂದರೂಪವಾದ ಅದ್ವೈತಕ್ಕೆ ಜೀವತ್ವವು ಸ್ವಾಭಾವಿಕವಲ್ಲ ; ಸ್ವಾಭಾವಿಕವಾದರೆ ಬೆಂಕಿಯ ಬಿಸಿಯಂತೆ ಅದಕ್ಕೆ ನಾಶವಿಲ್ಲದಿರಬೇಕಾಗುವದು. ಜೀವನು ಸಾಧನದಿಂದ ಪರಮಾತ್ಮನಾಗುವದಿಲ್ಲ ; ಏಕೆಂದರೆ ರಸದಿಂದ ಕಬ್ಬಿಣವು ಚಿನ್ನವಾಗುವಂತೆ ಜೀವನು ಪರಮಾತ್ಮನಾದರೆ ಪರಮಾತ್ಮತ್ವವೂ ವಿನಾಶಿಯಾಗಬೇಕಾಗುವದು. ಸಾಧನದ ಬಲದಿಂದ ಪರಮಾತ್ಮನಾದರೆ ಕಾಲಾನುಕಾಲಕ್ಕೆ ಆ ಪರಮಾತ್ಮಸಾಮ್ಯವು ನಾಶವಾಗಲೇಬೇಕು. ಆದ್ದರಿಂದ ಮೋಹದಿಂದಲೇ ಜೀವತ್ವವು ತೋರುತ್ತಿದೆ, ಜ್ಞಾನದಿಂದ ಪರಮಾತ್ಮನೆಂಬುದು ಗೊತ್ತಾಗುತ್ತದೆ ಎಂಬುದೇ ಸರಿ.

೬೪–೬೬. ಸಚ್ಚಿದಾನಂದವಾದ ಅದ್ವೈತತತ್ತ್ವವನ್ನು ಶ್ರುತಿಸ್ಮೃತಿಗಳು ಹೇಳುತ್ತಿವೆ. ಏಕತ್ವಬೋಧಕವಾಕ್ಯಗಳಿಗೆ ಮಿಕ್ಕವಾಕ್ಯಗಳು ಶೇಷವಾಗಿರುತ್ತವೆ. ಕರ್ತೃತ್ವಾದಿಗಳನ್ನು ಕಳೆಯುವ ಈ ಜ್ಞಾನವು ತತ್ತ್ವಮಸ್ಯಾದಿವಾಕ್ಯದಿಂದ ಆಗುತ್ತದೆ.

೬೭–೭೦. ಆತ್ಮಜ್ಞಾನವು ಕರ್ಮಾಂಗವಲ್ಲ, ಏಕೆಂದರೆ ಇದರ ಪ್ರಕರಣವು ಬೇರೆ, ಜ್ಞಾನಕರ್ಮಗಳಿಗೆ ಅಧಿಕಾರಿವಿಷಯಗಳು ಬೇರೆ, ಅವೆರಡೂ ಒಂದಕ್ಕೊಂದು ಅತ್ಯಂತ ವಿರುದ್ಧವಾಗಿರುತ್ತವೆ. ಆದ್ದರಿಂದ ಅಜ್ಞಾನ ನಾಶಕ್ಕಾಗಿ ಜ್ಞಾನಕ್ಕೆ ಇತರ ಸಹಾಯವೂ ಬೇಡ.

೨೧–೨೪. ಸಾಕ್ಷಿಯಾಗಿರುವ ಪರಮಾತ್ಮನಿಗೆ ಸಾಕ್ಷ್ಯದ ಧರ್ಮಗಳು ಅಂಟಲಾರವು. ಅದಕ್ಕೂ ಪ್ರಪಂಚಕ್ಕೂ ರಜ್ಜುಸರ್ಪಗಳಿಗಿರುವಂತೆ ಆಧ್ಯಾಸಿಕಸಂಬಂಧವೇ ಇರುತ್ತದೆ. ಬ್ರಹ್ಮಜ್ಞಾನಕ್ಕೆ ಕರ್ತೃಕರ್ಮಗಳು ತೋರುವದೇ ಇಲ್ಲ ; ಕರ್ತೃತ್ವಾದಿಗಳು ಮಾಯಾಶಕ್ತಿಯಿಂದ ತೋರುವವೆನ್ನುವದೂ ಸರಿಯಲ್ಲ, ಏಕೆಂದರೆ ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೂ ಇಲ್ಲವೇ ಇಲ್ಲ.

೨೫–೨೯. ಸಚ್ಚಿದ್ರೂಪವಾದ ಬ್ರಹ್ಮವೇ ಜಗತ್ಕಾರಣವು ; ಅದನ್ನರಿತರೆ ಎಲ್ಲವನ್ನೂ ಅರಿತಂತೆ ಆಗುವದು. ವಿಶ್ವಕಾರಣವು ಅಸತ್ತಾಗಲಾರದು, ಬೀಜವಿದ್ದರಲ್ಲವೆ, ಮೊಳಕೆ ? ಅಸತ್ತಿನಿಂದ ಯಾವ ಕಾರ್ಯವೂ ಆಗಲಾರದು.

೮೦–೮೩. ಬ್ರಹ್ಮದಲ್ಲಿ ಜಗತ್ತು, ಗುರುಶಿಷ್ಯರು – ಮುಂತಾದ ಆಕಾರವು ತೋರುತ್ತಿರುತ್ತದೆ. ಅಪಕ್ವಚಿತ್ತರಿಗೆ ಜಗತ್ತು ಸತ್ಯವೆಂದು ತೋರುವದು. ವೇದಗಳು ಜಗತ್ತು ಅಸತ್ಯವೆಂದು ಮೊದಲು ಬೋಧಿಸುತ್ತವೆ, ಪೂರ್ವಪುಣ್ಯದಿಂದ ಚಿತ್ತಪರಿಪಾಕವನ್ನು ಹೊಂದಿದವರಿಗೆ ಎಲ್ಲವೂ ಬ್ರಹ್ಮವೇ ಎಂದು ಬೋಧಿಸುತ್ತವೆ. ಅವಿವೇಕಿಗಳಿಗೆ ಮಾತ್ರವೇ ಜಗತ್ತು ಸತ್ಯವೆಂದು ತೋರುತ್ತಿರುವದು.

೮೪–೯೨. ನಾನೆಂಬ ಪ್ರತ್ಯಯಕ್ಕೆ ವಿಷಯವಾಗಿ ಸಿದ್ಧವಾಗಿರುವ ಬ್ರಹ್ಮವಸ್ತುಕೂಡ ಮೂಢರು ಕಾಣಲಾರದೆ ಇರುವರು. ನಾನು, ಇದು – ಎಂಬ ಅರಿವುಗಳಲ್ಲಿ ಮೊದಲನೆಯದು ಬ್ರಹ್ಮಾತ್ಮನಲ್ಲೂ ಎರಡನೆಯದು ದೇಹಾದಿಗಳಲ್ಲಿಯೂ ವರ್ತಿಸುವವು. ದೇಹಾದಿಗಳಲ್ಲಿರುವ ನಾನೆಂಬ ಬುದ್ಧಿಯು ಭ್ರಾಂತಿ ; ಸಾಕ್ಷಿಯೇ ಅಹಮರ್ಥವೆಂಬುದೇ ಯುಕ್ತ, ಅಹಂಕಾರವು ಜಡವಾದರೂ ಅವನ ಸಂಬಂಧದಿಂದ ಚೈತನ್ಯದಂತೆ ತೋರುತ್ತಿರುವದು. ಎಲ್ಲರಲ್ಲಿಯೂ ನಾನು ನಾನು ಎಂದು ತೋರುತ್ತಿರುವದು ಬ್ರಹ್ಮವೇ. ಗೋಶಬ್ದಕ್ಕೆ ಗೋತ್ವವೇ ಮುಖ್ಯಾರ್ಥವಾದರೂ ವ್ಯಕ್ತಿಯೂ ಅದಕ್ಕೆ ಅರ್ಥವಾಗಿ ತೋರುವಂತೆಯೂ ಬೆಂಕಿಯ ಸಂಗದಿಂದ ಕಬ್ಬಿಣದ ದಗ್ಧೃತ್ವವು ತೋರುವಂತೆಯೂ ಅಹಂಕಾರವೂ ಭ್ರಾಂತಿಯಿಂದ ನಾನು ಎಂಬ ಶಬ್ದಕ್ಕೆ ಅರ್ಥವೆಂದು ತೋರುತ್ತಿರುವದು. ಆದ್ದರಿಂದ ದೇಹಾದಿವ್ಯತಿರಿಕ್ತನಾದ ಆತ್ಮನೇ ಅಹಮರ್ಥವೆಂದು ತಿಳಿಯಬೇಕು. ಆತ್ಮರು ಅನೇಕರಲ್ಲ ; ಸುಖದುಃಖಗಳು ದೇಹದ ಅವಯವಭೇದದಿಂದ ಬೇರೆಬೇರೆಯಾಗಿ ಕಾಣುತ್ತಿರುವಂತೆ ಆತ್ಮರು ಅನೇಕರೆಂದು ಉಪಾಧಿಭೇದದಿಂದ ಕಾಣುತ್ತಿರುವರು.

೯೩–೯೭. ಜಗತ್ತಿನ ಸ್ವರೂಪಕಾರಣಾದಿಗಳನ್ನು ವಿಚಾರಿಸಬಾರದು, ಎಲ್ಲವೂ ಮಾಯೆಯೇ ಎಂದು ತಿಳಿಯಬೇಕು. ಕಟ್ಟಿಗೆಯ ಮರದ ತಿಳಿವಳಿಕೆಯಲ್ಲಿ ಆನೆಯೂ, ಮರದಾನೆಯ ತಿಳಿವಳಿಕೆಯಲ್ಲಿ ಮರವೂ ಮರೆಯಾಗುವಂತೆ ಜಗತ್ತೂ ಪರಮಾತ್ಮನೂ ಒಂದರ ತಿಳಿವಳಿಕೆಯಲ್ಲೊಂದು ಮರೆಯಾಗುತ್ತಿರುವವು. ಆತ್ಮನೆಂಬ ಬಟ್ಟೆಯಮೇಲೆ ಬರೆದಿರುವ ಚಿತ್ರವೇ ಜಗತ್ತು. ಅದ್ವಯವಾದ ಬ್ರಹ್ಮವೇ ಇದ್ದುಕೊಂಡಿದೆ, ಅದಕ್ಕಿಂತ ಬೇರೆ ಯಾವದೂ ಇಲ್ಲ – ಎಂಬುದೇ ಜ್ಞಾನಿಗಳ ನಿಶ್ಚಯವು. ಈ ವಿದ್ಯಾವಿದ್ಯೆಗಳೆಂಬ ಭೇದವೂ ವ್ಯವಹಾರದೃಷ್ಟಿಯಿಂದಲೇ : ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೂ ಇಲ್ಲವೇ ಇಲ್ಲ, ಇದೆಯೆಂದರೆ ಅದೂ ಅಸ್ತಿರೂಪವಾದ ಬ್ರಹ್ಮವೇ.

೯೮–೧೦೦. ಮಾಯೆಯು ತತ್ತ್ವಜ್ಞಾನದಿಂದ ಬಾಧಿತವಾದರೂ ತೋರುತ್ತಲೇ ಇರುತ್ತದೆ. ಆದರೆ ಜ್ಞಾನಿಗಳು ಅದನ್ನು ಆತ್ಮನಿಗಿಂತ ಬೇರೆಯೆಂದು ತಿಳಿಯುವದಿಲ್ಲ.

೧೦೧–೧೦೩. ಬ್ರಹ್ಮಜ್ಞಾನಿಗಳಿಗೆ ಚಿಂತ್ಯಾಚಿಂತ್ಯ, ಕೃತ್ಯಾಕೃತ್ಯಾದಿಭೇದಗಳಿರುವದಿಲ್ಲ. ಬಂಧಮುಕ್ತಿಗಳಿಲ್ಲ. ಇದೇ ವೇದಾಂತಸಿದ್ಧಾಂತವು.

೧೦೪–೧೫೩. ಹೀಗೆಂದು ಗುರುವು ಬೋಧಿಸಲಾಗಿ ಶಿಷ್ಯನು ತನ್ನೊಳಗೆ ತಾನು ಇಂತು ವಿಮರ್ಶಿಸಿಕೊಂಡನು. ನಾನು ಅಜರಾಮರನಾದ ಪರಮಾನಂದರೂಪನಾದ ಪರಿಪೂರ್ಣ ಪರಮಶಿವನೇ ಆಗಿರುತ್ತೇನೆ. ಅಕಾರಾದಿಕ್ಷಕಾರಾಂತವಾಗಿರುವ ವರ್ಣಗಳಿಂದಾಗಿರುವ ಶಬ್ದಗಳು ಹೇಳುವದೆಲ್ಲವೂ ನಾನೇ ಆಗಿರುತ್ತೇನೆ. ನಾನೇ ಈ ಚರಾಚರಪ್ರಪಂಚವು. ತಂದೆತಾಯಿಯಾಗಲಿ ಮಕ್ಕಳು ಮರಿಗಳು, ಒಡಹುಟ್ಟಿದವರು ಮೊದಲಾದವರಾಗಲಿ ನನಗೆ ಶರಣರಲ್ಲ ; ನನ್ನ ತಲೆಯ ಮೇಲಿಟ್ಟ ಸದ್ಗುರುಚರಣವೇ ಶರಣವು. ಗುರುಚರಣವೂ ಆತನ ಕೃಪಾಪಾಂಗವೂ ಆತನ ಸದುಪದೇಶವೂ ಇರುವಲ್ಲಿ ಜನ್ಮಸಾಫಲ್ಯವು ಮತ್ತೇನಿರುವದು ? ಶ್ರೀಗುರುವೇ ಚಿತ್ತಸಂತಾಪವನ್ನು ಕಳೆಯುವಾತನು. ಮನಸ್ಸನ್ನು ಲಯಗೊಳಿಸುವ ಚಿದ್ರೂಪವೇ ಹೃದಯದಲ್ಲಿರುತ್ತದೆ. ಜಗತ್ತೆಲ್ಲವೂ ನನ್ನಲ್ಲಿ ತೋರಿ ಹಾರುತ್ತಿದೆ, ಗುರುಕೃಪೆಯಿಂದ ಸಂಸಾರಸಾಗರವನ್ನು ದಾಟಿರುತ್ತೇನೆ. ಅಜ್ಞಾನದ ಕತ್ತಲು ಇರುವವರೆಗೂ ಜಗತ್ತು ಕಾಣಿಸುತ್ತಿತ್ತು : ಜ್ಞಾನದ ಬೆಳಕು ಬಂದಾಗ ಕಾಣಿಸುತ್ತಿಲ್ಲವಲ್ಲ, ಇದೇನು ವಿಚಿತ್ರವು ? ನಾನು ಯಾವ ದೇವತೆಗಳನ್ನೂ ನಮಸ್ಕರಿಸಬೇಕಾಗಿಲ್ಲ ; ಸರ್ವದೇವಾತೀತನಾದ ನನಗೇ ನಮಸ್ಕಾರ, ನಮಸ್ಕಾರ !

೧೫೪. ಹೀಗೆಂಬ ಆತ್ಮಜ್ಞಾನಲಾಭವನ್ನು ಮತ್ತೆಮತ್ತೆ ಚಿಂತಿಸುತ್ತಿದ್ದವನಿಗೆ ಪ್ರಾರಬ್ಧಭೋಗವು ಮುಗಿಯಲು ಕೈವಲ್ಯವೇ ದೊರಕುವದು.

೧೫೫–೧೫೬. ಅಜ್ಞಾನವನ್ನು ನೀಗಿ ಸಂಸಾರಸಾಗರವನ್ನು ದಾಟಿಸುವ ಈ ಪ್ರಕರಣವನ್ನು ದಕ್ಷಿಣಾಮೂರ್ತಿಯು ವಿರಚಿಸಿರುತ್ತಾನೆ. ಅಜ್ಞಾನವನ್ನು ಕಳೆದು ವಿಜ್ಞಾನವನ್ನು ಅರಳಿಸುವ ಶ್ರೀನಿವಾಸಗುರುವೆಂಬ ಸೂರ್ಯನು ನನ್ನ ಮಾನಸಗಗನದಲ್ಲಿ ಬೆಳಗುತ್ತಿರುವನು.

-----

# ಪರಿಶಿಷ್ಟ

## ಅದ್ವೈತತಾರಾವಳಿಃ

ಅಖಿಲಪರಹಂಸದೇಶಿಕಮಾಗಮಗೂಢಾರ್ಥದರ್ಶಕಂ ಪ್ರಾಜ್ಞಮ್ ।
ಆನನ್ದಪೂರ್ಣಸಾಗರಮನಿಶಮಹಂ ನೌಮಿ ಶಂಕರಾಚಾರ್ಯಮ್ । ॥೧॥

ಶರಣಂ ನ ಭವತಿ ಜನನೀ ನ ಪಿತಾ ನ ಚ ಸೋದರಾ ವಾಽನ್ಯೇ ।
ಪರಮಂ ಶರಣಮಿದಂ ಮೇ ಚರಣಂ ಮಮ ಶಿರಸಿ ದೇಶಿಕನ್ಯಸ್ತಮ್ । ॥೨॥

ಸ್ವಾತ್ಮಾವಬೋಧಹೀನಾಃ ಕುಣಪಶರೀರಾಭಿಮಾನಪರಿತುಷ್ಟಾಃ ।
ವಾರಿಜಬುದ್ಬುದರಕ್ಷಾಂ ಮೂಢಾಃ ಕುರ್ವನ್ತಿ ಲೋಹಬನ್ಧೇನ । ॥೩॥

ತದಿದಂ ತಾದೃಶಮಿಾದೃಶಮೇತಾವತ್ತಾವದಿತಿ ಚ ಯನ್ನ ಭವೇತ್ ।
ಬ್ರಹ್ಮತದಿತ್ಯವಧೇಯಂ ನೋ ಚೇದ್ವಿಷಯೋ ಭವೇತ್ ಪರೋಕ್ಷಂ ಚ । ॥೪॥

ಸತಿ ಕೋಶಶಕ್ತ್ಯುಪಾಧೌ ಸಂಭವತಸ್ತಸ್ಯ ಜೀವತೇಶ್ವರತೇ ।
ನೋ ಚೇತ್ತಯೋರಭಾವಾತ್ ವಿಗತವಿಶೇಷಂ ವಿಭಾತಿ ನಿಜರೂಪಮ್ । ॥೫॥

ಜಲಮಿವ ಮೃಗತೃಷ್ಣಾಯಾಂ ಶುಕ್ತೌ ರಜತಂ ಯಥಾಹಿರಿವ ರಜ್ಜೌ ।
ಸತ್ಯಮಿವ ಸಕಲಮೇತತ್ ಕಲ್ಪಿತಮಾಭಾತಿ ಮಯಿ ಪರಾನನ್ದೇ । ॥೬॥

ಇದಮಿದಮಿತಿ ಪ್ರತೀತೇ ವಸ್ತುನಿ ಸರ್ವತ್ರ ಬಾಧ್ಯಮಾನೇಽಪಿ ।
ಅನಿದಮಬಾಧ್ಯಂ ತತ್ತ್ವಂ ಸತ್ತ್ವಾದೇತಸ್ಯ ನ ಚ ಪರೋಕ್ಷತ್ವಮ್ । ॥೭॥

ಅಖಿಲಾಗಮಾನ್ತಲಕ್ಷ್ಯಂ ಹಾನೋಪಾದಾನಹೀನಚಿನ್ಮಾತ್ರಮ್ ।
ಅನುಭೂತಿಮಾತ್ರಗಮ್ಯಂ ಬ್ರಹ್ಮೈವಾಹಂ ತದಸ್ಮಿ ಪರಿಪೂರ್ಣಮ್ । ॥೮॥

ಚಿನ್ಮಾತ್ರಮಮಲಮಕ್ಷಯಮದ್ವಯಮಾನನ್ದಮನುಭವಾರೂಢಮ್ ।
ಬ್ರಹ್ಮೈವಾಸ್ಮಿತದನ್ಯನ್ನ ಕಿಮಪ್ಯಸ್ತೀತಿ ನಿಶ್ಚಯೋ ವಿದುಷಾಮ್ । ॥೯॥

ಜ್ಞಾನಂ ಕರ್ಮಣಿ ನ ಸ್ಯಾಜ್ಜ್ಞಾನೇ ಕರ್ಮೇದಮಪಿ ತಥಾ ನ ಸ್ಯಾತ್ ।
ಕಥಮಯಮನಯೋರುಭಯೋಸ್ತಪನತಮೋವತ್ ಸಮುಚ್ಚಯೋ ಘಟತೇ ।

ತಸ್ಮಾನ್ಮೋಹನಿವೃತ್ತೌ ಜ್ಞಾನಂ ನ ಸಹಾಯಮನ್ಯದರ್ಥಯತೇ ।
ಯದ್ವದ್ಘನತರತಿಮಿರಪ್ರಕರಪರಿಧ್ವಂಸನೇ ಸಹಸ್ರಾಂಶುಃ । ॥೧೦॥

ಕರ್ಮಭಿರೇವ ನ ಬೋಧಃ ಪ್ರಭವತಿ ಗುರುಣಾ ವಿನಾ ದಯಾನಿಧಿನಾ ।
ಆಚಾರ್ಯವಾನ್ಹಿ ಪುರುಷೋ ವೇದೇತ್ಯರ್ಥಸ್ಯ ವೇದಸಿದ್ಧತ್ವಾತ್ ॥೧೨॥

ಐಕ್ಯಪರೈಃ ಶ್ರುತಿವಾಕ್ಯೈರಾತ್ಮಾ ಶಶ್ವತ್ಪ್ರಬೋಧ್ಯಮಾನೋಽಪಿ ।
ದೇಶಿಕದಯಾವಿಹೀನೈರಪರೋಕ್ಷಯಿತುಂ ನ ಶಕ್ಯತೇ ಪುರುಷೈಃ ॥೧೩॥

ಮಯಿ ಸುಖಬೋಧಪಯೋಧೌ ಮಹತಿ ಬ್ರಹ್ಮಾಣ್ಡಬುದ್ಬುದಸಹಸ್ರಮ್ ।
ಮಾಯಾಮಯೇನ ಮರುತಾ ಭೂತ್ವಾ ಭೂತ್ವಾ ಪುನಸ್ತಿರೋಧತ್ತೇ ॥೧೪॥

ದನ್ತಿನಿ ದಾರುವಿಕಾರೇ ದಾರು ತಿರೋಭವತಿ ಸೋಽಪಿ ತತ್ರೈವ ।
ಜಗತಿ ತಥಾ ಪರಮಾತ್ಮಾ ಪರಮಾತ್ಮನ್ಯಪಿ ಜಗತ್ತಿರೋಧತ್ತೇ ॥೧೫॥
ತಸ್ಮಿನ್ ಬ್ರಹ್ಮಣಿ ವಿದಿತೇ ವಿಶ್ವಮಶೇಷಂ ಭವೇದಿದಂ ವಿದಿತಮ್ ।
ಕಾರಣಮೃದಿ ವಿದಿತಾಯಾಂ ಘಟಕರಕಾದ್ಯಾ ಯಥಾಽವಗಮ್ಯನ್ತೇ ॥೧೬॥
ಏಷ ವಿಶೇಷೋ ವಿದುಷಾಂ ಪಶ್ಯನ್ತೋಽಪಿ ಪ್ರಪಞ್ಚಸಂಚಾರಮ್ ।
ಪೃಥಗಾತ್ಮನೋ ನ ಕಿಂಚಿತ್ಪಶ್ಯೇರನ್ನಖಿಲನಿಗಮನಿರ್ಣೀತಾತ್ ॥೧೭॥
ಜಗದಾಕಾರತಯಾಪಿ ಪ್ರಥತೇ ಗುರುಶಿಷ್ಯವಿಗ್ರಹತಯಾಪಿ ।
ಬ್ರಹ್ಮಾಕಾರತಯಾಪಿ ಪ್ರತಿಭಾತೀದಂ ಪರಾತ್ಪರಂ ಸರ್ವಮ್ ॥೧೮॥
ಕಿಂ ಚಿನ್ತ್ಯಂ ಕಿಮಚಿನ್ತ್ಯಂ ಕಿಂ ಕಥನೀಯಂ ಕಿಮಸ್ತ್ಯಕಥನೀಯಮ್ ।
ಕಿಂ ಕೃತ್ಯಂ ಕಿಮಕೃತ್ಯಂ ನಿಖಿಲಮಿದಂ ಜಾನತಾಂ ವಿದುಷಾಮ್ । ॥೧೯॥
ಕಬಳಿತಚಞ್ಚಲಚೇತೋ ಗುರುತರಮಣ್ಡೂಕಜಾತಪರಿತೋಷಾ ।
ಶೇತೇ ಹೃದಯಗುಹಾಯಾಂ ಚಿರತರಮೇಕೈವ ಚಿನ್ಮಯೀ ಭುಜಗೀ ॥೨೦॥
ಸತಿ ತಮಸಿ ಮೋಹರೂಪೇ ವಿಶ್ವಮಪಶ್ಯಂ ತದೇತದಿತ್ಯಖಿಲಮ್ ।
ಉದಯತಿ ಬೋಧಾದಿತ್ಯೇ ಕಿಮಪಿ ನ ಪಶ್ಯಾಮಿ ಕಿಂ ನ್ವಿದಂ ಚಿತ್ರಮ್ ॥೨೧॥
ವಿದ್ಯಾಸ್ಥಿತಯಃ ಪ್ರಾಜ್ಞೇ(?)[1] ಸಾಧನಭೂತಾಃ ಪ್ರಯತ್ನನಿಷ್ಪಾದ್ಯಾಃ ।
ಲಕ್ಷಣಭೂತಾಸ್ತು ಪುನಃ ಸ್ವಭಾವತಸ್ಸಂಸ್ಥಿತಾಃ ಸ್ಥಿತಪ್ರಜ್ಞೇ ॥೨೨॥
ಜೀವನ್ಮುಕ್ತಿರಿತೀಮಾಂ ವದನ್ತ್ಯವಸ್ಥಾಂ ಸ್ಥಿರಾತ್ಮಸಂಬೋಧಾಮ್ ।
ಬಾಧಿತಭೇದಪ್ರತಿಭಾಮಬಾಧಿತಾತ್ಮಾವಬೋಧಸಾಮರ್ಥ್ಯಾಮ್ ॥೨೩॥
ಅಜರೋಽಹಮಕ್ಷರೋಽಹಂ ಪ್ರಾಜ್ಞೋಽಹಂ ಪ್ರತ್ಯಗಾತ್ಮಬೋಧೋಽಹಮ್ ।
ಪರಮಾನನ್ದಮಯೋಽಹಂ ಪರಮಶಿವೋಽಹಮ್ ಸದಾತ್ಮಪರಿಪೂರ್ಣಃ ॥೨೪॥
ಬಹುಭಿಃ ಕಿಮೇಭಿರುಕ್ತೈರಹಮೇವೇದಂ ಚರಾಚರಂ ಸರ್ವಮ್ ।
ಶೀಕರಫೇನತರಙ್ಗಾಸ್ಸಿನ್ಧೋರಪರಾಣಿ ನ ಖಲು ವಸ್ತೂನಿ ॥೨೫॥
ವಿದಿತಂ ವೇದರಹಸ್ಯಂ ವಿದಿತಂ ದೇಹಾದಿರಯಮನಾತ್ಮೇತಿ ।
ವಿದಿತಂ ಪರ ಇತಿ ಚಾಽಽತ್ಮಾ ಕಿಮಿತಃ ಪರಮಸ್ತಿ ಜನ್ಮಸಾಫಲ್ಯಮ್ ॥೨೬॥
ಗುರುಕರುಣಯೈವ ನಾವಾ ಪ್ರಾಕ್ತನಭಾಗ್ಯಾನುಕೂಲಮಾರುತಯಾ ।
ದುಸ್ಸಹದುಃಖತರಙ್ಗಸ್ತುಙ್ಗಃ ಸಂಸಾರಸಾಗರಸ್ತೀರ್ಣಃ ॥೨೭॥
ಕಾರುಣ್ಯಸಾರಸಾನ್ದ್ರಾಃ ಕಾಙ್ಕ್ಷಿತವರದಾನಕಲ್ಪಿತವಿಶೇಷಾಃ ।
ಶ್ರೀಗುರುಕಟಾಕ್ಷಪಾತಾಃ ಶಿಶಿರಾಃ ಶಮಯನ್ತು ಚಿತ್ತಸಂತಾಪಮ್ ॥೨೮॥

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸದಾಶಿವಬ್ರಹ್ಮೇಂದ್ರವಿರಚಿತಾ
ಅದ್ವೈತತಾರಾವಳೀ ಸಮಾಪ್ತಾ.

---

1. "ವಿದ್ಯಾಸ್ಥಿತಯೋಽಪ್ರಜ್ಞೇ" ಎಂದಿರಬೇಕೆ ?

# ಶ್ಲೋಕಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಮೊದಲನೆಯದು ಶ್ಲೋಕಸಂಖ್ಯೆಯನ್ನೂ ಎರಡನೆಯದು ಪುಟಸಂಖ್ಯೆಯನ್ನೂ ಸೂಚಿಸುವವು :—


| | ಶ್ಲೋಕ. | ಪುಟ. |
|---|---|---|
| ಅಂಶದ್ವಯವತಿ ನಿಗಮೇ | ೫೦ | ೧೬ |
| ಅಖಿಲಮಹಮಖಿಲಾನಾಂ | ೧೧೬ | ೩೫ |
| ಅಜರೋಽಹಮಕ್ಷರೋಽಹಂ | ೧೦೫ | ೩೨ |
| ಅಜ್ಞಾನಾನ್ವ್ಯವಿಹಸ್ತಾ | ೧೫೬ | ೪೮ |
| ಅದ್ವೈತಂ ಸುಖರೂಪಂ | ೫೫ | ೧೮ |
| ಅದ್ವೈತಮೇವ ಸತ್ಯಂ | ೫೧ | ೧೭ |
| ಅಧಿಕಾರಿವಿಷಯಭೇದೌ | ೬೮ | ೨೧ |
| ಅನವಗತಕಾಞ್ಚನಾನಾಂ | ೮೩ | ೨೬ |
| ಅನ್ನಪ್ರಾಣಮನೋವಾಯು... | ೮ | ೩ |
| ಅನ್ನಮಯಾದೇರಸ್ಮಾತ್ | ೧೫ | ೫ |
| ಅನುಭವತಿ ವಿಶ್ವಮಾತ್ಮಾ | ೧೭ | ೬ |
| ಅಸಕೃದನುಚಿನ್ತಿತಾನಾಂ | ೧೦೩ | ೩೧ |
| ಅಸ್ತಿವಿಕಲ್ಪಮತೀನಾಂ | ೧೧೭ | ೩೫ |
| ಅಸ್ತ್ಯನ್ಯದಿತಿ ಮತಂ | ೯೮ | ೩೦ |
| ಅಸ್ತಿಸ್ವಯಮಿತ್ಯಸ್ಮಿನ್ | ೪ | ೨ |
| ಅಹಮಾಲಮ್ಬನಸಿದ್ಧಂ | ೮೪ | ೨೬ |
| ಅಹಮಿದಮಿತಿ ಚ ಮತಿಭ್ಯಾಂ | ೮೫ | ೨೭ |
| ಆಢ್ಯೋಽಹಮಾತ್ಮಭಾಜಾಂ | ೧೦೬ | ೩೨ |
| ಆತ್ಮಮಯೇ ಮಹತಿ ಪಟೇ | ೯೫ | ೨೯ |
| ಆರೋಪಿತಂ ಯದಿ ಸ್ಯಾತ್ | ೫೨ | ೧೭ |
| ಆಸ್ತೇ ದೇಶಿಕಚರಣಂ | ೧೪೭ | ೪೫ |
| ಇತಿ ಬೋಧಿತಃ ಸ ಗುರುಣಾ | ೧೦೪ | ೩೧ |
| ಇತ್ಥಂ ಬೋಧಿತಮರ್ಥಂ | ೩೮ | ೧೩ |
| ಇತ್ಯಾತ್ಮಬೋಧಲಾಭಂ | ೧೫೪ | ೪೭ |
| ಇದಮಿದಮಿತಿ ಪ್ರತೀತೇ | ೧೯ | ೬ |
| ಇಹಪರಸುಖವಿಮುಖೋಽಹಂ | ೧೦೭ | ೩೨ |
| ಈಶೋಽಹಮೀಶ್ವರಾಣಾಂ | ೧೦೮ | ೩೩ |
| ಉದಯೋಽಹಮೇವ ಜಗತಾಂ | ೧೦೯ | ೩೩ |
| ಊರ್ಜಸ್ವಲನಿಜವಿಭವೈಃ | ೧೧೦ | ೩೩ |
| ಋಷಿರಹಮೃಷಿಗಣಕೋಽಹಂ | ೧೧೧ | ೩೩ |
| ಏಕತ್ರ ವೃತ್ತಿರರ್ಥೇ | ೩೦ | ೧೦ |
| ಏಕತ್ವಬೋಧಕಾನಾಂ | ೬೫ | ೨೦ |
| ಏಕೋಽಹಮೇತದೀದೃಶಮ್ | ೧೧೨ | ೩೪ |
| ಏವಮಪಿ ವಿರಹಿತಾನಾಂ | ೨೩ | ೮ |
| ಏಷ ವಿಶೇಷೋ ವಿದುಷಾಂ | ೧೦೦ | ೩೧ |
| ಐಕ್ಯಪರೈಃ ಶ್ರುತಿವಾಕ್ಯೈಃ | ೪೧ | ೧೪ |
| ಐಕ್ಯಾವಭಾಸಕೋಽಹಂ | ೧೧೩ | ೩೪ |
| ಓಜೋಽಹಮೋಷಧೀನಾಂ | ೧೧೪ | ೩೪ |
| ಔಷಧಮಘಮಶುಭಾನಾಂ | ೧೧೫ | ೩೫ |
| ಕರುಣಾರಸಭರಿತೋಽಹಂ | ೧೧೮ | ೩೬ |
| ಕರ್ತೃ ಚ ಕರ್ಮ ಚ | ೭೩ | ೨೩ |
| ಕರ್ತೃತ್ವಾದಿಕಮೇತದ್ | ೭೪ | ೨೪ |
| ಕರ್ಮಪ್ರಕರಣನಿಷ್ಠಂ | ೬೭ | ೨೧ |
| ಕರ್ಮಭಿರೇವ ನ ಬೋಧಃ | ೪೩ | ೧೪ |
| ಕವಲಿತಚಞ್ಚಲಚೇತೋ | ೧೪೯ | ೪೬ |
| ಕಾರಣಮಸದಿತಿ ಕಥಯನ್ | ೭೮ | ೨೫ |
| ಕಾರಣಮಸದಿತಿ ಕೇಚಿತ್ | ೭೭ | ೨೪ |
| ಕಾರುಣ್ಯಸಾರಸಾನ್ದ್ರಃ | ೧೪೮ | ೪೬ |

| | ಶ್ಲೋಕ. | ಪುಟ. |
|---|---|---|
| ಕಿಂ ಚಿನ್ಮಯಂ ಕಿಮಚಿನ್ಮಯಮ್ | ೧೦೧ | ೩೧ |
| ಕಿಮಿದಂ ಕಿಮಸ್ಯ ರೂಪಂ | ೯೩ | ೨೯ |
| ಕುರುತೇ ವಪುಷ್ಯಹನ್ತಾಂ | ೧೧ | ೪ |
| ಕೋಶಃ ಪ್ರಾಣಮಯೋಽಯಂ | ೧೦ | ೪ |
| ಕ್ಷಾಲಿತಕಲುಷಮಯೋಽಹಂ | ೧೪೪ | ೪೪ |
| ಖಾನಾಮಗೋಚರೋಽಹಂ | ೧೧೯ | ೩೬ |
| ಗಲಿತದ್ವೈತಕಥೋಽಹಂ | ೧೨೦ | ೩೬ |
| ಗುರುಕೃಪಯೈವ ಸುನಾವಾ | ೧೫೧ | ೪೬ |
| ಗೋಶಬ್ದಾರ್ಥೋ ಗೋತ್ವಂ | ೮೯ | ೨೮ |
| ಘನತರವಿಮೋಹತಿಮಿರ- | ೧೨೧ | ೩೭ |
| ಚರದಚರದಾತ್ಮಕೋಽಹಂ | ೧೨೨ | ೩೭ |
| ಚಿನ್ಮಾತ್ರಮಮಲಮಕ್ಷಯಮ್ | ೯೬ | ೩೦ |
| ಛನ್ನಸ್ಸಿಸ್ತುನಿಗೂಢಜ್ಞಾನ- | ೧೨೩ | ೩೭ |
| ಜಗದಾಕಾರತಯಾಪಿ ಪ್ರಥತೇ | ೮೦ | ೨೫ |
| ಜಲಜಾಸನಾದಿಗೋಚರ | ೧೨೪ | ೩೭ |
| ಜಹದಜಹತೀತಿ ಸಾ ಸ್ಯಾತ್ | ೩೫ | ೧೨ |
| ಜ್ಞಾನಂ ಕರ್ಮಣಿ ನ ಸ್ಯಾತ್ | ೬೯ | ೨೨ |
| ಜ್ಞಾನಂ ತದೇವಮಮಲಂ | ೭೧ | ೨೨ |
| ಜ್ಞಾನಮಹಂ ಜ್ಞೇಯಮಹಂ | ೧೨೬ | ೩೮ |
| ಜೀವತ್ವಮಪಿ ತಥೇದಂ | ೬೦ | ೧೯ |
| ಝುಞ್ಝತಿಮಞ್ಜತಿಶಿಞ್ಜಿತ- | ೧೨೫ | ೩೮ |
| ತತ್ತ್ವಾತೀತಪದೋಽಹಂ | ೧೨೭ | ೩೯ |
| ತತ್ತ್ವಾವಬೋಧಶಕ್ತ್ಯಾ | ೯೯ | ೩೦ |
| ತತ್ತ್ವಂತ್ವಮಸೀತಿ | ೩೭ | ೧೨ |
| ತದಿದಂ ಕಾರಣಮೇಕಂ | ೭೬ | ೨೪ |
| ತದಿದಂ ತಾಪತ್ರಯಾವೃತಂ | ೧೮ | ೬ |
| ತದಿದಂ ಭವತಿ ನ ಯುಕ್ತಂ | ೫೯ | ೧೯ |
| ತಸ್ಮಾತ್ಸರ್ವಪರಿಶೇಷ್ಯಹಮ್ | ೮೮ | ೨೮ |
| ತಸ್ಮಾದಶೇಷಸಾಕ್ಷೀ | ೮೭ | ೨೭ |
| ತಸ್ಮಾತ್ಪದಾರ್ಥಶೋಧನ | ೨೪ | ೮ |

| | ಶ್ಲೋಕ. | ಪುಟ. |
|---|---|---|
| ತಸ್ಮಾತ್ಪರಂ ಸ್ವಕೀಯಂ | ೬೩ | ೨೦ |
| ತಸ್ಮಾನ್ಮೋಹನಿವೃತ್ತ್ಯೈ | ೭೦ | ೨೨ |
| ತಸ್ಮಾತ್ತ್ವತೋ ಯದಿ ಸ್ಯಾತ್ | ೬೧ | ೧೯ |
| ತಸ್ಮಿನ್ ಬ್ರಹ್ಮಣಿ ವಿದಿತೇ | ೭೫ | ೨೪ |
| ದಗ್ಧೃತ್ವಾದಿಕಮಯಸಃ | ೯೦ | ೨೮ |
| ದನ್ತಿನಿ ದಾರುವಿಕಾರೇ | ೯೪ | ೨೯ |
| ದೇಶಿಕವರಂ ದಯಾಲುಂ | ೨ | ೧ |
| ದೇಹಾಹನ್ತೇನ್ದ್ರಿಯಾಣಾಂ | ೨೬ | ೯ |
| ದೇಹೇನ್ದ್ರಿಯಾದಿದೃಶ್ಯ- | ೯೧ | ೨೮ |
| ದೇಹೇನ್ದ್ರಿಯಾದಿಧರ್ಮಾನ್ | ೨೫ | ೯ |
| ದೈವತದೈತ್ಯನಿಶಾಚರ | ೧೨೮ | ೩೯ |
| ಧರ್ಮಾಧರ್ಮಮಯೋಽಹಂ | ೧೨೯ | ೩೯ |
| ನ ಕ್ಲೇಶ ಪಞ್ಚಕಮಿದಂ | ೭ | ೩ |
| ನಾಪೇಕ್ಷತೇ ಯದನ್ಯತ್ | ೪೫ | ೧೫ |
| ನಾಮಾದಿವಿರಹಿತೋಽಹಂ | ೧೩೦ | ೪೦ |
| ನಾವೇದ್ಯಮಪಿ ಪರೋಕ್ಷಂ | ೨೦ | ೭ |
| ನಾಹಂ ನಮಾಮಿ ದೇವಾನ್ | ೧೫೩ | ೪೭ |
| ನಾಹಮಿತಿ ವೇತ್ತಿ ಯೋಽಸೌ | ೫ | ೨ |
| ನಿಖಿಲಂ ದೃಶ್ಯವಿಶೇಷಂ | ೧೦೨ | ೩೧ |
| ನಿಖಿಲಮಪಿ ವಾಚ್ಯಮರ್ಥಂ | ೩೩ | ೧೧ |
| ನಿಗಮಗಿರಾ ಪ್ರತಿಪಾದ್ಯಂ | ೫೬ | ೧೮ |
| ನಿಗಮೇಷು ನಿಶ್ಚಿತಾರ್ಥಂ ತನ್ತ್ರೇ | ೪೯ | ೧೬ |
| ಪರಜೀವಭೇದಬಾಧಕ- | ೧೩೧ | ೪೦ |
| ಪರಿಪಕ್ವಮಾನಸಾನಾಂ | ೮೨ | ೨೬ |
| ಪ್ರತ್ಯಕ್ಷಾದ್ಯನವಗತಂ | ೫೪ | ೧೭ |
| ಪ್ರಾತ್ಯಕ್ಷ್ಯಂ ಪಾರೋಕ್ಷ್ಯಂ | ೩೧ | ೧೦ |
| ಪ್ರಾಯಃ ಪ್ರವರ್ತಕತ್ವಂ | ೩೯ | ೧೩ |
| ಫಣಧರಭೂಧರಧಾರಣವಿಗ್ರಹ- | ೧೩೨ | ೪೦ |
| ಬದ್ಧೋ ಭವಾಮಿ ನಾಹಂ | ೧೩೩ | ೪೦ |
| ಬ್ರಹ್ಮತ್ವಮೇವ ತಸ್ಮಾತ್ | ೬ | ೨ |

| | ಶ್ಲೋಕ. | ಪುಟ | | ಶ್ಲೋಕ. | ಪುಟ |
|---|---|---|---|---|---|
| ಬಹುಭಿಃ ಕಿಮೇಭಿರುಕ್ತೈಃ | ೧೪೫ | ೪೫ | ವಿಧಿರೇವ ನ ಪ್ರವೃತ್ತಿಂ | ೪೦ | ೧೩ |
| ಭಕ್ತಿರಹಂ ಭಜನಮಹಂ | ೧೩೪ | ೪೧ | ವಿರಹಿತಕಾಮ್ಯನಿಷಿದ್ಧೋ | ೪೨ | ೧೪ |
| ಮಯಿ ಸುಖಬೋಧಪಯೋಧೌ | ೧೫೦ | ೪೬ | ವಿವಿಧೋಪಾಧಿವಿಮುಕ್ತಂ | ೨೮ | ೯ |
| ಮಾನಾನ್ತರೋಪರೋಧಾತ್ | ೩೨ | ೧೧ | ವೇದಾವಸಾನವಾಚಾ | ೨೭ | ೯ |
| ಮಾನಂ ಪ್ರಬೋಧಯನ್ತಂ | ೪೬ | ೧೫ | ವೇದೋಽನಾದಿತಯಾ ವಾ | ೪೪ | ೧೪ |
| ಮಾನ್ಯೋಽಹಮಸ್ಮಿ ಮಹತಾಂ | ೧೩೫ | ೪೧ | ವೇದೋಽನಾದಿರಮುಷ್ಯ ವ್ಯಞ್ಜಕ | ೪೭ | ೧೫ |
| ಮೋಹಾನ್ಧಕಾರಹರಣಂ | ೧೫೫ | ೪೮ | ಶಮದಮವಿರಹಿತಮನಸಾಂ | ೧೪೦ | ೪೩ |
| ಯಜನಯಜಮಾನಯಾಜಕ– | ೧೩೬ | ೪೧ | ಶರಣಂ ನ ಭವತಿ ಜನನೀ | ೧೪೬ | ೪೫ |
| ಯದ್ವತ್ಸುಖದುಃಖಾನಾಂ | ೯೨ | ೨೯ | ಶ್ರೀಗುರುಚರಣದ್ವನ್ದ್ವಂ | ೧ | ೧ |
| ಯದ್ವದಯೋ ರಸವಿದ್ಧಂ | ೫೮ | ೧೯ | ಷಡ್ಭಾವವಿರಹಿತೋಽಹಂ | ೧೪೧ | ೪೩ |
| ಯದ್ವ್ಯಾರೋಪಣಮುಭಯೋಃ | ೫೩ | ೧೭ | ಸಂವಿತ್ಸುಖಾತ್ಮಕೋಽಹಂ | ೧೪೨ | ೪೪ |
| ಯದಿ ವಾ ಪರೇಣ ಸಾಮ್ಯಂ | ೬೨ | ೧೯ | ಸಂಸಾರದಾವಪಾವಕ– | ೩ | ೧ |
| ಯಸ್ಮಾನ್ನ ಸೋಽಯಮಸತೋ | ೭೯ | ೨೫ | ಸತ್ಯಂ ಜಗದಿತಿ ಭಾನಂ | ೮೧ | ೨೬ |
| ಯಸ್ಮಿನ್ನಿಹಿರವದುದಿತೇ | ೬೬ | ೨೦ | ಸತ್ಯಜ್ಞಾನಾನನ್ದಂ | ೬೪ | ೨೦ |
| ಯಃ ಸ್ಫುರತಿ ಬಿಮ್ಬಭೂತಃ | ೧೪ | ೫ | ಸತಿ ಕೋಶಶಕ್ತ್ಯುಪಾಧೌ | ೨೧ | ೭ |
| ರಕ್ಷಾವಿಧಾನಶಿಕ್ಷಾವೀಕ್ಷಿತ– | ೧೩೭ | ೪೨ | ಸತಿ ತಮಸಿ ಮೋಹರೂಪೇ | ೧೫೨ | ೪೭ |
| ರಜ್ಜ್ವಾದೇರುರಗಾದ್ಯೈಃ | ೭೨ | ೨೩ | ಸತಿ ಸಕಲದೃಶ್ಯಬಾಧೇ | ೨೨ | ೮ |
| ರೂಪಾಣಾಮವಲೋಕೇ | ೪೮ | ೧೬ | ಸಾಮಾನಾಧಿಕರಣ್ಯಂ ತದನು | ೨೯ | ೧೦ |
| ಲಕ್ಷಣಲಕ್ಷ್ಯಮಯೋಽಹಂ | ೧೩೮ | ೪೨ | ಸುಪ್ತಿಗತೈಃ ಸುಖಲೇಶೈಃ | ೧೩ | ೫ |
| ವಪುರಿದಮನ್ನಮಯಾಖ್ಯಃ | ೯ | ೪ | ಸುಪ್ತೌ ಸ್ವಯಂ ವಿಲೀನಾ | ೧೨ | ೪ |
| ವಪುರಿನ್ದ್ರಿಯಾದಿವಿಷಯೇ | ೮೬ | ೨೭ | ಸೋಽಯಂ ದ್ವಿಜ ಇತಿ | ೩೬ | ೧೨ |
| ವರ್ಣಾಶ್ರಮರಹಿತೋಽಹಂ | ೧೩೯ | ೪೨ | ಸ್ವಯಮೇವಾನುಭವತ್ವಾತ್ | ೧೬ | ೬ |
| ವ್ಯವಹಾರಸ್ಯ ದಶೇಯಂ | ೯೭ | ೩೦ | ಸ್ವಾಭಾವಿಕಂ ಯದಿ ಸ್ಯಾತ್ | ೫೭ | ೧೮ |
| ವಾಚ್ಯಾರ್ಥಮತ್ಯಜನ್ತ್ಯಾಃ | ೩೪ | ೧೧ | ಹವ್ಯಮಹಂ ಕವ್ಯಮಹಂ | ೧೪೩ | ೪೪ |

# ಶಬ್ದಾನುಕ್ರಮಣಿಕೆ

ಇಲ್ಲಿರುವ ಸಂಖ್ಯೆಗಳು ಶ್ಲೋಕವನ್ನು ಸೂಚಿಸುತ್ತವೆ. ಅತಿಸ್ಫುಟವಾಗಿರುವ ಅರ್ಥವನ್ನು ಬರೆಯದೆ ಶಬ್ದಗಳನ್ನು ಮಾತ್ರ ತಿಳಿಸಿದೆ. ಈ* ಚಿಹ್ನೆಯು ಭಾಷ್ಯದಲ್ಲಿ ಈ ಶಬ್ದಪ್ರಯೋಗವು ಕಾಣುವದಿಲ್ಲವೆಂಬುದನ್ನು ತಿಳಿಸುತ್ತದೆ.


೧. **ಅಕ್ಷರಮ್**–
ನಾಶವಿಲ್ಲದ ಬ್ರಹ್ಮ ೨೮ ; ವರ್ಣಮಾಲಿಕೆಯ ಅಕ್ಷರ ೧೪೪.

೨. **ಅಙ್ಕುರಜನನೀಶಕ್ತಿಃ**–
ಬೀಜದಲ್ಲಿರುವ ಮೊಳಕೆಯನ್ನುಂಟು ಮಾಡುವ ಶಕ್ತಿ, ೭೭.

೩. **ಅಙ್ಗಾಙ್ಗಿತ್ವಮ್**–
ಒಂದು ಮುಖ್ಯ, ಇನ್ನೊಂದು ಅದಕ್ಕೆ ಅಧೀನ ಅಥವಾ ಬೇಕಾಗಿರುವದು– ಎಂಬ ಸಂಬಂಧ, ೬೮.

೪. ***ಅಜಹತೀ ಲಕ್ಷಣಾ**–
ತನ್ನ ಅರ್ಥವನ್ನು ಬಿಡದೆ ಮತ್ತೊಂ–ದನ್ನು ತಿಳಿಸುವ ಶಬ್ದ ವೃತ್ತಿ ೩೪.

೫. **ಅತೀನ್ದ್ರಿಯಮ್**–
ಇಂದ್ರಿಯಕ್ಕೆ ನಿಲುಕದ, ೪೫.

೬. **ಅದ್ವಯಮ್, ಅದ್ವೈತಮ್**–
ತನಗೆರಡನೆಯದಿಲ್ಲದ, ೨, ೨೮, ೫೦, ೫೧, ೫೨, ೫೩, ೫೪, ೬೪.

೭. **ಅಧ್ಯಾಸಃ**–
ಒಂದರಲ್ಲಿ ಮತ್ತೊಂದನ್ನು ಕಲ್ಪಿಸುವದು, ೫೨.

೮. **ಅನುಭವಃ**–
ಅನುಭವದ ಸ್ವರೂಪ, ೧೬, ಇಂದ್ರಿಯ ಜ್ಞಾನವಲ್ಲದ ನೇರಾದ ಅನುಭವ,೨೮.

೯. **ಅನುಭಾವ್ಯತ್ವಮ್**–
ಅನುಭವಕ್ಕೆ ವಿಷಯವಾಗಿರುವಿಕೆ,೧೬.

೧೦. **ಅಬಾಧ್ಯಮ್**–
ಹೀಗಲ್ಲವೆಂದು ಜ್ಞಾನದಿಂದ ಹೊಡೆದು ಹಾಕಲಾಗದ, ೧೯.

೧೧. **ಅಶೇಷಸಾಕ್ಷೀ**–
ಎಲ್ಲವನ್ನೂ ನೇರಾಗಿ ನೋಡುವ ಆತ್ಮಚೈತನ್ಯ ೮೭.

೧೨. **ಅಸತ್**–
ಇಲ್ಲದ್ದು, ಹುಸಿಯಾದದ್ದು ೭೭.

೧೩. ***ಅಸಿಪದಮ್**–
ತತ್ತ್ವಮಸಿವಾಕ್ಯದಲ್ಲಿ ಐಕ್ಯವನ್ನು ತಿಳಿಸುವ ಅಸಿ ಎಂಬ ಪದ, ೩೭.

೧೪. **ಅಹಙ್ಕಾರಃ**–
ನಾನು ಎಂಬ ರೂಪದ ಅಂತಃಕರಣವೃತ್ತಿ ೧೩, ೮೭.

೧೫. **ಅಹಮರ್ಥಃ**–
ಅಹಂಪ್ರತ್ಯಯದ ಅರ್ಥ, ೮೯, ೯೧.

೧೬. **ಅಹಂಬುದ್ಧಿಃ**–
ನಾನೆಂಬ ತಿಳಿವಳಿಕೆ, ೮೬.

೧೭. **ಆತ್ಮಾ**–
ತನ್ನ ನಿಜವಾದ ಸ್ವರೂಪ, ೮, ೧೧, ೧೨, ೧೩, ೨೪, ೪೧.

೧೮. **ಆನನ್ದಃ**–
ಆನಂದಮಯಕೋಶದ ಸಾರವಾದ ಸುಖ, ವೃತ್ತಿರೂಪಾನಂದಕ್ಕೆ ಬಿಂಬವಾಗಿರುವ ಆತ್ಮ ೧೪.

೧೯. ***ಆನನ್ದಕೋಶಃ**
ಸುಷುಪ್ತಿಯ ಸುಖಗಳ ಅಭಿಮಾನವುಳ್ಳ ಅಹಂಕಾರ, ೧೩.

೨೦. **ಆರೋಪಣಮ್**–
ಹುಟ್ಟುಗಟ್ಟುವದು, ಅಧ್ಯಾಸ, ೫೩.

೨೧. *ಉಪನಿಷದುದ್ಯಾನಮ್–
ಉಪನಿಷತ್ತೆಂಬ ಹೂದೋಟ,೧೧೯.

೨೨. ಕರ್ಮಾಙ್ಗಮ್–
ಕರ್ಮಕ್ಕೆ ಬೇಕಾಗಿರುವ (ಜ್ಞಾನ), ೬೭.

೨೩. ಕಾರಣಮ್–
ಜಗತ್ಕಾರಣ, ೭೬, ೭೭, ೭೯.

೨೪. ಕೋಶಃ–
ಅನ್ನಮಯಾದಿಕೋಶ, ೯,೧೦,೧೧.

೨೫. *ಕೋಶಶಕ್ತ್ಯುಪಾಧಿಃ–
ಜೀವನಿಗೆ ಉಪಾಧಿಯಾದ ಕೋಶ ಮತ್ತು ಈಶ್ವರನಿಗೆ ಉಪಾಧಿಯಾಗಿ ಇರುವ ಶಕ್ತಿ ೨೧.

೨೬. ಕೈವಲ್ಯಮ್–
ವಿದೇಹಮುಕ್ತಿ, ೧೫೪.

೨೭. *ಕ್ಲೇಶಪಞ್ಚಕಮ್–
ಅಸ್ಮಿತೆ ಮುಂತಾದ ಮನಸ್ಸಿನ ಐದು ಕ್ಲೇಶಗಳು, ೭.

೨೮. *ಖಣ್ಡಜ್ಞಾನಮ್–
ಪರಿಚ್ಛಿನ್ನಜ್ಞಾನ, ೧೧೯.

೨೯. *ಚಿತ್ಪ್ರತಿಬಿಮ್ಬಾ–
ಚಿತ್ತಿನ ಛಾಯೆಯುಳ್ಳ ಬುದ್ಧಿ, ವಿಜ್ಞಾನ ಮಯಕೋಶ, ೧೨.

೩೦. ಚಿನ್ಮಾತ್ರಮ್ ಚೈತನ್ಯಮ್–
ಬರಿಯ ಚಿತ್ತು ಬ್ರಹ್ಮ ೨೭, ೯೬.

೩೧. *ಜಹತೀಲಕ್ಷಣಾ–
ತನ್ನ ಅರ್ಥವನ್ನು ಬಿಟ್ಟು ಮತ್ತೊಂದರ್ಥವನ್ನು ತಿಳಿಸುವ ಶಬ್ದವೃತ್ತಿ ೩೩.

೩೨. *ಜಹದಜಹತೀ ಲಕ್ಷಣಾ–
ತನ್ನರ್ಥದ ಒಂದಂಶವನ್ನು ಬಿಟ್ಟು ಒಂದಂಶವನ್ನು ತೆಗೆದುಕೊಂಡು ತಿಳಿಸುವ ಶಬ್ದವೃತ್ತಿ ೩೫.

೩೩. ಜೀವಃ–
ಸಂಸಾರಿ, ೫೬, ೫೭, ೫೮, ೬೧, ೬೨.

೩೪. ಜೀವತ್ವೇಶ್ವರತ್ವೇ –
ಜೀವತ್ವವೂ ಈಶ್ವರತ್ವವೂ, ೨೧.

೩೫. ಜ್ಞಾನಮ್–
ಆತ್ಮಜ್ಞಾನ, ಆತ್ಮ ೬೯, ೭೦, ೭೧.

೩೬. ತತ್ತ್ವಮಸಿ–
ಮಹಾವಾಕ್ಯದಲ್ಲಿ ಒಂದು, ೨೩, ೬೬.

೩೭. ತತ್ಪದಮ್
ತತ್ತ್ವಮಸಿವಾಕ್ಯದಲ್ಲಿ ಬ್ರಹ್ಮವನ್ನು ಹೇಳುವ ಪದ, ೨, ೨೭, ೨೮.

೩೮. *ತೃಪ್ತಿದೀಪಃ–
ತೃಪ್ತಿ ಎಂಬ ದೀಪ, ೧೧೧.

೩೯. ತ್ವಂಪದಮ್–
ತತ್ತ್ವಮಸಿವಾಕ್ಯದಲ್ಲಿ ಜೀವನನ್ನು ಹೇಳುವ ಪದ, ೨೫, ೨೬.

೪೦. *ದಕ್ಷಿಣಾಮೂರ್ತಿಃ–
ಶಿವನ ಒಂದು ಲೀಲಾವಿಗ್ರಹ, ೧೫೫.

೪೧. *ದೇಶಿಕಃ
ಆಚಾರ್ಯ, ೨೪, ೪೧, ೧೪೭.

೪೨. ದ್ವೈತಮ್–
ಭೇದಪ್ರಪಂಚ, ೫೦, ೫೪, ೫೫.

೪೩. *ನಿಗಮಾಃ–
ವೇದಗಳು, ೪೫, ೫೦, ೫೬.

೪೪. *ನಿಗಮಾನ್ತಾಃ–
ವೇದಾಂತಗಳು, ಉಪನಿಷತ್ತುಗಳು, ೮೧.

೪೫. ಪಞ್ಚಕೋಶಃ–
ಅನ್ನಮಯಾದಿಗಳೆಂಬ ಐದು ಆತ್ಮಾಭಾಸಗಳು ೭, ೮.

೪೬. ಪರೋಕ್ಷಮ್–
ಕಾಲದೇಶಗಳ ಮರೆಯುಳ್ಳದ್ದು, ೧೯, ೨೦, ೨೩.

೪೭. *ಪದಾರ್ಥಶೋಧನಮ್–
ಮಹಾವಾಕ್ಯಗಳಲ್ಲಿರುವ ಪದಗಳ ಅರ್ಥವನ್ನು ಗೊತ್ತುಪಡಿಸುವದು, ೨೪.

೪೮. *ಪರಮಶಿವಃ–
ಪರಮಾತ್ಮನು, ೧೦೫

೪೯. **ಪರಮಾತ್ಮಾ**—
ನಿಜವಾಗಿ ಆತ್ಮನಾಗಿರುವವನು, ಬ್ರಹ್ಮ ೬೧, ೬೪, ೯೪.

೫೦. ***ಪರಾತ್ಪರಂ ತತ್ತ್ವಮ್**—
ದೊಡ್ಡದಕ್ಕಿಂತ ದೊಡ್ಡದಾದ ತತ್ತ್ವ, ಪರಮಾತ್ಮ ೮೦.

೫೧. ***ಪ್ರತ್ಯಕ್ಪ್ರಕಾಶಮಾನಃ**—
ಒಳಗೇ ಆತ್ಮನಾಗಿ ಬೆಳಗುತ್ತಿರುವ ಆತ್ಮ ೨೩.

೫೨. **ಪ್ರತ್ಯಕ್ಷಾದಿ**—
ಪ್ರತ್ಯಕ್ಷವೇ ಮುಂತಾದ ಪ್ರಮಾಣ, ೫೪.

೫೩. ***ಪ್ರತ್ಯಗಾತ್ಮಬೋಧಃ**—
ಒಳಗಿನ ಆತ್ಮವಾಗಿರುವ ಚೈತನ್ಯವು, ೧೦೫.

೫೪. ***ಪ್ರವರ್ತಕತ್ವಮ್**—
ಕ್ರಿಯೆಯಲ್ಲಿ ತೊಡಗಿಸುವದು, ೩೯.

೫೫. **ಪ್ರವೃತ್ತಿಃ**—
ಕ್ರಿಯೆಯಲ್ಲಿ ತೊಡಗುವದು, ೪೦.

೫೬. **ಪ್ರಾಣಮಯಃ**—
ಪಂಚಕೋಶಗಳಲ್ಲಿ ಒಂದು, ೧೦.

೫೭. **ಬ್ರಹ್ಮ**—
ಪರಮಾತ್ಮ ೫, ೬, ೧೬, ೨೨, ೭೪, ೭೫.

೫೮. **ಮನೋಮಯಃ**—
ಪಂಚಕೋಶಗಳಲ್ಲಿ ಒಂದು, ೧೧.

೫೯. ***ಮಹದ್ ವಾಕ್ಯಮ್**—
ತತ್ತ್ವಮಸಿ – ಮುಂತಾದ ಜೀವೇಶ್ವರೈಕ್ಯವನ್ನು ಬೋಧಿಸುವ ವಾಕ್ಯ, ೩೮.

೬೦. **ಮಾಯಾ**—
ಪ್ರಪಂಚದ ಹುಸಿತೋರಿಕೆ, ೯೩, ೯೯.

೬೧. ***ಮಾಯಾಶಕ್ತಿಃ**—
ಅವಿದ್ಯೆ, ೭೪.

೬೨. ***ಮುಖ್ಯೋಽರ್ಥಃ**—
ಮುಖ್ಯವಾಗಿರುವ ಅರ್ಥ, ಅಹಂ ಪ್ರತ್ಯಯಕ್ಕೆ ಗುರಿ, ೮೮.

೬೩. **ಮಾಯೋಪಹಿತಮ್**—
ಮಾಯೆಯೆಂಬ ಉಪಾಧಿಯುಳ್ಳ ಚೈತನ್ಯ, ೭೬.

೬೪. **ಮೋಹಃ**—
ಅಜ್ಞಾನ, ೬, ೬೩, ೭೦.

೬೫. **ಲಕ್ಷಣಾ**—
ವಾಚ್ಯಾರ್ಥವು ಹೊಂದದ ಕಡೆಯಲ್ಲಿ ಇರುವ ಶಬ್ದವೃತ್ತಿ ೩೧, ೩೨, ೩೩.

೬೬. **ಲಕ್ಷ್ಯಲಕ್ಷಕತ್ವಮ್**—
ಪದಕ್ಕೂ ಆತ್ಮನಿಗೂ ಇರುವ ಸಂಬಂಧ, ೨೯.

೬೭. **ಲಕ್ಷ್ಯೋಽರ್ಥಃ**—
ವಾಚ್ಯಾರ್ಥವಲ್ಲದ, ನೇರಾಗಿ ಶಬ್ದದಿಂದ ತಿಳಿಯಬಾರದ ಎರಡನೆಯ ಅರ್ಥ, ೨೬, ೨೮.

೬೮. **ಲೋಕವೇದೌ**——
ಶ್ರುತಿಸ್ಮೃತಿಗಳು, ವೈದಿಕಲೌಕಿಕ ವ್ಯವಹಾರಗಳು, ೩೯.

೬೯. **ಲೋಕಸಿದ್ಧಮ್**—
ವೇದವು ತಿಳಿಸದೆ ತಾನೇ ಗೊತ್ತಿರುವ, ೫೪.

೭೦. **ವಾಚ್ಯೋಽರ್ಥಃ**—
ಶಬ್ದಕ್ಕೆ ಮೊದಲೇ ನೇರಾಗಿ ತೋರುವ ಅರ್ಥ, ೨೫, ೨೭.

೭೧. **ವಿದ್ಯಾವಿದ್ಯೇ**—
ಆತ್ಮಜ್ಞಾನಾಜ್ಞಾನಗಳು, ೯೭.

೭೨. **ವಿಧಿಃ**—
ಮಾಡಬೇಕೆಂದು ಹೇಳುವ ವಚನ, ೩೯.

೭೩. ***ವಿಶದವಿಜ್ಞಪ್ತಿಃ, ವಿಶುದ್ಧಚಿದ್ರೂಪಮ್**—
ಶುದ್ಧಚೈತನ್ಯ, ೫೭, ೭೬.

೭೪. **ವಿಶೇಷಣವಿಶೇಷ್ಯತಾ**—
ಸಮಾನಾಧಿಕರಣಶಬ್ದಗಳಲ್ಲಿ ಒಂದು ವಿಶೇಷಣವೂ ಮತ್ತೊಂದು ವಿಶೇಷ್ಯವೂ ಆಗಿರುವದು, ೨೯.

೭೫. **ವಿಶ್ವಮ್**—
ಪ್ರಪಂಚ, ೧೭.

೭೬. ವೃತ್ತಿಃ
ಶಬ್ದದ ವ್ಯಾಪಾರ, ೩೦, ೩೨, ೩೩, ೩೪.

೭೭. ವೇದಃ—
ಋಗ್ವೇದಾದಿಗಳಲ್ಲಿ ಒಂದು, ೩೮, ೪೪, ೪೭, ೪೮.

೭೮. ಶೂನ್ಯಮ್—
ಏನೂ ಇಲ್ಲದ್ದು, ೫೩, ೯೮.

೭೯. *ಶ್ರೀನಿವಾಸಗುರುಭಾನುಃ—
ಶ್ರೀನಿವಾಸಗುರುವೆಂಬ ಸೂರ್ಯ, ೧೫೬.

೮೦. *ಷಟ್ತ್ರಿಂಶತ್ತತ್ತ್ವಾನಿ—
ಶೈವರು ಹೇಳುವ ಮೂವತ್ತಾರು ತತ್ತ್ವಗಳು, ೧೪೧.

೮೧. *ಸಚ್ಚಿದಾನನ್ದಃ—
ಇರವು, ಅರಿವು, ಸುಖ— ಇವುಗಳ ಸ್ವರೂಪವಾದ ಆತ್ಮ, ೭೧.

೮೨. ಸಮುಚ್ಚಯಃ—
ಜ್ಞಾನಕರ್ಮಗಳ ಸೇರುವಿಕೆ, ೬೯.

೮೩. ಸರ್ವಜ್ಞತ್ವಾದಿ—
ತತ್ಪದಕ್ಕೆ ವಾಚ್ಯಾರ್ಥವಾದ ಈಶ್ವರನ ಗುಣ, ೨೭.

೮೪. ಸಾಕ್ಷೀ—
ದೇಹೇಂದ್ರಿಯಾದಿಗಳನ್ನೂ ಜಗತ್ತನ್ನೂ ನೇರಾಗಿ ನೋಡುವ ಪ್ರತ್ಯಗಾತ್ಮ, ೨೬, ೭೧.

೮೫. ಸಾಧನಾನಿ—
ಶಿಷ್ಯಗುಣವನ್ನು ಸಂಪಾದಿಸುವದಕ್ಕೆ ಬೇಕಾದ ಅನುಷ್ಠಾನ, ೩.

೮೬. ಸಾಮಾನಾಧಿಕರಣ್ಯಮ್—
ಬೇರೆಬೇರೆ ವೃತ್ತಿಯ ಪದಗಳು ಒಂದೇ ಅರ್ಥವನ್ನು ಹೇಳುವದು, ೨೯, ೩೦.

೮೭. ಸುಪ್ತಿಃ—
ತನಿನಿದ್ರೆ, ೧೩.

೮೮. ಸ್ವಯಮ್—
ತಾನು, ಆತ್ಮ, ೪.

೮೯. ಸ್ವಯಂಪ್ರಕಾಶಮ್—
ತಾನೇ ಬೆಳಗುವ ಬ್ರಹ್ಮ ಆತ್ಮ ೨೦, ೪೭.

೯೦. ಸ್ವಾತ್ಮನಿರೂಪಣಮ್—
ತನ್ನ ಆತ್ಮನನ್ನು ಗೊತ್ತುಪಡಿಸುವದು, ೩.

# ಸ್ವಾತ್ಮನಿರೂಪಣದಲ್ಲಿ ಉಪಯೋಗಿಸಿರುವ
# ಉಪಮಾನಗಳೂ ದೃಷ್ಟಾಂತಗಳೂ

ಭಾಷ್ಯಕ್ಕೆ ಹೋಲಿಸಬೇಕೆನ್ನುವವರಿಗೋಸ್ಕರ ಈ ಉಪಮಾನಗಳನ್ನು ಇಲ್ಲಿ ಕೊಟ್ಟಿರುತ್ತದೆ. ಇಲ್ಲಿ ಬಲಕ್ಕೆ ಕೊಟ್ಟಿರುವವು ಶ್ಲೋಕಸಂಖ್ಯೆಗಳು. *ಈ ಚಿಹ್ನೆಯು ಆಯಾ ದೃಷ್ಟಾಂತವು ಅಥವಾ ಉಪಮಾನವು ಭಾಷ್ಯದಲ್ಲಿ ಕಾಣಿಸುವದಿಲ್ಲವೆಂಬುದನ್ನು ತಿಳಿಸುವದು.

| | | ಶ್ಲೋಕ ಸಂಖ್ಯೆ |
|---|---|---|
| ೧. | ಸೂರ್ಯನು ಪ್ರಕಾಶ್ಯನಲ್ಲ | ೧೭ |
| ೨. | ಗಂಗೆಯಲ್ಲಿ ಹಳ್ಳಿ* | ೩೩ |
| ೩. | ಕೆಂಪು ಓಡುತ್ತಿದೆ* | ೩೪ |
| ೪. | ಆ ಈ ದ್ವಿಜನು* | ೩೫, ೩೬. |
| ೫. | ಕಟ್ಟಿಗೆಯಿಂದ ಬೆಂಕಿಯನ್ನು ಸುಡುವಂತೆ* | ೪೬ |
| ೬. | ಬೆಂಕಿಯ ಬಿಸಿಬೆಳಕುಗಳಂತೆ | ೫೭ |
| ೭. | ಕಬ್ಬಿಣವು ರಸದಿಂದ ಚಿನ್ನವಾಗುವಂತೆ* | ೫೮ |
| ೮. | ಸೂರ್ಯನು ಹುಟ್ಟಲು ಕತ್ತಲೆ ಹೋಗುವಂತೆ | ೬೬ |
| ೯. | ಹಗ್ಗಕ್ಕೆ ಹಾವಿನ ಸಂಬಂಧದಂತೆ | ೭೨ |
| ೧೦. | ಕಾರಣವಾದ ಮಣ್ಣು | ೭೫ |
| ೧೧. | ಇರುವ ಬೀಜವು ಮೊಳಕೆಯಾಗುವದು* | ೭೭ |
| ೧೨. | ಬಂಜೆಯ ಮಗನು | ೭೮ |
| ೧೩. | ಬಿಸಿಲುಕುದುರೆಯ ನೀರು | ೭೮ |
| ೧೪. | ಚಿನ್ನದಲ್ಲಿ ಒಡವೆಯೆಂಬ ಭ್ರಾಂತಿ | ೮೩ |
| ೧೫. | ಕಬ್ಬಿಣದಲ್ಲಿ ಬೆಂಕಿಯ ಸಂಬಂಧದಿಂದ ಸುಡುವಿಕೆ | ೯೦ |
| ೧೬. | ಬಟ್ಟೆಯಲ್ಲಿ ಚಿತ್ರ* | ೯೫ |